೫೭

ಪ್ರಜಾಭಿಪ್ರಾಯ

ಟಿ. ಎಸ್. ರಾಜಗೋಪಾಲಯ್ಯಂಗಾರ್

ಪ್ರಚಾರ ಪುಸ್ತಕಮಾಲೆ-೫೭

ಪ್ರಜಾಭಿಪ್ರಾಯ

ಟಿ. ಎಸ್. ರಾಜಗೋಪಾಲಯ್ಯಂಗಾರ್

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

೧೯೭೪

ಮೊದಲನೆಯ ಮುದ್ರಣ : ೧೯೫೧
ಎರಡನೆಯ ಮುದ್ರಣ : ೧೯೬೨
ಮೂರನೆಯ ಮುದ್ರಣ : ೧೯೭೪
೫೦೦೦ ಪ್ರತಿಗಳು

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು-೧೨

ಬೆಲೆ : ೨೫ ಪೈಸೆ

ಮುದ್ರಕರು
ವಿಶ್ವನಾಥ ಪ್ರೆಸ್
ಕುರುಬಗೇರಿ, ಮೈಸೂರು

FOREWORD

Public Opinion plays an important part in countries where democracy obtains. If democracy has to survive and lead the world to peace and harmony, the study of Public Opinion-its nature and methods of its formation-is imperative. I am very happy to find that Sri T. S. Rajagopal Iyengar has chosen this subject for the University Extension lectures he delivered at Shimoga and Chikkamagalur. I am sure this well-written book will stimulate the interest of the Public in the rational study of Public affairs.

MYSORE
3rd April 1950

R. KASTURIRAJA CHETTY
VICE-CHANCELLOR

ನಿವೇದನ

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯ ಅಂಗವಾಗಿ ನಾನು ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಲ್ಲಿ ಮಾಡಿದ ಪ್ರಚಾರೋಪನ್ಯಾಸಗಳ ಮುಖ್ಯಾಂಶಗಳು ಈ ಕೈಪಿಡಿಯಲ್ಲಿ ಅಡಕವಾಗಿವೆ. ವಿಷಯವನ್ನು ಕೂಲಂಕಷವಾಗಿ ಎಲ್ಲಾ ದೃಷ್ಟಿಯಿಂದಲೂ ಬರೆದಿರುತ್ತೇನೆಂಬ ಹೆಮ್ಮೆ ನನಗಿಲ್ಲ. ಆದರೆ ಜನಸಾಮಾನ್ಯಕ್ಕೆ ವಿಷಯದ ಸ್ಥೂಲಪರಿಚಯ ಮಾಡಿಕೊಟ್ಟು ಅವರು ಯೋಚಿಸುವ ಹಾಗೆ ಮಾಡಬೇಕೆಂಬುದೇ ಆಕಾಂಕ್ಷೆ.

ಇದೇ ವಿಷಯವಾಗಿ ವಿಶ್ವವಿದ್ಯಾನಿಲಯದ ಪ್ರೋ–ಛಾನ್ಸಲರಾಗಿದ್ದ ದಿವಂಗತ ಡಾ|| ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಾನು ಉಪನ್ಯಾಸ ಕೊಟ್ಟಾಗ ಪ್ರಚಾರೋಪನ್ಯಾಸ ಮಾಲೆಯಲ್ಲಿ ಇದನ್ನು ಅಚ್ಚು ಹಾಕಿಸಬೇಕೆಂದು ಒತ್ತಾಯಪಡಿಸಿ ಉತ್ತೇಜನ ಕೊಟ್ಟದ್ದಕ್ಕಾಗಿ ಅವರಿಗೂ ಮತ್ತು ಆಂಗ್ಲಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡಲು ಬಹಳವಾಗಿ ನೆರವಾದ ನನ್ನ ಮಿತ್ರ ಶ್ರೀಮಾನ್ ಸೋಸಲೆ ರಾಜಗೋಪಾಲಯ್ಯಂಗಾರ್ಯರಿಗೂ ನನ್ನ ಅನಂತ ವಂದನೆಗಳು.

ಮೈಸೂರು **ಟಿ. ಎಸ್. ರಾಜಗೋಪಾಲಯ್ಯಂಗಾರ್**

೨೬–೪–೧೯೫೦

ವಿಷಯಸೂಚಿಕೆ

೧. ಪ್ರಜಾಭಿಪ್ರಾಯದ ಸ್ವರೂಪ

ವಾದಗ್ರಸ್ತ ವಿಷಯವನ್ನು ಕುರಿತು ಬರುವ ಹೇಳಿಕೆಗೆ ಅಭಿಪ್ರಾಯವೆಂದು ಹೆಸರು. ಇದೊಂದು ರೀತಿಯಾದ ನಂಬಿಕೆ. ಬರಿ ಕೋರಿಕೆಗಿಂತಲೂ, ಭಾವನೆಗಿಂತಲೂ ಮೇಲಾದದ್ದು; ಪ್ರಮಾಣಸಹಿತವಾದ ನಿಶ್ಚಿತಜ್ಞಾನಕ್ಕಿಂತ ಕೀಳಾದದ್ದು. ಸಮಾಜದ ವ್ಯಕ್ತಿಗಳಲ್ಲಿರುವ ಬಗೆಬಗೆಯಾದ ಅಭಿಪ್ರಾಯಗಳ ಪರಸ್ಪರ ಪ್ರತಿಕ್ರಿಯೆಯಿಂದ ಪ್ರಜಾಭಿಪ್ರಾಯವೇ ರೂಪಗೊಳ್ಳುತ್ತದೆ. ಬಹುಸಂಖ್ಯೆಯ ಜನರ ಅಭಿಪ್ರಾಯವೇ ಜನಾಭಿಪ್ರಾಯ. ಹದಿನೈದು ಜನರಲ್ಲಿ ಹತ್ತು ಜನ ತಮಗೆ ಸಮಂತಾವಾದವು ಇಷ್ಟವೆಂದು ಹೇಳಿದರೆ, ಆಗ ಅವರ ಅಭಿಪ್ರಾಯವನ್ನು ಜನಾಭಿಪ್ರಾಯವೆಂದು ಪರಿಗಣಿಸಬಹುದು.

ಜನಾಭಿಪ್ರಾಯವೆಂದು ಸಾಧಾರಣವಾಗಿ ಯಾವುದನ್ನು ನಾವು ಪರಿಗಣಿಸುತ್ತೇವೋ ಅದನ್ನು ವಿಮರ್ಶೆಮಾಡುವವರು, ಅದರಲ್ಲಿ ಜನವೂ ಇಲ್ಲ, ಅಭಿಪ್ರಾಯವೂ ಇಲ್ಲವೆಂದು ಟೀಕೆ ಮಾಡುತ್ತಾರೆ. ಜನರಲ್ಲಿ ಪ್ರಚಲಿತವಾಗಿರುವ ಎಷ್ಟೋ ಅಭಿಪ್ರಾಯಗಳು ಸಮಾಜದ ಯಾವುದೋ ಒಂದು ಸ್ವಾರ್ಥದೃಷ್ಟಿಯ ವರ್ಗಕ್ಕೆ ಸೇರಿರುತ್ತವೆ; ಅಥವಾ ಅಲ್ಪಸಂಖ್ಯೆಯ ಜನರದಾಗಿರುತ್ತದೆ; ಇಲ್ಲವೇ ಅತಿಪ್ರಮುಖರಾದ ಕೆಲವು ನಾಯಕರ ಅಭಿಪ್ರಾಯ ಮಾತ್ರ ಆಗಿರುತ್ತದೆ. ಜನಸಮೂಹ ಇಂತಹ ವಿಷಯಗಳಲ್ಲಿ ಉದಾಸೀನವಾಗಿಯೋ ತಿಳುವಳಿಕೆಯಿಲ್ಲದೆಯೋ, ತಪ್ಪು ತಿಳಿದುಕೊಂಡೋ ಇದ್ದುಬಿಡುತ್ತದೆ. ಈ ಅರ್ಥದಲ್ಲಿ

ಜನಾಭಿಪ್ರಾಯ ನಿಜವಾದ ಜನಾಭಿಪ್ರಾಯವಾಗದೆ ಇರಬಹುದು.

ಜನಾಭಿಪ್ರಾಯವೆಂಬುದರಲ್ಲಿ ಬಹುಭಾಗ ನಿಜವಾಗಿ ಅಭಿಪ್ರಾಯವೇ ಆಗಿರುವುದಿಲ್ಲ. ಏಕೆಂದರೆ, ಅದರ ಹಿಂದೆ ವಿಸ್ತೃತವೂ, ನಿರ್ದಿಷ್ಟವೂ, ತರ್ಕಬದ್ಧವೂ ಆದ ಆಲೋಚನೆ ಸಾಕಷ್ಟು ಇರುವುದಿಲ್ಲ. ಹಲವು ಅಭಿಪ್ರಾಯಗಳು ಪೂರ್ವಗ್ರಹಿಕೆಗಳೋ, ಮೂಢನಂಬಿಕೆಗಳೋ, ಆತುರದ ತೀರ್ಮಾನಗಳೋ, ಸಾಂಪ್ರದಾಯಿಕ ತತ್ವಗಳೋ ಆಗಿರುತ್ತವೆ. ನಿಶ್ಚಿತಾಭಿಪ್ರಾಯಕ್ಕೆ ಬರಲು ಬೇಕಾದ ಅಭಿಲಾಷೆಯಾಗಲಿ, ಆಲೋಚನೆಯ ಕಷ್ಟಸಹಿಷ್ಣುತೆಯಾಗಲಿ ಅನೇಕರಿಗಿರುವುದಿಲ್ಲ. ಇತರರು ಹೂಡಿದ ಅಭಿಪ್ರಾಯಗಳನ್ನೇ ಅನುಕರಣೆ ಮಾಡಿಕೊಂಡು ಅವನ್ನು ತಮ್ಮದೆಂದೇ ವಾದಿಸುತ್ತಾರೆ. ತಮ್ಮದೇ ಆದ ಅಭಿಪ್ರಾಯವನ್ನು ಹೊಂದಲು ಬೇಕಾದ ಜ್ಞಾನವೂ, ಹೊತ್ತೂ ತಮಗೆ ಇಲ್ಲದಿರುವುದರಿಂದಲೇ ಇತರರ ಅಭಿಪ್ರಾಯವನ್ನು ಅವರು ಹೀಗೆ ಅಂಗೀಕರಿಸುವುದು. ಆದುದರಿಂದ ಜನಾಭಿಪ್ರಾಯವು ಸಾಧಾರಣವಾಗಿ ರಾಜಕೀಯ ನಾಯಕರ ನಿಸ್ವಾರ್ಥತೆಯನ್ನೂ ಅನುಭವವನ್ನೂ ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಸುಸಂಘಟಿತವೂ ವಾಗ್ಬಲವುಳ್ಳದೂ ಆದ ಅಲ್ಪಸಂಖ್ಯಾತ ಪಕ್ಷಗಳು ತಮ್ಮ ಅಭಿಪ್ರಾಯವೇ ಬಹುಸಂಖ್ಯಾತ ಅಭಿಪ್ರಾಯವೆಂದು ತೋರಿಸುವ ಸಂಭವವೂ ತಪ್ಪಿದ್ದಲ್ಲ.

ಜನಾಭಿಪ್ರಾಯವು ಪರಿಣಾಮಕಾರಿಯಾಗಿಯೂ ಸುಸ್ಥವೂ ಆಗಬೇಕಾಗಿದ್ದರೆ ಅದು ಕೆಲವು ನಿಯಮಗಳಿಗೆ ಬದ್ಧವಾಗಿರಬೇಕು.

೧) ಜನರು ಬುದ್ಧಿವಂತರಾಗಿದ್ದು ಜನತೆಯು ಆಗು

ಹೋಗುಗಳ ವಿಷಯದಲ್ಲಿ ಎಚ್ಚರಿಕೆಯಿಂದ ಪರಿಶೀಲಿಸುತ್ತಿರ ಬೇಕು.

(೨) ಜನರಲ್ಲಿ ನಿಕಟವಾದ ಸಮರಸತೆ ಇದ್ದು, ಸಾಮೂಹಿಕ ಹಿತದೃಷ್ಟಿ ಪ್ರಮುಖವಾಗಿರಬೇಕು. ಏಕೆಂದರೆ ಜಾತಿ, ಕುಲ, ಮತಧರ್ಮಗಳ ಸ್ವಾರ್ಥ ಸಾರ್ವತ್ರಿಕವಾಗಿ ಯೋಚಿಸಬೇಕಾದ ವಿಷಯಗಳ ಮಧ್ಯೆ ಅಡ್ಡಿ ಆತಂಕಗಳನ್ನು ತಂದೊಡ್ಡಬಾರದು.

ಜನರಿಗೆ ತಿಳಿವಳಿಕೆಯನ್ನು ಕೊಟ್ಟು ಅವರಮೇಲೆ ಪ್ರಭಾವವನ್ನು ಬೀರುವ ಪ್ರಚಾರ ವಿಧಾನಗಳು ಪ್ರಾಮಾಣಿಕತೆಯಿಂದ ಕೂಡಿದ್ದು, ಜನರನ್ನು ಮೋಸಗೊಳಿಸುವುದಕ್ಕಾಗಲಿ ಯಾವ ಸ್ವಾರ್ಥ ಸಹಿತ ಪಕ್ಷದ ಹಿತವನ್ನು ಮುಂದುವರಿಸುವುದಕ್ಕಾಗಲಿ ಉಪಯೋಗವಾಗಬಾರದು.

'ಪ್ರಜಾಭಿಪ್ರಾಯ' (Public Opinion) ಎಂಬ ಪರಿಭಾಷೆಯ ಶಬ್ದ ಮೊದಲು ನಿರ್ಮಿತವಾದದ್ದು ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಅದರಿಂದೀಚೆಗೆ ಈ ಶಬ್ದ ಪ್ರಪಂಚದ ಹಲವಾರು ಭಾಗಗಳಲ್ಲಿ ಪ್ರಚಾರಕ್ಕೆ ಬಂತು. ಅದೊಂದು ಶಕ್ತಿಯಾಗಿ ಪರಿಣಮಿಸಿ ವಿಶ್ವದ ನಾನಾ ಕಡೆಗಳಲ್ಲಿ ಹದಿನೆಂಟನೆಯ ಶತಮಾನದಿಂದ ಮುಂಪೆ ದನಿಗೂಡುತ್ತಾ ಬಂತು.

ಕೈಗಾರಿಕೆಯಲ್ಲಿ ಮೂಡಿದ ಕ್ರಾಂತಿ ಪಟ್ಟಣಗಳನ್ನೂ ನಗರಗಳನ್ನೂ ಹೆಚ್ಚಾಗಿ ಸೃಷ್ಟಿಸಿತು. ಯಂತ್ರಯುಗ ಉದಯವಾಯಿತು. ಹಳ್ಳಿಯ ಬಾಳು ನಿಸ್ಸತ್ವವಾಯಿತು. ಜನಜೀವನ ಸಂಗ್ರಾಮದಲ್ಲಿ ಮುಳುಗಿತು. ಹೊಟ್ಟೆಪಾಡಿಗಾಗಿ ಬಹು ಸಂಖ್ಯೆಯಲ್ಲಿ ಜನ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ

ತುಂಬುತ್ತ ಬಂತು. ಜನಸಂದಣಿ ಅಧಿಕಗೊಂಡಂತೆ ಪರಸ್ಪರ ಬಳಕೆಯೂ ಹೆಚ್ಚಿತು. ಅಭಿಪ್ರಾಯ ವಿನಿಮಯವೂ ಪ್ರಸಾರಗಳೂ ಮೊದಲಿಟ್ಟವು. ಕ್ರೈಸ್ತ ಧರ್ಮ ಸುಧಾರಣೆ (Reformation), ಪ್ರಾಟೆಸ್ಟೆಂಟ್ ಧರ್ಮಪಂಥದ ಉದಯ ಮತ್ತು ಏಳಿಗೆಗೆ, ಕಲೆ, ಸಾಹಿತ್ಯ ಮತ್ತು ವಿಜ್ಞಾನ ಇವುಗಳ ಬೆಳವಣಿಗೆ (Renaissance) ಎಂತು ೧೮ನೇ ಶತಮಾನದಲ್ಲಿ ಹರೆಡಿದುವೋ ಅಂತೆಯೇ ೧೯ನೇ ಶತಮಾನದಲ್ಲಿ ರಾಷ್ಟ್ರೀಯ ಮನೋಭಾವನೆಯೂ (Nationalism) ವಿಮರ್ಶಾಸಿದ್ಧ ಬುದ್ಧಿಯೂ (Rationalism) ಮೂಡಿದವು. ಇವನ್ನನುಸರಿಸಿದ ಜನಾಭಿಪ್ರಾಯವೂ ರೂಪುಗೊಂಡು ಶಕ್ತಿಯುತವಾಗಿ ಪರಿಣಮಿಸಿತು.

೧೭ ಮತ್ತು ೧೮ನೇ ಶತಮಾನಗಳಲ್ಲಿ ಪ್ರಪಂಚದ ನಾನಾ ಎಡೆಗಳಲ್ಲಿ ಭಾಷಣ ಸ್ವಾತಂತ್ರ್ಯಕ್ಕೂ ಅಭಿಪ್ರಾಯ ಸ್ವಾತಂತ್ರ್ಯಕ್ಕೂ ಜನ ಹೂಡಿದ ಹೋರಾಟದ ಪರಿಣಾಮವಾಗಿ ೧೯ನೇ ಶತಮಾನದಲ್ಲಿ ಪ್ರಜಾಪ್ರಭುತ್ವದ ಉದಯವಾಯಿತು. ಮತದಾನಪದ್ಧತಿ ಹಾಗೂ ಪ್ರಾಪ್ತವಯಸ್ಕರ ಮತಾಧಿಕಾರ, ಒತ್ತಾಯದ ಪ್ರಾಥಮಿಕ ಶಿಕ್ಷಣ, ಸಂಚಾರ ಸಮಾಚಾರ ಸೌಕರ್ಯ, ವೃತ್ತಪತ್ರಿಕಾ ಪ್ರಚಾರ—ಇವೆಲ್ಲಾ ಜನಾಭಿಪ್ರಾಯ ರೂಪಿಸುವ ವಿವಿಧ ವಾಹಿನಿಗಳಾದವು.

ನಾವಿಂದು ವಿಜ್ಞಾನ ಯುಗದ ಜೀವಿಗಳು. ವಿಶ್ವದ ಮಾನವ ಜನತೆಯನ್ನು ಒಂದಾಗಿರಿಸುವ ವಿಜ್ಞಾನಸಾಧನೆಗಳೆಷ್ಟೋ ಮುಂಬರಿದಿವೆ ಈ ಯುಗದಲ್ಲಿ. ಕಾಲ ಮತ್ತು ದೂರಗಳ ಅಂತರಗಳನ್ನು ಜಯಿಸುವ ಟೆಲಿಗ್ರಾಫ್, ವೈರ್‌ಲೆಸ್, ರೇಡಿಯೋ, ರೈಲು, ಜಹಜು, ವಿಮಾನ ಮೊದಲಾದುವು ಅಭಿಪ್ರಾಯ ನಿರೂಪಣೆಗೂ, ಅದರ ವಿನಿಮಯಕ್ಕೂ,

ಪ್ರಸಾರಕ್ಕೂ ಅತ್ಯಮೂಲ್ಯ ಸಾಧನಗಳಾಗಿವೆ. ಇವುಗಳ ಜೊತೆಗೆ ಎಂದಿನಂತೆಯೇ ಸಭೆಗಳೂ ಉಪನ್ಯಾಸ ವೇದಿಕೆಗಳೂ ಜನಾಭಿಪ್ರಾಯವನ್ನು ರೂಪಿಸುವ ಮತ್ತು ಪ್ರಕಟಿಸುವ ಕೇಂದ್ರಗಳಾಗಿ ಉಳಿದಿವೆ. ಇಂತು ಜನಾಭಿಪ್ರಾಯ ಇಂದು ಹರಡುತ್ತ ಬರುತ್ತಿದೆ.

ಈ ಯುಗ ಪ್ರಜಾಪ್ರಭುತ್ವದ ಯುಗವಷ್ಟೆ. ವ್ಯಕ್ತಿಯ ಪೂರ್ಣಹಕ್ಕು ಪ್ರಜಾಪ್ರಭುತ್ವದ ಸಾರಸರ್ವಸ್ವ. ರಾಷ್ಟ್ರದ ಒಡೆತನ ಅಲ್ಲಿನ ಪ್ರಜಾವರ್ಗಕ್ಕೆ ಒಟ್ಟಾಗಿ, ಅಖಂಡವಾಗಿ, ಅಭಿನ್ನವಾಗಿ ಸೇರಿದ್ದು. ತನ್ನ ದೇಶಕ್ಕೆ ಬೇಕಾದುದೇನು, ಅದನ್ನು ಸಾಧಿಸುವ ಬಗೆ ಹೇಗೆ, ಯಾರ ಕೈಯಲ್ಲಿ ಸರ್ಕಾರದ ಆಡಳಿತಸೂತ್ರವಿರಬೇಕು ಎಂಬ ಅಂಶಗಳನ್ನು ಪ್ರತಿ ಪ್ರಜೆಯೂ ಮಥಿಸಿ, ಮನನಮಾಡಿ, ವಾದಹೂಡಿ, ತನ್ನದೇ ಆದ ಒಂದು ದೃಷ್ಟಿಯನ್ನು, ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾದುದು ಅವನ ಕರ್ತವ್ಯ. ಈ ಬಗೆಯಲ್ಲಿ ಪ್ರಜಾವರ್ಗ ನೈಜವಾಗಿ ಜಿಜ್ಞಾಸೆ ಮಾಡಿ ತತ್ಪರಿಣಾಮವಾಗಿ ಹೊರಹೊಮ್ಮಿದ ಅಭಿಪ್ರಾಯವೇ ಜನವರ್ಗದ ಅಭಿಪ್ರಾಯ. ಅದೇ ನಿಜವಾದ ಜನಾಭಿಪ್ರಾಯ. ಹೀಗಿರಬೇಕಾದದ್ದು ನ್ಯಾಯ, ಧರ್ಮ. ಆದರೆ ಇದು ತತ್ವದ ಮಾತು, ಸಿದ್ಧಾಂತದ ಸತ್ವ ಅಷ್ಟೆ; ಆಚರಣೆಯಲ್ಲಿ ಮಾತ್ರ ಇಂತಿಲ್ಲ.

ನಡೆವಳಿಕೆಯಲ್ಲಿ ಜನಾಭಿಪ್ರಾಯ ಈ ಬಗೆಯಲ್ಲಿ ಹುಟ್ಟಿತೇ, ನಡೆದುಬಂದಿತೇ ಅಥವಾ ನಡೆಯುತ್ತಿದೆಯೇ? ಎಲ್ಲಿ ಬಂತು! ಜನಸಾಮಾನ್ಯ ಜಿಜ್ಞಾಸೆ ಮಾಡಲು ಯತ್ನಿಸುವುದೇ ಇಲ್ಲ. ಅವರಿಗೆ ಮನಸ್ಸೂ ಇಲ್ಲ, ವೇಳೆಯೂ ಇಲ್ಲ. ಅಜ್ಞಾನದಿಂದಲೋ, ಔದಾಸೀನದಿಂದಲೋ, ಅವಿದ್ಯೆಯಿಂದಲೋ,

ಅಶಕ್ತಿ ಅಸಾಮರ್ಥ್ಯತೆಗಳಿಂದಲೋ, ಜನ ಯೋಚಿಸಲೆತ್ನಿಸುವುದು ಅತಿವಿರಳ. ಹಾಗೆ ಒಂದು ವೇಳೆ ಯೋಚಿಸಿದರೂ, ತಿಳಿದುದನ್ನು ಧೈರ್ಯವಾಗಿ ಹೇಳುವ ದಿಟ್ಟತನತಾನೇ ಅನೇಕರಿಗೆಲ್ಲಿ ಬಂತು? ಆರ್ಥಿಕ ಅಸಮಾನತೆ ಅಧೀನತೆಗಳಲ್ಲಿ ಬಳಲುತ್ತಿರುವ ಜನ, ತೊಳಲುತ್ತಿರುವ ರಾಷ್ಟ್ರ, ಯಾವ ಬಗೆಯಲ್ಲಿ ತಾನೆ ತನ್ನ ಪೂರ್ಣ ವ್ಯಕ್ತಿತ್ವವನ್ನು ಉಳಿಸಿಕೊಂಡು ತಲೆಯೆತ್ತಿ ನಿಲ್ಲಲಾದೀತು ?

ಜನಾಭಿಪ್ರಾಯ ನೈಜರೀತಿಯಲ್ಲಿ ಹೊಳೆತು ವ್ಯಕ್ತವಾಗದಿರಲು ಇನ್ನೂ ಅನೇಕ ಕಾರಣಗಳಿವೆ. ವ್ಯಕ್ತಿಸಾಮಾನ್ಯನಲ್ಲಿ ಮೂಡುವ ಅಭಿಪ್ರಾಯ ಅನೇಕ ಪ್ರಭಾವಗಳ ಪರಿಣಾಮ. ಆತನ ಶಿಕ್ಷಣ ಮಟ್ಟ, ಮನಸ್ಸಿನ ಶಕ್ತಿ, ನಂಬಿಕೆ, ಸಾಮಾಜಿಕ ಅಥವಾ ಧಾರ್ಮಿಕ ಅನುಬಂಧ, ಸ್ವಹಿತ ದೃಷ್ಟಿ, ಇವುಗಳ ಪ್ರಭಾವಕ್ಕನುಗುಣವಾದ ಒಂದು ಭಾವನೆ ವ್ಯಕ್ತಿಯ ಮನಸ್ಸಿನಲ್ಲಿ ಪೂರ್ವಭಾವಿಯಾಗಿಯೇ ಒಂದು ವಿಷಯದಲ್ಲಿ ಮೂಡುವುದೇನೂ ಅಚ್ಚರಿಯಲ್ಲ. ಅಂದರೆ, ವ್ಯಕ್ತಿಯ ಮನಸ್ಸಿಗೆ ನಾಟುವ ಮತ್ತು ಹೊಳೆಯುವ ಎಣಿಕೆ ವಿಚಾರ ಪೂರಿತವಲ್ಲ. ವಿಮರ್ಶಸಿದ್ಧವೂ ಅಲ್ಲ. ಉದಾಹರಣೆಗೆ, ಭಾರತ ತನ್ನ ಆರ್ಥಿಕ ವ್ಯವಹಾರದಲ್ಲಿ ಪೌಂಡಿನ ಮೌಲ್ಯದ ಇಳಿತಾಯದ ನೀತಿಗನುಗುಣವಾದ ವಿನಿಮಯ ಪದ್ಧತಿಯನ್ನನುಸರಿಸಿತಷ್ಟೆ. ಈ ವಿನಿಮಯ ನೀತಿಯ ವಿಷಯವಾಗಿ ಪ್ರಜಾಭಿಪ್ರಾಯ ಮೂಡಿದುದೆಂತು ? ಈ ಅಂಶವನ್ನು ಕುರಿತು ವ್ಯಕ್ತಿಯ ಮನಸ್ಸಿನಲ್ಲಿ ಒಂದು ಭಾವನೆ—ಅದು ಈ ನೀತಿಗೆ ಒಪ್ಪಿಗೆ ಇರಬಹುದು ಅಥವಾ ವಿರೋಧ ಇರಬಹುದು—ತಲೆದೋರಿತಷ್ಟೆ. ಇದು ವಿಚಾರದಿಂದ ಉದಯಿಸಿದ ಎಣಿಕೆಯಲ್ಲ. ಮನಸ್ಸಿನಲ್ಲಿ

ಹೊಳೆದ ಒಂದು ಇಂಗಿತ. ಈ ಅಂಶವನ್ನು ಕುರಿತು ಭಾಷಣಗಳಾದುವು, ಲೇಖನಗಳು ಹೊರಬಿದ್ದವು. ಅನೇಕ ವೃತ್ತಪತ್ರಿಕೆಗಳೂ ಮಾಸಪತ್ರಿಕೆಗಳೂ ವಿಮರ್ಶೆಮಾಡಿದವು. ಆಸಕ್ತಿಯಿದ್ದ ಅನೇಕರು ಇವುಗಳನ್ನೆಲ್ಲಾ ಓದಿದರು. ಅವರ ಮನಸ್ಸಿನಲ್ಲಿ ಭಾರತದ ಹಣ ವಿನಿಮಯದ ವಿಷಯವಾಗಿ ಒಂದು ಅಭಿಪ್ರಾಯ ವ್ಯಕ್ತಪಟ್ಟಿತು. ಇಂತು ವ್ಯಕ್ತಗೊಂಡ ಅಭಿಪ್ರಾಯ ಸ್ವೈಜವಾದ ಅಭಿಪ್ರಾಯವಲ್ಲ. ಏಕೆಂದರೆ ಸರಿಯಾದ ಆಲೋಚನೆಯಿಂದ ಮತ್ತು ವಿಮರ್ಶೆಯಿಂದ ಈ ಅಭಿಪ್ರಾಯವು ಸಿದ್ಧಗೊಂಡಿಲ್ಲ.

ಸಾಮಾನ್ಯ ವ್ಯಕ್ತಿಯಲ್ಲಿರುವ ಒಂದು ಸಂಕುಚಿತ ಸ್ವಭಾವವೆಂದರೆ, ಒಂದು ವಿಷಯದಲ್ಲಿ ತನ್ನ ಮನಸ್ಸಿನಲ್ಲಿ ಹೊಳೆದ ಭಾವನೆಯೇ ಸರಿಯಾದುದೆಂದು ತಿಳಿಯುವುದು. ಅವನು ಮನನಮಾಡುವ ಅಂಶಗಳೂ ಹೂಡುವ ವಾದವೂ ಪೊಳ್ಳು; ವಿಚಾರಪೂರಿತವಲ್ಲ. ಪ್ರತಿ ವ್ಯಕ್ತಿಯೂ ತನ್ನ ನಂಬುಗೆಗೆ ಅನುಗುಣವಾಗಿ, ತನ್ನ ಮೂಗಿಗೆ ನೇರವಾಗಿ, ನೋಡುವುದು ಸಹಜವಾಗಿದೆ. ಒಳಹೊಕ್ಕು ವಿಮರ್ಶಿಸಿ, ವಿಚಾರಿಸಿ, ಒಂದು ತೀರ್ಮಾನಕ್ಕೆ ಬರುವಷ್ಟು ತಾಳ್ಮೆಯೂ ಇಲ್ಲ, ವೇಳೆಯೂ ಇಲ್ಲ, ಶಕ್ತಿಯೂ ಇಲ್ಲ ಜನಕ್ಕೆ.

ರಾಜಕೀಯ ವಿಷಯವೊಂದೇ ಏಕೆ, ಆರ್ಥಿಕ ಮತ್ತು ಸಾಮಾಜಿಕ ವಿಷಯದಲ್ಲೂ ಜನಾಭಿಪ್ರಾಯದ ಹಣೆಬರಹ ಇಷ್ಟೆ. ಅನೂಚಾನವಾಗಿ ಬಂದುದಕ್ಕೆ ಶರಣು ಹೋಗುವ ಮನೋಭಾವ ಜನರ ಪ್ರಗತಿಮಾರ್ಗದಲ್ಲಿರುವ ಒಂದು ಅಡ್ಡಗೋಡೆ. ಈ ಅಡ್ಡಗೋಡೆಯನ್ನುರುಳಿಸುವ ಆಯುಧ ಜ್ಞಾನಶಕ್ತಿ. ಆದರೆ ಜನಸಾಮಾನ್ಯರಲ್ಲಿ ಈ ಶಕ್ತಿ ಬಹು ಕಡಮೆ. ಪ್ರಭಾವಶಾಲಿಯಾದ ನಾಯಕನೊಬ್ಬನ ಅಥವಾ ಪಂಗಡ

ಒಂದರ ಅಭಿಪ್ರಾಯವನ್ನಂಗೀಕರಿಸುವುದು ಜನರಲ್ಲಿ ಸಾಮಾನ್ಯವಾಗಿ ಕಂಡುಬಂದಿರುವ ಪದ್ಧತಿ. ಪ್ರತಿ ಅಂಶವನ್ನೂ ತಾನು ತನ್ನ ಆಲೋಚನಾಶಕ್ತಿಯಿಂದ ವಿಚಾರಿಸಿ, ವಾದಿಸಿ, ನಿರ್ಧಾರವಾದ ಅಭಿಪ್ರಾಯಕ್ಕೆ ಬರಬೇಕೆಂಬುದರ ಅರಿವು ಜನಸಾಮಾನ್ಯರಲ್ಲಿಲ್ಲ. ಅನ್ಯರ ಭಾವನೆ ನಂಬಿಕೆಗಳನ್ನು ವಿಚಾರ ಮಾಡದೆ, ಬೆಲೆ ಕಟ್ಟದೆ, ನಂಬಿ, ಅದನ್ನೇ ಅಸ್ಪಷ್ಟ ಪದಗಳನ್ನುಪಯೋಗಿಸಿದ ವಾದಸರಣಿಯಿಂದ ಅಭಿಪ್ರಾಯವೆಂದು ಪ್ರತಿಪಾದಿಸುವ "ಅಲ್ಪವಿದ್ಯಾ ಮಹಾಗರ್ವಿ"ಗಳು ಹಲಕೆಲವರಿದ್ದಾರೆ ಸಮಾಜದಲ್ಲಿ. ಇದೆಂತಹ ಜನಾಭಿಪ್ರಾಯ? ಸಾಲದುದಕ್ಕೆ ಒಂದು ಅಭಿಪ್ರಾಯದ ವಿಷಯವಾಗಿ ಅನ್ಯರ ವಾದಗಳಿಂದ ಉದ್ರೇಕಗೊಳ್ಳುವುದಾಗಲೀ ಹೆಮ್ಮೆಯಿಂದ ಕೂಡಿರುವುದಾಗಲೀ, ತೃಪ್ತಿ ಸಮಾಧಾನ ಹೊಂದುವುದಾಗಲೀ ವ್ಯಕ್ತಿಯ ಸ್ವಭಾವಜನ್ಯಗುಣವಾಗಿದೆ. ಇದರ ಪರಿಣಾಮವೇನು?—ಮನುಷ್ಯನನ್ನು ವಿಚಾರ ಸರಣಿಯಿದ ದೂರ ಒಯ್ದಿರುವುದೇ ಆಗಿದೆ.

ಇವೆಲ್ಲಕ್ಕಿಂತ ಮಿಗಿಲಾದುದು ಇನ್ನೊಂದು. ಜನಾಭಿಪ್ರಾಯಕ್ಕೆ ಪ್ರಜಾಪ್ರಭುತ್ವದಲ್ಲಿ ಎಂತಹ ಸ್ಥಾನವಿರಬೇಕೆಂಬುದರ ತಿಳವಳಿಕೆಯಾದರೂ ಉಂಟೇನು ಜನಕ್ಕೆ?—ಅದೂ ಇಲ್ಲ. ಹೋಗಲಿ, ಇಷ್ಟು ಪ್ರಮುಖವಾದ ಜನಾಭಿಪ್ರಾಯಕ್ಕೆ ಸರಿಯಾದ ಬೆಲೆಯನ್ನು ಇನ್ನು ಮುಂದಾದರೂ ಏರ್ಪಡಿಸುವ, ಅದಕ್ಕಾಗಿ ಪ್ರಯತ್ನಿಸುವ ಎಂಬುದಾದರೂ ಉಂಟೇ ಎಂದು ನೋಡಿದರೆ, ಅಂಥ ಭಾವನೆಯೂ ಇಲ್ಲ. ಪ್ರಯತ್ನವೂ ಇಲ್ಲ. ಇದು ಸ್ಪಷ್ಟವಾಗಿದೆ ಇಂದಿನ ಸಮಾಜದಲ್ಲಿ.

ವ್ಯಕ್ತಿಯ ಅಭಿಪ್ರಾಯಕ್ಕೆ ಬೆಲೆ ಕೊಡುವಾಗ ಮತ್ತೊಂದು

ವಿಷಯವನ್ನು ಗಮನದಲ್ಲಿಡಬೇಕು. ಪ್ರತಿಯೊಬ್ಬನೂ ತನ್ನ ಮತ್ತು ತನಗೆ ಬೇಕಾದವರ ಅಭಿಪ್ರಾಯದ ವಿಷಯದಲ್ಲಿ ಹೆಚ್ಚು ಲವಲವಿಕೆ ಮತ್ತು ಆಸಕ್ತಿ ತೋರುತ್ತಾನೆ. ತನ್ನ ಸ್ನೇಹಿತರೂ ಪರಿಚಯಸ್ಥರೂ ವ್ಯಕ್ತಪಡಿಸಿದ ಅಭಿಪ್ರಾಯ, ಅಮೃತಂಪತೆ ಸವಿ; ಇತರರು ಮುಂದಿಟ್ಟ ಅಭಿಪ್ರಾಯ, ಅದು ಎಷ್ಟೇ ವಿಚಾರ ಸಿದ್ಧವಾಗಿರಲಿ ಅಂಗೀಕಾರಯೋಗ್ಯವಲ್ಲ. ಇದು ಸಾಮಾನ್ಯ ವ್ಯಕ್ತಿಯ ಸ್ವಭಾವ. ಸರಿಯಾಗಿ ನುರಿತ ಕರ್ತವ್ಯನಿಷ್ಠ ವ್ಯಕ್ತಿಯ ರೀತಿನೀತಿಗಳು ಇಂತಲ್ಲ. ಅವನು ತನ್ನ ಅಭಿಪ್ರಾಯವನ್ನು ಹೊರಗೆಡುವ ಮುನ್ನ ಅದರ ವಿಷಯವಾಗಿ ಚೆನ್ನಾಗಿ ಯೋಚಿಸಿ ನೈಜವಾದ ಅಭಿಪ್ರಾಯವನ್ನು ರೂಪಿಸಿಕೊಳ್ಳುವನು.

ಇಂದಿನ ಪ್ರಜಾಪ್ರಭುತ್ವದ ಯುಗದಲ್ಲಿ ಸರ್ಕಾರ ಏರ್ಪಡುವುದೂ, ಆಡಳಿತ ನಡೆಯುವುದೂ, ಪ್ರಜಾವರ್ಗದ ಸದಭಿಪ್ರಾಯಗಳಿಗನುಗುಣವಾಗಿ. ಅಂದರೆ, ಜನಾಭಿಪ್ರಾಯ ನೈಜವಾದಂದು ಮಾತ್ರ ಪ್ರಜಾಸತ್ತೆಯೂ ನೈಜವಾಗಿ ಬೆಳವಣಿಗೆ ಹೊಂದುವುದೆಂದಾಯಿತು. ಪ್ರಜಾಸತ್ತೆ ಸತ್ವಶಾಲಿಯಾದುದಾಗಿರಬೇಕಾದರೆ ಭಾವನೆಗಳ ಮತ್ತು ಅನುಭವಗಳ ವಿನಿಮಯ (Exchange of ideas and experiences) ಅತ್ಯಗತ್ಯ. ಆದುದರಿಂದ, ರಾಷ್ಟ್ರದಲ್ಲಿ ಸರಿಯಾದ ಜನಾಭಿಪ್ರಾಯ ಮೂಡಿ ಪ್ರತಿಬಿಂಬಿತವಾಗುವಂತೆ ಕೆಲಸಮಾಡಬೇಕಾದುದು ಸರ್ಕಾರದ ಆಶಯವೂ ಆಗಿರಬೇಕು.

ಒಂದು ರಾಷ್ಟ್ರದ ಉಳಿವು ಆ ರಾಷ್ಟ್ರದ ಎಲ್ಲಾ ಜನರಲ್ಲಿ ಹುದುಗಿರುವ ಭಾವನೆಯ ತಳಹದಿಯ ಮೇಲೆ ನಿಂತಿದೆ. ಪ್ರತಿ ವ್ಯಕ್ತಿಯೂ ಸಮಾಜದ ಹಿತವನ್ನು ಎಷ್ಟು ಪ್ರಮಾಣದಲ್ಲಿ ಪ್ರತಿಬಿಂಬಿಸುತ್ತಾನೋ ಅದರಮೇಲೆ ನಿಂತಿದೆ ಜನತೆಯ

ಬೆಳವಣಿಗೆ. ತನ್ನ ಸಮಾಜದ ಅರಿವೇ ತನಗಿಲ್ಲದಿದ್ದಲ್ಲಿ, ತನ್ನನ್ನು ತಾನು ಅರಿಯದವನಾಗಿದ್ದಲ್ಲಿ, ಅಂಥವನಿಂದ ರಾಷ್ಟ್ರದ ಹಿತ ಚಿಂತನೆ ಹೇಗೆತಾನೆ ಸಾಧ್ಯ? ಅಲ್ಲದೆ ಸಾಮಾನ್ಯ ಮತದಾರರ ತಿಳಿವಳಿಕೆ ಮತ್ತು ಅನುಭವವನ್ನವಲಂಬಿಸಬೇಕಾಗಿದೆ ಪ್ರಜಾಪ್ರತಿನಿಧಿಪ್ರಭುತ್ವ. ಅಂದರೆ, ಪೌರಸಾಮಾನ್ಯರು ತಮ್ಮ ಅಳವಿಗೆ ಎಟುಕದ, ದೃಷ್ಟಿಗೆ ಕಾಣದ, ಮನಸ್ಸಿಗೆ ಗೋಚರಿಸದ ಅಂಶಗಳನ್ನು ನಿರ್ವಹಿಸಬೇಕಾಗಿದೆ.

ಜನಾಭಿಪ್ರಾಯದ ಬಣ್ಣ ಇಂತಿದ್ದುದರಿಂದಲೇ ಈಗ ಎರಡು ಶತಮಾನಗಳ ಹಿಂದೆಯೂ ಅದರ ವಿಷಯವಾಗಿ ಅಪ ನಂಬಿಕೆಯೂ ವಿರೋಧವೂ ಏರ್ಪಟ್ಟಿದ್ದುವು. "ತಪ್ಪು ತಿಳಿ ವಳಿಕೆ, ಅಶಕ್ತಿ, ಅಸೂಯೆ, ದುರ್ಭಾವನೆ, ಸದ್ಭಾವನೆ, ಹಟ, ವೃತ್ತಪತ್ರಿಕಾ ಸಮಾಚಾರ—ಇವುಗಳ ಅಭೇದ್ಯ ಮಿಶ್ರಣವೇ ಜನಾಭಿಪ್ರಾಯ" ಎಂದು ಸರ್ ರಾಬರ್ಟ್ ಪೀಲ್ (Sir Robert Peel) ಹೇಳಿದ್ದಾನೆ. "ಮತದಾರರು ಬಹುವಾಗಿ ಬುದ್ಧಿಹೀನರು. ರಾಜಕೀಯ ಅನೀತಿ ಮತ್ತು ಮಾತ್ಸರ್ಯಪೂರಿತ ವಾಗ್ಮಿಗಳ ಶಬ್ದಾಡಂಬರದಿಂದ ಮುಗ್ಧವಾದ ಮೂಕಪ್ರಾಣಿಗಳು ಜನ" ಎಂದು ಕಟುವಾಗಿ ಹೇಳಿದ್ದಾನೆ ಕಾರ್ಲೈಲ್ (Carlyle). ಈ ತೆರನಾದ ಅಭಿಪ್ರಾಯ ಪ್ಲೇಟೊ ಮತ್ತು ಅರಿಸ್ಟಾಟಲರ ಕಾಲಕ್ಕೂ ಇದ್ದುವು. 'ನಾವು ಮಾನವನನ್ನು ಸುಸಂಸ್ಕೃತ ನಾದ ಪ್ರಾಣಿ ಎಂದು ಕರೆಯುತ್ತೇವೆ. ಪ್ರಕೃತಿ ಅವನಮೇಲೆ ದಯೆ ಬೀರಿದರೆ, ಅವನ ಶಿಕ್ಷಣ ಸರಿಯಾದರೆ, ಜೀವಿಗಳಲ್ಲಿ ಅಂಥನನು ಅತಿ ಸುಸಂಸ್ಕೃತನೂ ದೈವಸಮಾನನೂ ಆದವ ನಹುದು. ಆದರೆ ಅವನಿಗೆ ಸಾಕಷ್ಟು ಶಿಕ್ಷಣವಿಲ್ಲದಿದ್ದರೆ ಪ್ರಪಂಚದ ಜೀವಿಗಳಲ್ಲೆಲ್ಲಾ ಅತಿ ಅಸಂಸ್ಕೃತನಾಗುವನು

ಮಾನವನು" ಎಂದು ಪ್ಲೇಟೊ ಅಭಿಪ್ರಾಯಪಟ್ಟಿಲ್ಲವೇ? ಜನಜಂಗುಳಿಯ ನಿರಂಕುಶತ್ವದಿಂದ(Tyranny of the mob) ಪಾರಾಗುವುದೇ ಪ್ಲೇಟೊ ಮತ್ತು ಅರಿಸ್ಟಾಟಲರ ರಾಜಕೀಯ ಮತ್ತು ಸಾಮಾಜಿಕ ಪ್ರತಿಪಾದನೆಯ ಮುಖ್ಯಾಂಶ.

೨. ಪ್ರಾಚೀನ ಸಂಸ್ಕೃತಿಯಲ್ಲಿ ಪ್ರಜಾಭಿಪ್ರಾಯದ ಸ್ಥಾನ

ಜನಾಭಿಪ್ರಾಯ ಹುಟ್ಟಿದುದು ಹದಿನೆಂಟನೇ ಶತಮಾನ ದಿಂದ ಈಚೆಗೆ. ಅದಕ್ಕೆ ಹಿಂದೆ ಜನಾಭಿಪ್ರಾಯವೇ ಇರಲಿಲ್ಲ ಎಂದು ಕೆಲವರು ವಾದಿಸುವುದುಂಟು. ಈ ವಾದದಲ್ಲಿ ತಿರುಳಿಲ್ಲ. ಇತಿಹಾಸದಿಂದ ಉದಾಹರಿಸುವುದಾದರೆ ಜನಾಭಿಪ್ರಾಯ ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ಬಗೆಯಲ್ಲಿ ಬೆಳೆದು ಬರುತ್ತಿದೆಯೆಂಬ ಅಂಶ ದೃಢಪಡುವುದು.

ಹೀಬ್ರು ಜನರಲ್ಲಿ ಧರ್ಮಬೋಧಕರು ಜನಸಂದಣಿಯನ್ನು ದ್ವೇಶಿಸಿ ಮಾತನಾಡಿ ಜನಾಭಿಪ್ರಾಯವನ್ನು ಮೂಡಿಸುತ್ತಿದ್ದರು. ಅಂದಿನ ಕಾಲದ ವ್ಯಕ್ತಿಯ ಸಾಮಾನ್ಯ ಸ್ವಭಾವ ಇತರರು ಅಂದುದನ್ನು ಅಂಗೀಕರಿಸುವುದು. ಆದುದರಿಂದ ಜನತೆಯಲ್ಲಿ ಧರ್ಮಭೋಧಕರ ಉಪದೇಶಗಳ ಸತ್ಯಾಸತ್ಯ ವಿಮರ್ಶೆಗೆ ಅವಕಾಶವಿರಲಿಲ್ಲ.

ಪಾಶ್ಚಾತ್ಯರಲ್ಲಿ ಸುಸಂಸ್ಕೃತರೆಂದು ಪ್ರಸಿದ್ಧರಾದ ಗ್ರೀಕರಲ್ಲಿ ಜನಾಭಿಪ್ರಾಯ ಬಹು ಚೆನ್ನಾಗಿ ವ್ಯಕ್ತಗೊಂಡಿತ್ತು. ಅವರಲ್ಲಿ ಕ್ರಿ. ಪೂ. ಆರನೇ ಶತಮಾನದ ವೇಳೆಗೇ ಇದು ಉತ್ತಮ ಬಗೆ ಯಲ್ಲಿ ಸ್ಪಷ್ಟಗೊಂಡಿತ್ತು. ಶ್ರೀಮಂತವರ್ಗದ ನಿರಂಕುಶತೆ, ಆರ್ಫಿಸಂ ಸಿದ್ಧಾಂತದ ಪಾರಲೌಕಿಕತೆ (Mystic other

worldliness) ಇವೇ ಮೊದಲಾದವು ನಗರಗಳಲ್ಲಿನ; ಅದರಲ್ಲೂ ಅಥೆನ್ಸ್ ನಗರದ ಜನರ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾದವು. ಜನತೆಯಲ್ಲಿ ಗೋಚರವಾದ ಕೊರತೆಗಳನ್ನು ಪ್ರಚಾರಮಾಡಿ, ಅವುಗಳ ನಿವಾರಣೆಯ ಬಗ್ಗೆ ಪ್ರಜಾಭಿಪ್ರಾಯವನ್ನು ಮೂಡಿಸುತ್ತಿದ್ದರು. ಪ್ರಾಚೀನ ಗ್ರೀಕರ ರಾಷ್ಟ್ರಗಳ ವಿಷಯದಲ್ಲಿ ಜನವೆಂದರೆ ಸ್ವತಂತ್ರರಾದ ಪೌರಜನ ಮಾತ್ರ. ಕ್ರಿ.ಪೂ. ೪ನೇ ಶತಮಾನದಲ್ಲಿ ೧,೨೦,೦೦೦ ಜನಸಂಖ್ಯೆಯಿದ್ದ ಅಥೆನ್ಸ್ ನಗರದ ರಾಷ್ಟ್ರದಲ್ಲಿ ೪೦,೦೦೦ ಜನ ಮಾತ್ರ ಪೌರರೆನಿಸಿದ್ದರು; ಉಳಿದವರಲ್ಲಿ ಹಲವರು ಹೆಂಗಸರು, ಹಲವರು ಪೌರತ್ವರಹಿತ ದಾಸರು ಮತ್ತು ಪರಕೀಯರು. ಮತಾಧಿಕಾರ ಪೌರರಿಗೆ ಮಾತ್ರ ಮೀಸಲು. ಸಾರ್ವಜನಿಕ ರಂಗಗಳಾದ “ಅಕ್ರೊಪಾಲಿಸ್,” ಚುನಾಯಿತ ಸಭೆಗಳಾದ “ಗೆರೂಷಿಯ,” “ಅಪೆಲಾ,” “ಈಪರ್ಸ್” ಮುಂತಾದ ಸಭೆಗಳಿಗೆ ಸ್ವತಂತ್ರ ಪೌರರಿಗೆಲ್ಲಾ ಪ್ರವೇಶವಿತ್ತು. ಸಾರ್ವಜನಿಕ ವಿಷಯಗಳನ್ನು ಪ್ರಸಿದ್ಧಿಪತ್ರಿಕೆಗಳ ಮೂಲಕವಾಗಿ ಜನರಿಗೆ ತಿಳಿಸುತ್ತಿದ್ದ ಪ್ರಜಾಪ್ರಭುತ್ವ ನೇರವಾದುದರಿಂದ, ರಾಜಕೀಯ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ನಿರ್ಧಾರಗಳೆಲ್ಲವೂ ನಡೆಯುತ್ತಿದ್ದದ್ದು ಸ್ವತಂತ್ರ ಪೌರಜನದ ಅಭಿಪ್ರಾಯಕ್ಕನುಗುಣವಾಗಿತ್ತು.

ಪ್ರಜಾವಾಣಿಯೇ ದೇವವಾಣಿಯೆಂಬುದು ರೋಮಕರ ಸಿದ್ಧಾಂತ (Vox Populi Vox Dei). ಜನಾಭಿಪ್ರಾಯಕ್ಕೆ ಇದಕ್ಕಿಂತ ಹೆಚ್ಚಾದ ಬೆಲೆಯುಂಟೇನು? “ಕಮಿಷಿಯ ಕ್ಯೂರಿಯೇಟ” (Comitia Curiata) ಮತ್ತು “ಕಮಿಷಿಯ ಸೆಂಚುರಿಯೇಟ” (Comitia Centuriata) ಸಭೆಗಳೇ ಇದಕ್ಕೆ

ನಿದರ್ಶನ. ರೋಮಕ ವಿಜಯಗಳು ದಿಗಂತವ್ಯಾಪಿಸಿದುವಷ್ಟೆ. ಇವುಗಳಿಂದ ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಪದ್ಧತಿಗಳು ಒಂದೆಡೆಯಿಂದ ಇನ್ನೊಂದೆಡೆಯಲ್ಲಿ ಹರಡಲು ಎಷ್ಟೋ ಅನುಕೂಲವಾದುವು. ರೋಮಕರ ಸಾಮ್ರಾಜ್ಯ ವಿಸ್ತಾರನೀತಿ ಏನೇ ಇರಲಿ, ಅದರಿಂದ ವಾರ್ತಾಪ್ರಸಾರವಾಯಿತು, ಸಂಸ್ಕೃತಿ ವಿಕಾಸಗೊಂಡಿತು, ವಾರ್ತಾಪ್ರಸಾರಕ್ಕೆ ಒತ್ತಾಯವೂ ಏರ್ಪಟ್ಟಿತು. ಕ್ರಿ. ಪೂ. ೬೦ರಲ್ಲಿ ಕಾನ್ಸಲ್ ಪದವಿಗೇರಿದ ಜ್ಯೂಲಿಯಸ್ ಸೀಸರ್ ದೈನಂದಿನ ಸಮಾಚಾರಗಳನ್ನು "ಅಕ್ಟಾ ಡೈಯರ್ನ" (Acta Diurna)ಮೂಲಕ ಜನತೆಗೆ ಪ್ರಚಾರಗೊಳಿಸಲು ಏರ್ಪಡಿಸಿದ್ದ. ವಿನೋದ, ಮತೀಯ ಸಂಸ್ಕಾರ, ಸೆನೆಟ್ ಸಭೆಯ ಕಾರ್ಯಕಲಾಪ, ಯುದ್ಧ, ಒಪ್ಪಂದ—ಇಂತು ಎಲ್ಲ ಅಂಶಗಳೂ ಜನರ ಅರಿವಿಗೆ ತನ್ಮೂಲಕ ಬರಲಾರಂಭವಾಯಿತು.

"ಜನತೆಯೇ ರಾಷ್ಟ್ರದ ಮುಖ್ಯಾಂಶ, ಅನಂತರ ರಾಷ್ಟ್ರದ ದೇವಮಂದಿರಗಳು, ಪ್ರಾಮುಖ್ಯತೆಯಲ್ಲಿ ಕೊನೆಯದು ದೊರೆಯ ಸ್ಥಾನ" ಎಂದು ಹೇಳಿರುವ ಮೆನ್ಸಿಯಸ್ಸಿನ (Mencius) ವಾಕ್ಯ ಚೈನಾದೇಶದ ರಾಜಕೀಯ ಸಿದ್ಧಾಂತದ ಸಾರ ಸ್ವರೂಪವನ್ನು ತಿಳಿಸುವುದು. ಲೆವಿಯಾಥನ್ (Leviathan) ವಾದಿಸುವ ಸಿದ್ಧಾಂತಕ್ಕೂ (The theory of Absolutism) ಸ್ಟುಯರ್ಟರ ದೈವಿಕ ಸಿದ್ಧಾಂತಕ್ಕೂ (The Theory of Divine Right) ಚೀನಿಯರ ಸಿದ್ಧಾಂತ ಎಷ್ಟು ವಿರೋಧ? ಅದು ಎಷ್ಟು ಶ್ರೇಷ್ಠ?

ಇಂಗ್ಲೆಂಡಿನಲ್ಲಿ ಆಂಗ್ಲೋಸ್ಯಾಕ್ಸನರ ಕಾಲಕ್ಕೆ ಫೋಕ್—ಮೂಟ್" (Folk-moot), "ಟೌನ್-ಮೂಟ್" (Town-

moot) ಮತ್ತು "ಹಂಡ್ರೆಡ್—ಮೂಟ್"(Hundred-moot) ಎಂಬ ಸಭೆಗಳು ಪ್ರಜಾವಾಣಿಯನ್ನು ಪ್ರತಿಬಿಂಬಿಸುವ ವಾಹಿನಿಗಳಾಗಿದ್ದವು.

ಜನಾಭಿಪ್ರಾಯ ಒಂದು ಚೈತನ್ಯವಾಗಿ, ಒಂದು ನವ ಶಕ್ತಿಯಾಗಿ, ಬಹು ಹಿಂದಿನಿಂದಲೇ ಬೆಳೆದುಬಂದಿತು ಎನ್ನುವುದಕ್ಕೆ ಇಷ್ಟು ವಿವರಗಳು ಸಾಕು. ಪ್ರಜಾನುರಾಗಿ ಸರ್ಕಾರ ಉದಯವಾದ ನಂತರವೇ—ಅಂದರೆ, ಹದಿನೆಂಟು ಹತ್ತೊಂಬತ್ತನೇ ಶತಮಾನದಿಂದೀಚೆಗೆ—ಜನಾಭಿಪ್ರಾಯ ಹೊರ ಹೊಮ್ಮಿತು. ಅದಕ್ಕೆ ಮೊದಲು ಪ್ರಜಾಭಿಪ್ರಾಯವೇ ಇರಲಿಲ್ಲ ಅನ್ನುವ ವಾದಸರಣಿ ಸರಿಯಾದುದಲ್ಲವೆಂಬುದು ಇದರಿಂದ ದೃಢಪಡುತ್ತದೆ.

ಇನ್ನು ನಮ್ಮ ದೇಶದಲ್ಲಿ, ಅದರಲ್ಲೂ ಪ್ರಾಚೀನ ಕಾಲದಲ್ಲಿ, ಜನಾಭಿಪ್ರಾಯ ಇದ್ದಿತೆ? ಇದ್ದರೆ ಅದು ಹೇಗಿದ್ದಿತು? ಅನ್ನುವ ವಿಷಯದ ಪರಿಶೀಲನೆಗೆ ತೆರಳುವ. "ಪ್ರಾಚೀನ ಭಾರತೀಯ ಜನಾಂಗಕ್ಕೆ ಜನಾಭಿಪ್ರಾಯದ ಬೆಲೆಯ ಅರಿವೇ ಇರಲಿಲ್ಲ; ಜನಾಭಿಪ್ರಾಯ ವಿಶೇಷವೂ ಅಮೂಲ್ಯವೂ ಆದ ಒಂದು ಶಕ್ತಿ ಎಂದವರು ಗ್ರಹಿಸಿರಲಿಲ್ಲ" ಎಂದು ಲಾರ್ಡ್ ಮೆಕಾಲೆ, ಲಾರ್ಡ್ ಸಿಡನ್‌ಹಾಂ ಮುಂತಾದ ಪಾಶ್ಚಾತ್ಯ ರಾಜಕಾರಣಪ್ರವೀಣರು ವಾದಿಸುತ್ತಾರೆ. ಈ ವಾದ ಒಂದು ಅಬದ್ಧ ಕಂತೆ ಎಂದು ನಿರೂಪಿಸಲು ಪ್ರಾಚೀನ ಭಾರತದಲ್ಲಿ ಮೂಡಿದ್ದ ಜನಾಭಿಪ್ರಾಯದ ಸ್ವರೂಪವನ್ನು ತಿಳಿಯುವುದು ಆವಶ್ಯಕ.

ಋಗ್ವೇದದ ಕಾಲದಲ್ಲಿ ಜನಾಭಿಪ್ರಾಯ ಒಂದು ಚೇತನವಾಗಿಯೇ ಇತ್ತು. ಸಭಾ, ಸಮಿತಿ, ವಿದಥ, ಗಣ, ಜನಪ ಇಂತಹ ಜನಕೂಟಗಳು ಜನಾಭಿಪ್ರಾಯವನ್ನು ಪ್ರತಿಬಿಂಬಿಸ

ತ್ತಿದ್ದುದು ಮಾತ್ರವಲ್ಲ, ಜನಾಭಿಪ್ರಾಯಕ್ಕನುಗುಣವಾಗಿ ರಾಷ್ಟ್ರದ ನಡೆವಳಿಕೆಯನ್ನೂ ನಿರ್ಧರಿಸುತ್ತಿದ್ದುವು. ವೇದ ಸಾಹಿತ್ಯದಲ್ಲಡಗಿರುವ ಈ ಭಾವನೆಯ ಅರ್ಥವೇನು? ಶಕ್ತಿಯೇನು? "ವಿಶಸ್ತ್ವಾ ಸರ್ವಾ ವಾಂಛಂತು" (ದೊರೆಯಾದ ನೀನು ಜನರಿಂದ ಅಪೇಕ್ಷಣೀಯನಾಗು). ಈ ಪದ್ಧತಿ ಋಗ್ವೇದದ ಕಾಲದಿಂದ ಅಥರ್ವವೇದದ ಕಾಲದವರೆಗೂ ನಡೆದುಬಂದಿತು. "ತ್ವಾಂವಿಶೋ ವೃಣತಾಂ ರಾಜ್ಯಾಯ" ರಾಜನ ಸ್ಥಾನಕ್ಕೆ ನಿನ್ನನ್ನು ಪ್ರಜೆಗಳು ಆರಿಸಲಿ ಎಂದು ಅಥರ್ವವೇದದಲ್ಲೂ ಹೇಳಿದೆ.

ವೇದ ಸಾಹಿತ್ಯದಲ್ಲಿ ಇಂತಹ ಭಾವನೆಗಳು ವಿಪುಲವಾಗಿ ಅಡಗಿವೆ. "ಸಂವದಧ್ವಂ," "ಸಂವೋ ಮನಾಂಸಿ ಜಾನತಾಂ," "ಸಮಾನೋ ಮನ್ತ್ರಃ," "ಸಮಿತಿಃ ಸಮಾನೀ," "ಸಮಾನಂ ಮನಃ," "ಸಹಚಿತ್ತಂ" ಈ ಭಾವನೆಗಳ ಅರ್ಥ ಜನಾಭಿಪ್ರಾಯ ಎಂತಿರಬೇಕೆನ್ನುವುದನ್ನು ಸೂಚಿಸಿದಂತಲ್ಲವೇ?

'ವಿದಥ' ಎಂಬ ಸಭೆ ಪೌರೋಹಿತ್ಯವರ್ಗ ಮುಂದಿಟ್ಟ ಕ್ರಮಗಳನ್ನು ಕುರಿತು ಚರ್ಚೆ ನಡೆಸುತ್ತಿತ್ತು. ಕುಟುಂಬದ ಪತಿಗಳೂ ಗ್ರಾಮದ ಹಿರಿಯರೂ ಈ ಸಭೆಯಲ್ಲಿ ಕೂಡುತ್ತಿದ್ದರು. 'ಸಮಿತಿ' ಸ್ಥಳೀಯ ವಿದ್ಯಮಾನಗಳ ಪರೀಶೀಲನೆಗಾಗಿ ಏರ್ಪಟ್ಟಿದ್ದ ಸಂಸ್ಥೆಯಾಗಿತ್ತು. 'ಸಭಾ' ರಾಜಕೀಯ ಮತ್ತು ಪ್ರಾಂತದ ವ್ಯವಹಾರಗಳನ್ನು ವಿಮರ್ಶಿಸುತ್ತಿತ್ತು. 'ಸಭಾ' ಸೇರಿದಾಗ ರಾಜನ್ ಅಧ್ಯಕ್ಷತೆ ವಹಿಸುತ್ತಿದ್ದನು. ಅನೇಕ ಸಂದರ್ಭಗಳಲ್ಲಿ ಇವನು ಹಿರಿಯರ ಮತ್ತು ಚುನಾಯಿತ ಪ್ರಜಾಪ್ರತಿನಿಧಿಗಳ ಅಭಿಪ್ರಾಯವನ್ನನುಸರಿಸಿ ಆರಿಸಲ್ಪಡುತ್ತಿದ್ದನು. ತನ್ನ ಜನರ ಇಷ್ಟಕ್ಕೆ ವಿರೋಧವಾಗಿ ನಡೆದುಕೊಂಡರೆ

ತನ್ನ ಸರ್ವಸ್ವವನ್ನೂ ಕಳೆದುಕೊಳ್ಳಲು ಸಿದ್ಧನಿರುವೆನೆಂದು ರಾಜನು ಸಿಂಹಾಸನಾರೋಹಣ ಸಮಯದಲ್ಲಿ ಪ್ರಮಾಣ ಮಾಡುತ್ತಿದ್ದನು. ಅಂದಮೇಲೆ ಜನಾಭಿಪ್ರಾಯಕ್ಕೆ ಏನು ಮನ್ನಣೆಯಿತ್ತೆನ್ನುವುದು ಗೊತ್ತಾಗಲಾರದೇ?

ಶ್ರುತಿಯಿಂದ ಸ್ಮೃತಿಯ ಕಾಲಕ್ಕೆ ಬರೋಣ. ಅಲ್ಲೂ ಜನಾಭಿಪ್ರಾಯಕ್ಕೆ ಅದೇ ಬೆಲೆ, ಅದೇ ಗೌರವ. ತಮ್ಮ ದುರ್ವರ್ತನೆಯಿಂದ ಜನಾಭಿಪ್ರಾಯವನ್ನು ಅಲಕ್ಷಿಸಿ ಸಿಂಹಾಸನ ಚ್ಯುತರಾಗಿ ತಮ್ಮ ತಲೆಯನ್ನೇ ಒಪ್ಪಿಸಿದ ರಾಜರ ನಿದರ್ಶನಗಳನ್ನು ಮನು ಸೂಚಿಸಿದ್ದಾನೆ: “ಬಹವೋऽವಿನಯಾನ್ನಷ್ಟಾ ರಾಜಾನಃ ಸಪರಿಚ್ಛದಾಃ। ವೋನೇ ವಿನಷ್ಟೋऽವಿನಯಾನ್ನಹುಷಶ್ಚೈವ ಪಾರ್ಥಿವಃ॥ ಸುದಾಸೋ ಯವನಶ್ಚೈವ ಸುಮುಖೋ ನಿಮಿರೇವಚ....”॥

ಇನ್ನು ಪೌರಾಣಿಕ ಕಾಲದಲ್ಲಿದ್ದ ಜನಾಭಿಪ್ರಾಯದ ಸ್ವರೂಪವನ್ನು ವಿಮರ್ಶಿಸೋಣ. ರಾಮಾಯಣದ ಕಾಲದಲ್ಲಿ ಜನಾಭಿಪ್ರಾಯಕ್ಕೆ ಅತುಳ ಪ್ರಾಮುಖ್ಯತೆ ಮತ್ತು ಮನ್ನಣೆ ಇತ್ತು. ಚುನಾವಣೆಯ ತತ್ವ ಆಚರಣೆಯಲ್ಲಿತ್ತೆಂದೂ ಹೇಳಬಹುದು. ಶ್ರೀರಾಮನಿಗೆ ಯುವರಾಜ್ಯಾಭಿಷೇಕ ಮಾಡುವ ಮುನ್ನ ದಶರಥಮಹಾರಾಜ ತನ್ನ ಜನರ ಅಭಿಪ್ರಾಯ ಪಡೆದುದಿರಲಿ, ಸಭೆಯನ್ನು ಕೂಡಿಸಿ ಸಭೆಯ ಅಭಿಪ್ರಾಯವನ್ನೂ ಪಡೆದ: “ನಾನಾನಗರವಾಸ್ತವ್ಯಾನ್ ಪೃಥಗ್ ಜಾನಪದಾನಪಿ। ಸಮಾನಿನಾಯ ಮೇದಿನ್ಯಾಂ...........॥”

“ತತಃ ಪರಿಷದಂ ಸರ್ವಾಮಾಮಂತ್ರ್ಯ ವಸುಧಾಧಿಪಃ।....”

ದಶರಥ ದಿವಂಗತನಾದಾಗ ರಾಮ ವನವಾಸದಲ್ಲಿದ್ದ ರಾಜ್ಯಾಡಳಿತ ನಿರ್ವಹಿಸಬೇಕಾದವರು ಯಾರೆನ್ನುವ ಪ್ರಶ್ನೆ

ಸಭೆಯ ಮುಂದೆ ವಿಮರ್ಶೆಗೆ ಬಂತು. ರಾಜಕರ್ತೃಗಳು ದೊರೆಯನ್ನಾರಿಸಲು ಸಭೆಯನ್ನು ಕರೆದಾಗ ಭರತ ಶತ್ರುಘ್ನರೂ ಅಯೋಧ್ಯೆಯಲ್ಲಿರಲಿಲ್ಲ. ಆಗ ಸಭೆ ದೊರೆಯನ್ನಾರಿಸುವ ಅಧಿಕಾರವನ್ನು ಕುಲಪುರೋಹಿತ ವಸಿಷ್ಠನಿಗೆ ವಹಿಸಿತು. ವಸಿಷ್ಠ ಭರತನನ್ನು ಆರಿಸಿ ಆಳ್ವಿಕೆಯನ್ನು ಅವನು ವಹಿಸಿಕೊಳ್ಳಬೇಕೆಂದು ನಿರೂಪಿಸಿದ. ಸುಸಂಸ್ಕೃತರಾದ ಅಯೋಧ್ಯೆಯ ಜನರಿರಲಿ, ವಾನರ ರಾಜ್ಯದಲ್ಲಿ ಕೂಡ ಚುನಾವಣೆಯ ಪದ್ಧತಿಯು ಇತ್ತೆಂದು ತಿಳಿಯುವುದು ಎಷ್ಟು ಸಂತೋಷದ ವಿಷಯ! ವಾಲಿ ಒಂದು ಸಂವತ್ಸರ ಕಾಲ ರಾಜ್ಯ ಬಿಟ್ಟು ಹೊರಗಿದ್ದ ಕಾಲದಲ್ಲಿ ವಾನರ ಜನ ಸುಗ್ರೀವನನ್ನು ರಾಜನನ್ನಾಗಿ ಆರಿಸಿಕೊಂಡಿತು. ವಾಲಿ ಹಿಂದಿರುಗಿದ ವೇಳೆಯಲ್ಲಿ ಸುಗ್ರೀವ ಈ ಅಂಶವನ್ನು ಅವನಿಗೆ ನಿವೇದಿಸಿದ್ದಾನೆ: "ಅಭಿಷಿಕ್ತೋನ ಕಾಮೇನ". ಶ್ರೀರಾಮ ಸೀತಾದೇವಿಯನ್ನು ಪರಿತ್ಯಜಿಸಿದ್ದೂ ಜನಾಭಿಪ್ರಾಯಕ್ಕೆ—ಕೇವಲ ಒಬ್ಬ ಅಗಸನ ಅಭಿಪ್ರಾಯಕ್ಕೆ–ಮನ್ನಣೆ ಕೊಡಲು.

ಮಹಾಭಾರತದ ಕಾಲದಲ್ಲಿ ಇನ್ನೂ ಸ್ಪಷ್ಟ ಜನಾಭಿಪ್ರಾಯಕ್ಕೆ ಬೆಲೆಯಿತ್ತು. ಪಾಂಡವ ಜ್ಯೇಷ್ಠ ಯುಧಿಷ್ಠಿರನಿಗೆ ರಾಜ್ಯಾಭಿಷೇಕ ನಡೆದಾಗ ಜನರು ಹೇಳಿದ್ದು ಹೀಗೆ: "ತೇ ವಯಂ ಪಾಂಡವಜ್ಯೇಷ್ಠಮಭಿಷಿಂಚಾಮ — ....||" (ಪ್ರಜೆಗಳಾದ) ನಾವು ಪಾಂಡವಜ್ಯೇಷ್ಠನಾದ ನಿನಗೆ ರಾಜ್ಯಾಭಿಷೇಕ ಮಾಡುತ್ತೇವೆ.

ಮಹಾಭಾರತದ ಶಾಂತಿಪರ್ವದಲ್ಲಿ ಈ ಉಲ್ಲೇಖವಿದೆ:
"ಜಾನೀತ ಯದಿ ಮೇ ವೃತ್ತಂ ಪ್ರಶಂಸಂತಿ ನ ವಾ ಪುನಃ |
ಕಚ್ಚಿದ್ಪೌರಜಾನಪದೇ ಕಚ್ಚಿದ್ರಾಷ್ಟ್ರೇ ಚ ಮೇ ಯಶಃ||"

ನನ್ನ ಆಡಳಿತದ ರೀತಿಯನ್ನು ಜನರು ಪ್ರಶಂಸಿಸುತ್ತಾರೆಯೋ ಇಲ್ಲವೇ; ಮತ್ತು ಜನರಿಗೆ ಹಿತಕರವಾಗಿದೆಯೋ ಇಲ್ಲವೇ ಎಂಬುದನ್ನು ತಿಳಿಯಿರಿ.

ಬೃಹಸ್ಪತಿಸೂತ್ರದಲ್ಲಿ ಹೀಗೆ ಹೇಳಿದೆ: "ಜನ ಘೋಷೇ ಸತಿ ಕ್ಷುದ್ರಂ ಕರ್ಮ ನ ಕುರ್ಯಾತ್" ಜನಾಭಿಪ್ರಾಯಕ್ಕೆ ವಿರುದ್ಧವಾಗಿದ್ದಲ್ಲಿ ಆ ಕಾರ್ಯವು ಎಷ್ಟೇ ಅಲ್ಪವಾಗಿರಲಿ ಅದನ್ನು ಮಾಡಬಾರದು; "ಧರ್ಮಮಪಿ ಲೋಕ ವಿಕೃಷ್ಟಂ ನ ಕುರ್ಯಾತ್." ಅದು ಎಷ್ಟೇ ಒಳ್ಳೆಯ ಕೆಲಸವಾಗಿದ್ದರೂ ಜನಾಭಿಪ್ರಾಯಕ್ಕೆ ವಿರುದ್ಧವಾಗಿದ್ದರೆ ಅದನ್ನೂ ಮಾಡಕೂಡದು.

ಗೀತಾಚಾರ್ಯನಾದ ಶ್ರೀಕೃಷ್ಣಭಗವಾನ್ ಗೀತೆಯಲ್ಲಿ ಹೇಳಿರುವ ಈ ಅಂಶವನ್ನು ಗಮನಿಸಿರಿ: "ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ."

ಕೌಟಿಲ್ಯನ ಅರ್ಥಶಾಸ್ತ್ರದ ವಿವರಗಳನ್ನು ಪರಿಶೀಲಿಸಿದರೆ ಜನಾಭಿಪ್ರಾಯ ಕ್ರಿ. ಪೂ. ನಾಲ್ಕನೇ ಶತಮಾನದಷ್ಟು ಹಿಂದೆಯೂ ಹೇಗಿತ್ತೆಂಬುದು ಸ್ಥಿರಪಡುತ್ತದೆ. ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಗ್ರೀಕರ ಕಡೆಯ ರಾಯಭಾರಿ ಮೆಗಾಸ್ತನೀಸ್ ಇದ್ದನಷ್ಟೆ. ಅವನ ಬರವಣಿಗೆಯಲ್ಲಿ ಅಂದಿನ ಪಾಟಲೀಪುತ್ರದಲ್ಲಿ ಜನಾಭಿಪ್ರಾಯಕ್ಕೆ ಏನು ಸ್ಥಾನವಿತ್ತೆಂಬುದಕ್ಕೆ ಉತ್ತಮ ವಿವರಗಳಿವೆ. ಮ್ಯಾಕ್ರಿಂಡಲ್‌ನ ಗ್ರಂಥಗಳಿಂದಲೂ ಈ ವಿಷಯ ವ್ಯಕ್ತಪಡುತ್ತದೆ.

ಭರ್ತೃಹರಿ ನೀತಿಶತಕದಲ್ಲಿ ಹೀಗೆ ಹೇಳಿದ್ದಾನೆ: "ವಿದ್ಯಾಯಾಂ ವ್ಯಸನಂ ಸ್ವಯೋಷಿತಿ ರತಿರ್ಲೋಕಾಪವಾದಾದ್ಭಯಂ" ವಿದ್ಯೆಯಲ್ಲಿ ಆಸಕ್ತಿ, ಸ್ವಸ್ತ್ರೀಯಲ್ಲಿ ಮಾತ್ರ ಪ್ರೇಮ ಮತ್ತು ಲೋಕಾಪವಾದದ ಭಯ ಇವು ಮಾನವನಲ್ಲಿರಬೇಕಾದ ಗುಣ

ಗಳೆಂದು ಕ್ರಿ. ಶ. ಒಂದನೇ ಶತಮಾನದಲ್ಲಿದ್ದ ಭರ್ತೃಹರಿ ಜನಾಭಿಪ್ರಾಯದ ಘನತೆ ಎಂತಹುದೆಂಬುದನ್ನು ಎಷ್ಟು ವಿಜೃಂಭಿಸಿದ್ದಾನೆ.

ಕ್ರಿ. ಶ. ಏಳನೇ ಶತಮಾನದಲ್ಲಿ ಸಿಂಹಾಸನಾರೋಹಣ ಮಾಡಿದ ರಾಜಾ ಶ್ರೀಹರ್ಷ ತಾನು ಸಿಂಹಾಸನವನ್ನೇರುವ ಮುನ್ನ ಜನಾಭಿಪ್ರಾಯಕ್ಕೆ ತಲೆಬಾಗಬೇಕಾಯಿತು.

ಆದಿಶಂಕರರು ಕೂಡ ಹೇಳಿದ್ದಾರೆ: "ಯದ್ಯಪಿ ಶುದ್ಧಂ ಲೋಕ ವಿರುದ್ಧಂ ನೋಚರಣೀಯಂ ನೋಕರಣೀಯಂ" ಎಂದು. ಜನರ ಅಪೇಕ್ಷೆಗಳಿಗೆ ವಿರೋಧವೆನಿಸಿದುದಾವುದನ್ನೂ ಮಾಡಕೂಡದು; ಜನಾಭಿಪ್ರಾಯಕ್ಕೆ ಅನುಗುಣವಾದುದಾವುದನ್ನೂ ಬಿಡಲೂ ಕೂಡದು.

ಕವಿ ಭವಭೂತಿ ಉತ್ತರರಾಮ ಚರಿತ್ರೆಯಲ್ಲಿ ರಾಮನ ಬಾಯಿಂದ ಹೇಳಿಸಿರುವ ಈ ಮಾತನ್ನು ಗಮನಿಸಿ: "ಸ್ನೇಹಂ ದಯಾಂ ತಥಾ ಸೌಖ್ಯಂ ಯದಿವಾ ಜಾನಕೀಮಪಿ, ಆರಾಧ ನಾಯ ಲೋಕಸ್ಯ ಮುಂಚತೋ ನಾಸ್ತಿ ಮೇವ್ಯಥಾ||" ಜನರ ತೃಪ್ತಿಗಾಗಿ ನಾನಿರುವುದು. ಪ್ರೇಮ, ದಯೆ, ಸೌಖ್ಯ, ಏಕೆ, ನನ್ನ ಜೀವನ ಸರ್ವಸ್ವಳಾದ ಜಾನಕಿಯನ್ನು ಬೇಕಾದರೂ ತ್ಯಾಗಮಾಡಲು ಸಿದ್ಧನಿರುವೆನು ಪ್ರಜೆಗಳ ಸಂತುಷ್ಟಿಗಾಗಿ. ಪ್ರಜೆಗಳು ಸಂತೃಪ್ತರಾಗಿದ್ದರೆ ಸಾಕು ನನಗೆ.

ಪ್ರಾಚೀನ ಭಾರತದಲ್ಲಿ ಜನಾಭಿಪ್ರಾಯಕ್ಕಿದ್ದ ಉತ್ತಮ ಸ್ಥಾನನೆಂತಹುದೆಂಬುದು ಮೇಲಿನ ನಿದರ್ಶನಗಳಿಂದ ವ್ಯಕ್ತಪಡು ತ್ತದೆ. ಹಾಗೂ ಗುರುಕುಲಾಶ್ರಮ ಶಿಷ್ಯಸಂಪ್ರದಾಯಗಳನ್ನು ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬಂದಿತು. ಗುರುಕುಲ, ಗಣ, ಶ್ರೇಣಿ, ಪೂಗ, ಸಮೂಹ, ಮುಂತಾದ ಸಂಸ್ಥೆಗಳು

ಜನಾಭಿಪ್ರಾಯ ಪ್ರಸಾರವಾಹಿನಿಗಳಾಗಿದ್ದುವು. ನಿಜ, ಮುದ್ರಣ ಪದ್ಧತಿ ಆ ಕಾಲದ ಜನರಿಗೆ ತಿಳಿದಿರಲಿಲ್ಲ. ಆದರೆ ಅದರಿಂದ ಜನಾಭಿಪ್ರಾಯದ ಪ್ರಸಾರ ನಿಲ್ಲಲಿಲ್ಲ. ಓಲೆಗರಿಯಲ್ಲೂ, ತಾಮ್ರದ ತಗಡುಗಳಮೇಲೂ, ಪ್ರಾಕೃತದಲ್ಲೂ, ಸಂಸ್ಕೃತದಲ್ಲೂ ಬರವಣಿಗೆಗಳಾಗುತ್ತಿದ್ದುವು. ಸಾರ್ವಭೌಮರನೇಕರು ಪ್ರಜೆಗಳ ಅವಗಾಹನೆಗಾಗಿ ಅನೇಕ ಶಿಲಾಶಾಸನಗಳನ್ನು ಕೆತ್ತಿಸಿ ನೆಡಿಸಿದ್ದರು. ಅಶೋಕಮೌರ್ಯನ ಸಾಂಚಿಯ ಶಾಸನ, ಉತ್ತರಮಲ್ಲೂರು ಶಾಸನ, ಒಂದನೇ ಪರಾಂತಕನ ಉತ್ಕಲ ಶಾಸನಗಳು—ಇಂತಹವು ಬೇಕಾದಷ್ಟಿವೆ. 'ಪಂಚವಾರಿ,' 'ವಾರಗೋಷ್ಠಿ' ಎಂಬ ಪದಗಳು ಉತ್ಕಲ ಶಾಸನದಲ್ಲಿವೆ. ತಂಜಾವೂರಿನ ಶಾಸನ ಒಂದರಲ್ಲಿ ಅಲ್ಲಿನ ರಾಜ ತನ್ನ ರಾಜ್ಯದ ೧೫೦ ಹಳ್ಳಿಗಳಲ್ಲಿ ಒಂದೊಂದೂ ತನ್ನದೇ ಆದ ಸಭೆಗಳನ್ನು ಹೊಂದಿತ್ತೆಂದು ಉಲ್ಲೇಖಿಸಿದ್ದಾನೆ. ಅಜಂತಾದಲ್ಲಿನ ಹತ್ತನೇ ಗುಹೆಯಲ್ಲಿ ಇಂಥ ಒಂದು ಶಾಸನವಿದೆ. ಹಾಗೂ ಪ್ರಯಾಣಿಕರು ಮತ್ತು ಉಪದೇಶಕರು ತಾವು ಹೋದೆಡೆಯಲ್ಲಿ, ತಾವು ಕಂಡು ಕೇಳಿದ ಸಮಾಚಾರಗಳನ್ನು ಹರಡುತ್ತಿದ್ದರು. ಇವಕ್ಕೂ ಮಿಗಿಲಾಗಿ ನಮ್ಮ ಪ್ರಾಚೀನ ಸಂಪ್ರದಾಯಗಳ ಸ್ವರೂಪವೇನು? ಅನಾದಿ ಕಾಲದಿಂದ ನಡೆದುಬಂದ ಜನಾಭಿಪ್ರಾಯದ ಒಂದು ಸ್ವರೂಪವೇ ಅಲ್ಲವೆ ಅವು!

೩. ಮಧ್ಯಮಯುಗದಲ್ಲಿ ಪ್ರಜಾಭಿಪ್ರಾಯ

ಇನ್ನು ಮಧ್ಯಮಯುಗದಲ್ಲಿ ಪಾಶ್ಚಾತ್ಯ ದೇಶಗಳ ಪರಿಸ್ಥಿತಿ ಹೇಗಿದ್ದಿತೆಂಬುದನ್ನು ನೋಡುವ. ಸಣ್ಣ ಸಣ್ಣ ಗುಂಪಿನ ಮತ್ತು ವ್ಯವಸಾಯವನ್ನೇ ಪ್ರಧಾನ ಕಸಬಾಗಿಟ್ಟುಕೊಂಡಿದ್ದ ಜನ

ಭಿನ್ನ ಮನೋಭಾವದಿಂದ ಹರಡಿ ಹಂಚಲ್ಪಟ್ಟಿದ್ದರೂ ಆವಿಷ್ಕಾರ (Revelation) ಮತ್ತು ಅಲೌಕಿಕತ್ವ (Supernaturalism ದಿಂದ ವ್ಯಾಪ್ತಿಗೊಂಡ ಒಂದು ಧಾರ್ಮಿಕ ಅನುಕರಣೀಯತೆ ಮತ್ತು ಸಂಸ್ಕೃತಿ (A common religious ideology) ಅವರೆಲ್ಲರಿಗೂ ಅನ್ವಯವಾಗಿ ಅವರೆಲ್ಲರೂ ಒಂದೋ ಎನ್ನುವಂತೆ ತೋರುತ್ತಿತ್ತು. ಈ ಧಾರ್ಮಿಕದೃಷ್ಟಿಯನ್ನುಳಿದು ಇನ್ನಾವ ವಿಧದಲ್ಲೂ ಅಂದಿನ ಯುರೋಪು ತನ್ನ ಒಗ್ಗಟ್ಟನ್ನು ತೋರ ಲಿಲ್ಲ. ಅಂದಿನ ಐರೋಪ್ಯಜನ ಒಟ್ಟಾಗಿ ಒಂದು ಜನಾಂಗ ವಾಗಿ ನಿಂತಿದ್ದು ಎರಡು ಸಂದರ್ಭದಲ್ಲಿ ಮಾತ್ರ—ರೋಮಕ ಸಾಮ್ರಾಜ್ಯದ ಅಧೀನದಲ್ಲಿ ಮತ್ತು ರೋಮನ್ ಕ್ಯಾಥೊಲಿಕ್ ಧರ್ಮದ ಆಶ್ರಯದಲ್ಲಿ,

ಧರ್ಮಾಧಿಕಾರಿಗಳೆನಿಸಿದವರ ಅಧಿಕಾರಕ್ಕೆ ಎಲ್ಲ ಸರ್ಕಾರ ಗಳೂ ಶರಣು. ಜನಾಭಿಪ್ರಾಯ ಎನ್ನುವುದೇ ಇಲ್ಲ. ಇದ್ದರೂ ಅದನ್ನು ಕೇಳುವವರಾರು? ರಾಷ್ಟ್ರಾಧಿಕಾರ ಯಾರಲ್ಲಿತ್ತೋ ಅವರ ಹೇಳಿಕೆಯಂತೆ, ಇಂಗಿತದಂತೆ ನಡೆಯುತ್ತಿತ್ತು ಜನ. ಜನತೆಯ ಜ್ಞಾನಮಟ್ಟವೂ ಬಹು ಕಡಮೆ. ಶಕ್ತಿ ಪ್ರಭಾವ ಯುತವಾದುದನ್ನು ಮತ್ತು ವೈಭವಯುತವಾದುದನ್ನು ಪೂಜಿ ಸುವ ಸ್ವಭಾವ ಜನತೆಯದಾಗಿತ್ತು. ಶಕ್ತಿ ಮತ್ತು ವೈಭವ ಇವು ಅನಿರ್ವಚನೀಯ ಮತ್ತು ಅಮಾನುಷ ದೈವಿಕಶಕ್ತಿ ಎನ್ನುವ ಭಾವನೆ ಜನರಲ್ಲಿ ಮೂಡಿತ್ತು. ಈ ಅಂಧಶ್ರದ್ಧೆಗೆ ಸಂಪ್ರ ದಾಯವೂ ನೆರವಾಯಿತು. ವಿಚಾರ ವಿನಿಮಯ ಮಾಡಲು ಸ್ವಾತಂತ್ರ್ಯವಿರಲಿಲ್ಲ, ಪ್ರೋತ್ಸಾಹವಿರಲಿಲ್ಲ. "ಅಧಿಕಾರಸ್ಥಾನ ದಿಂದ ಏನು ಬರಲಿ ಅದನ್ನಂಗೀಕರಿಸುವುದು, ಅದಕ್ಕೆ ಬೆಲೆ ಕೊಡುವುದು, ಏನೇ ತಪ್ಪುಗಳಿರಲಿ ಅವುಗಳನ್ನು ಗಮನಿಸ

ದಿರುವುದು, ಇಷ್ಟೇ ಜನ ತಿಳಿದಿದ್ದುದು. ಇದಕ್ಕೆ ಹೆಚ್ಚಾಗಿ ಜನ ಏನನ್ನೂ ಅರಿಯರು. ಸರಿಯಾದ ಹಾದಿ ಯಾವುದೆಂಬು ದನ್ನರಿಯಲು ಶಕ್ತಿ ಕೂಡ ಇಲ್ಲ ಜನಕ್ಕೆ, ಧರ್ಮದ ಮುದ್ರೆ ಬಿದ್ದಿದ್ದರೆ ಸಾಕು, ಮುಗ್ಧತೆಯಿಂದ ಅದಕ್ಕೆ ಶರಣು ಹೊಡೆಯು ವುದು. ಇಂತಿತ್ತು ಜನಾಭಿಪ್ರಾಯ ಮಧ್ಯಮಯುಗದಲ್ಲಿ" ಎಂದು ಲಾರ್ಡ್‌ಬ್ರೈಸ್ (Lord Bryce) ಪ್ರತಿಪಾದಿಸಿದ್ದಾನೆ.

ಕ್ರಿ. ಶ. ೧೫ನೇ ಶತಮಾನದಿಂದ ಪರಿಸ್ಥಿತಿ ಬದಲಾಯಿಸ ಲಾರಂಭವಾಯಿತು. ಅಚ್ಚುಕೂಟ (Printing Press) ಅಭಿಪ್ರಾಯ ಪ್ರಸಾರಕ್ಕೂ ತಿಳಿವಿನ ಬೆಳಕಿಗೂ ಸಹಾಯ ವಾಯಿತು. ಧರ್ಮಸುಧಾರಣೆಯ ಚಳವಳಿ (Reformation) ಪುರೋಹಿತವರ್ಗದ ಅಧಿಕಾರವನ್ನು ಪ್ರತಿಭಟಿಸಿತು ವ್ಯಕ್ತಿಗೆ ಪ್ರಾಮುಖ್ಯತೆ ಕೊಟ್ಟಿತು. ಮುಂದೆ ಬೆಳಗಿದ ವಿಜ್ಞಾನ (Renaissance) ಅಧಿಕಾರವಾದದ ವ್ಯಾಪ್ತಿಗೆ ಬಲವಾದ ಪೆಟ್ಟು ಕೊಟ್ಟಿತು. ಟೆಲಿಫೋನ್, ಟೆಲಿಗ್ರಾಫ್, ಮುಂತಾದ ವಿಜ್ಞಾನ ಸಿದ್ಧ ವಾರ್ತಾವಾಹಿನಿಗಳು ಸಮಾಜದಲ್ಲಿದ್ದ ಅಂತರವನ್ನು ಕಡಮೆ ಮಾಡಿದುವು. ಸಂಚಾರ ಸೌಕರ್ಯಗಳು ವಿಪುಲ ಗೊಂಡುದರಿಂದ ಜನತೆಯ ಜೀವನದಲ್ಲಿ ಪರಿಣಾಮಕಾರಕ ಬದಲಾವಣೆಗಳೇರ್ಪಟ್ಟುವು. ಕೈಗಾರಿಕಾಕ್ರಾಂತಿಯ (Industrial Revolution) ಪರಿಣಾಮವಾಗಿ, ದೊಡ್ಡ ದೊಡ್ಡ ಕೈಗಾರಿಕಾ ಕೇಂದ್ರಗಳೂ, ಅವುಗಳ ಸಮೀಪದಲ್ಲಿ ಪಟ್ಟಣ ಗಳೂ ಹುಟ್ಟಿಕೊಂಡವು. ಇವುಗಳ ಫಲವಾಗಿ ಜನಾಭಿಪ್ರಾಯ ಚೈತನ್ಯಗೊಂಡಿತು. ಹರಟೆ, ಊಹೆ, ಚರ್ಚೆ, ಭಾಷಣ, ಪ್ರಸಾರಪತ್ರ, ಇವುಗಳಿಂದ ಜನಾಭಿಪ್ರಾಯ ಪ್ರಸಾರವಾಗುತ್ತ ಬಂದಿತು. ಜನತೆ ಶ್ರೀಮಂತ ಪಾಳೆಯಗಾರರ ಹಿಡಿತದಿಂದ

ಬಿಡಿಸಿಕೊಂಡಿತು; ವ್ಯಕ್ತಿತ್ವಕ್ಕೆ ಬೆಲೆ ಬಂದಿತು. ಮಾನವನ ರಾಜಕೀಯ ಸ್ವಾತಂತ್ರ್ಯ ಪ್ರತಿಪಾದನೆ ಮೊದಲಾಯಿತು. ಇಂಗ್ಲೆಂಡಿನಲ್ಲಿ ಕಂಡುಬಂದ ಚಾರ್ಟಿಸ್ಟರ ಚಳುವಳಿ (Chartist movement) ಇವಕ್ಕೆ ಒಂದು ನಿದರ್ಶನ.

ಕೈಗಾರಿಕೆಯ ಕ್ರಾಂತಿಯಿಂದ ಉದ್ಭವಿಸಿದ ಸಮಸ್ಯೆಗಳು ಭೀಕರವಾಗುತ್ತಾ ಬಂದುವು. ಬಂಡವಾಳಗಾರರ ಮುಷ್ಟಿಯಲ್ಲಿ ಸಿಲುಕಿ ನರಳುತ್ತಿದ್ದ ಕೂಲಿಗಾರರು ತಮ್ಮ ಹಕ್ಕುಬಾಧ್ಯತೆಯನ್ನು ಕಾಪಿಡಲು ತಾವು ದುಡಿಯುತ್ತಿದ್ದ ಕೈಗಾರಿಕೆಯ ಕ್ಷೇತ್ರಗಳಲ್ಲಿ ಕಲೆಯುಲು ಆರಂಭಿಸಿದರು. ತತ್ಪರಿಣಾಮವಾಗಿ ಟ್ರೇಡ್ ಯೂನಿಯನ್ ಸಂಸ್ಥೆಗಳು ಹುಟ್ಟಿಕೊಂಡವು. ಜೀವನಕ್ಕೆ ಬೇಕಾದ ಸಾಮಗ್ರಿಗಳ ಬೆಲೆ ಹೆಚ್ಚುತ್ತಿದ್ದುದನ್ನು ತಪ್ಪಿಸಲು ಮತ್ತು ದಳ್ಳಾಳಿಗಳ ಹಿಡಿತದಿಂದ ಬಿಡಿಸಲು ಸಹಕಾರ ಪದ್ಧತಿ ತಲೆಯೆತ್ತಿತ್ತು. ಇವೆಲ್ಲದರ ಪರಿಣಾಮವಾಗಿ ಜನ ಒಂದುಗೂಡಲು ಮತ್ತು ಸಾರ್ವಜನಿಕ ವಿಷಯಗಳನ್ನು ವಿಮರ್ಶಿಸಲು ಅವಕಾಶ ಸಿಕ್ಕಿತು.

೪. ಇಂದಿನ ಯುಗ

ಪ್ರಜಾಭಿಪ್ರಾಯ ಹೀಗೆ ಬೆಳೆಯುತ್ತಾ ಬಂದಹಾಗೆಲ್ಲಾ ವ್ಯಕ್ತಿಯ ಅಭಿಪ್ರಾಯ ಮತ್ತು ನಿರ್ಧಾರಗಳಿಗೂ ಬೆಲೆ ಬಂದಿತು. ಹಿಂದಿನ ಕಾಲದಲ್ಲಿದ್ದ ಸಂಪ್ರದಾಯ ಶರಣತೆ ಅಳಿಯಿತು. ಇಂದಿನ ಜನ ಹಿಂದಿನ ಕಟ್ಟಳೆಗಳೆಲ್ಲವೂ ಶ್ರೇಷ್ಠವೆಂದು ಒಪ್ಪುವುದೇನು? ಎಂದಿಗೂ ಇಲ್ಲ. ಒಂದೊಂದರ ಯುಕ್ತಾಯುಕ್ತತೆಯನ್ನೂ ವಿವೇಚಿಸುವುದು ಇಂದಿನ ರೀತಿಯ ತತ್ವ. ಅಂದರೆ, ವ್ಯಕ್ತಿಗೆ ಇಂದು ಒಂದು ಸ್ಥಾನವಿದೆ ಮತ್ತು ವ್ಯಕ್ತಿತ್ವಕ್ಕೆ ಒಂದು,

ಬೆಲೆಯಿದೆ ಎಂದಂತಾಯಿತು. ನಮ್ಮ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಂಬಂಧಗಳ ಎಲ್ಲೆ ವಿಸ್ತೃತವಾದುವು. ನಾವು ಇಂದು ಅಂತರರಾಷ್ಟ್ರೀಯ ಅಂಶಗಳ ಕಡೆ ಹೆಚ್ಚಾದ ನೋಟ ಬೀರಬೇಕಾಗಿದೆ. ಅಂತೆಯೇ ನೋಡುತ್ತಲೂ ಇದ್ದೇವೆ. ಎಲ್ಲಾ ಅಂಶಗಳನ್ನೂ ನೇರವಾಗಿ ನೋಡಲು ಮತ್ತು ಅರಿಯಲು ನಮಗೆ ಸಾಧ್ಯವಿಲ್ಲದಿರಬಹುದು. ಆದರೂ ವೃತ್ತಪತ್ರಿಕೆ, ಚಿತ್ರಪಟ, ರೇಡಿಯೋ ಮುಂತಾದ ಸಮಾಚಾರ ಪ್ರಸಾರ ಸಾಧನೆಗಳ ವಿವರಣೆ ನಮ್ಮಮೇಲೆ ಬಲವಾದ ಪ್ರಭಾವ ಬೀರಿದೆ. ಇಂದು ಜನಾಭಿಪ್ರಾಯ ಪ್ರಭಾವಯುತ ಮತ್ತು ವಿಚಾರಪೂರ್ಣ ಎನಿಸಿದೆ.

ಜನಜೀವನ ಸಮಸ್ಯೆಗಳು ರಾಜಕೀಯದಿಂದ ಬಾಹ್ಯ ಎಂಬ ಅಭಿಪ್ರಾಯ ಇಪ್ಪತ್ತನೆಯ ಶತಮಾನದ ಆದಿಯಲ್ಲೂ ಜನರಲ್ಲಿ ಹರಡಿತ್ತು. ಸರ್ಕಾರದ ಕರ್ತವ್ಯವೆಂದರೆ ರಾಷ್ಟ್ರದ ವ್ಯವಹಾರ, ಶ್ರೀಮಂತವರ್ತನಗಳಲ್ಲಿ ರಾಜತ್ವಕ್ಕಾಗಿದ್ದ ಪ್ರತಿಸ್ಪರ್ಧೆಗಳನ್ನು ಪರಿಹೊಂದಿಸುವುದು, ಯುದ್ಧ, ಧಾರ್ಮಿಕ ಭಿನ್ನಾಭಿಪ್ರಾಯಗಳಲ್ಲಿ ಪ್ರವೇಶ ಇವು ಮಾತ್ರವಾಗಿತ್ತು (It was only a Police State). ಬಡತನ, ನಿರುದ್ಯೋಗ, ಮುಪ್ಪಿನ ಕಷ್ಟ. ರೋಗ, ವಸತಿ, ಮುಂತಾದ ಕಷ್ಟಗಳಿಗೂ ರಾಜಕೀಯಕ್ಕೂ ಏನು ಸಂಬಂಧ ? ಎನ್ನುವ ಭಾವನೆ ಇತ್ತು.

ಕಾಲಕ್ರಮದಲ್ಲಿ ಈ ಭಾವನೆ ಬದಲಾವಣೆ ಹೊಂದುತ್ತ ಬಂದಿತು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲೇ ಜರ್ಮನಿಯ ಏಕೀಕರಣಕ್ಕೆ ಕಾರಣನಾದ ಬಿಸ್ಮಾರ್ಕ್ ಹೇಳಿದ "ಸಾಮಾಜಿಕ ಕ್ರಾಂತಿಯ ಕೋಟಲೆಯಿಂದ ಪಾರಾಗಿ ರಾಜ್ಯ ಉಳಿಯಬೇಕಾದರೆ ಸಾಮಾಜಿಕ ಸೌಖ್ಯನೆಲೆಗೊಳಿಸುವುದರಿಂದ

ಮಾತ್ರವೇ ಸಾಧ್ಯ" ಎಂದು. ಸಾಮಾಜಿಕ ಸೌಖ್ಯ ಸ್ಥಾಪನೆಯೇ (The establishment of a Welfare State) ರಾಷ್ಟ್ರದ ಪರಮ ಕರ್ತವ್ಯವೆಂದು ಇಂದು ಎಲ್ಲರೂ ಅಂಗೀಕರಿಸಿದ್ದಾರೆ. ವ್ಯಕ್ತಿತ್ವ ಪ್ರಾಧಾನ್ಯ ತತ್ವವನ್ನವಲಂಬಿಸಿರುವ ಅಮೇರಿಕದ ಸಂಯುಕ್ತ ಸಂಸ್ಥಾನವೇ ಈ ತತ್ವವನ್ನೊಪ್ಪಿದೆ ಎಂದಮೇಲೆ ಈ ವಿಷಯದಲ್ಲಿ ಹೆಚ್ಚು ಜಿಜ್ಞಾಸೆ ಏಕೆ? ಐರೋಪ್ಯ ರಾಷ್ಟ್ರಗಳೂ ಈ ಮಾರ್ಗದಲ್ಲಿ ನಡೆಯಲು ತೊಡಗಿವೆ. ಇದಕ್ಕೆ ಕಾರಣವೇನು? ಜನಾಭಿಪ್ರಾಯ, ಅದರ ಒತ್ತಾಯ.

ಜನಾಭಿಪ್ರಾಯ ಪುಷ್ಟಿಗೊಳ್ಳಲು ವೃತ್ತಪತ್ರಿಕೆಗಳ ಸಹಾಯ ಬಹುವಾಗಿ ಆಗಿದೆ. ಕ್ರಿ. ಶ. ೧೫ನೇ ಶತಮಾನದಲ್ಲೇ ಅಚ್ಚು ಕೂಟಗಳು ಹುಟ್ಟಿಕೊಂಡಿದ್ದರೂ ಕ್ರಿ. ಶ. ೧೭ನೇ ಶತಮಾನ ದಿಂದ ಮಾತ್ರ ವೃತ್ತಪತ್ರಿಕೆಗಳು ಕ್ರಮವಾಗಿ ಹೊರಟವು. ಕಾಲ ಕ್ರಮೇಣ ಅವು ಜನಾಭಿಪ್ರಾಯದ ಕೈಗನ್ನಡಿಯಾಗುತ್ತಾ ಬಂದುವು.

೫. ಪ್ರಚಾರ ಮತ್ತು ನಾಯಕತ್ವ

ಇನ್ನು ಪ್ರಚಾರಕ್ರಮದ ವಿಷಯವಾಗಿ ಹಲವಾರು ಅಂಶವ ಗಳನ್ನು ಗಮನಿಸುವ:

ಇಂದಿನ ವಿಶ್ವದಲ್ಲಿರುವ ವಿವಿಧ ರಾಜಕೀಯ ಪದ್ಧತಿಗಳೆಲ್ಲಾ ಫ್ಯಾಸಿಸಮ್, ಕಮ್ಯೂನಿಸಂ, ನ್ಯಾಷನಲ್ ಸೋಷಿಯಲಿಸಂ ಮತ್ತು ಪ್ರಜಾಪ್ರಭುತ್ವ—ಜನಾಭಿಪ್ರಾಯಕ್ಕೆ ಬೆಲೆ ಕೊಟ್ಟಿವೆ; ಜನಾಭಿಪ್ರಾಯದ ತಳಹದಿಯ ಮೇಲೂ ನಿಂತಿವೆ. ಅಂದರೆ, ಇಂದಿನ ನಾಯಕಪಟ್ಟ ಜನತೆಯ ಬೆಂಬಲ ಮತ್ತು ಸಮ್ಮತಿ ಯಿಂದ ಮಾತ್ರ ಸಾಧ್ಯವೆಂದಾಯಿತು. ಸರ್ಕಾರವೂ ಜನಾಭಿ

ಪ್ರಾಯ ಪಡೆಯಲು ಯತ್ನಿಸುವುದು ಸ್ವಾಭಾವಿಕ. ಒಂದು ದೃಷ್ಟಿಯಲ್ಲಿ ರಷ್ಯದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ನಿರಂಕುಶ ಸಾರನಿಗಿಂತ ನಿರಂಕುಶ. ಆದರೂ ತತ್ವದೃಷ್ಟಿಯಲ್ಲಿ ಅವನ ಅಧಿಕಾರಕ್ಕೆ ಜನತೆಯ ಬೆಂಬಲ ನಿರೀಕ್ಷೆಯಿದೆ. ಹೋಹೆನ್ ಸೋಲರ್ನ್ ಅಥವಾ ಹ್ಯಾಪ್ಸ್‌ಬರ್ಗ್ ಚಕ್ರವರ್ತಿಗಳು ಹಿಟ್ಲರ ನಷ್ಟು ನಿರಂಕುಶರಾಗಿರಲಿಲ್ಲ. ಆದರೂ ಹಿಟ್ಲರನು ಪದವಿಗೆ ಬಂದುದು ಜನದ ಓಟಿನ ಪರಿಣಾಮವಾಗಿ. ರಾಷ್ಟ್ರದ ನಾಯಕತ್ವ ಜನಾಭಿಪ್ರಾಯವನ್ನು ಸದಾ ಪ್ರತಿಬಿಂಬಿಸುವುದೆಂದು ಇಷ್ಟರಿಂದಲೇ ತಿಳಿಯಬಾರದು. ಕೆಲವು ಸಂದರ್ಭದಲ್ಲಿ ನಾಯಕ ನೆನಿಸುವನೇ ಅಭಿಪ್ರಾಯವನ್ನು ಸೃಷ್ಟಿಸಿ ನಾನಾರೂಪದಲ್ಲಿ ಅದಕ್ಕೆ ಬೆಂಬಲ ಪಡೆಯಲೆಳಸುವನು. ಭಾರತದಲ್ಲಿ ಎರಡು ಜನಾಂಗವಿದೆ (Two nations) ಎನ್ನುವ ವಿಚಿತ್ರ ಅಭಿಪ್ರಾಯ ಮೂಡಿಸಿ, ಹಬ್ಬಿಸಿ, ಪಾಕೀಸ್ತಾನ ನಿರ್ಮಿಸಿಕೊಂಡ ಮಹಮುದಾಲಿ ಜಿನ್ನಾ ಜನಾಭಿಪ್ರಾಯವನ್ನು ಪ್ರತಿಬಿಂಬಿಸಲಿಲ್ಲ. ಆದರೂ ಅನೇಕ ಸಂದರ್ಭಗಳಲ್ಲಿ ತಿಳಿಯದ ಜನಕ್ಕೆ ಸರಿಯಾದ ಬೆಳಕು ತೋರಿ ಪ್ರಜಾಭಿಪ್ರಾಯವನ್ನು ಮೂಡಿಸುವುದೂ ನಾಯಕನ ಕರ್ತವ್ಯ. ಸರ್ಕಾರ ನಡೆಸುವ ಕೆಲಸಗಳೆಲ್ಲಾ ಜನಾಭಿಪ್ರಾಯಕ್ಕನುಗುಣವಾಗಿರುವುದೇನು? ಜನಾಭಿಪ್ರಾಯವನ್ನು ಪಡೆದೇ ಎಲ್ಲ ಕೆಲಸವನ್ನೂ ನಡೆಸುತ್ತಿದೆಯೇನು?

ಇಂದು ಭಾರತದಲ್ಲಿ ಪ್ರಜಾ ಸರ್ಕಾರವಿದೆ ಅಂದಮಾತ್ರಕ್ಕೆ ಅದು ಆಚರಣೆಗೆ ತಂದಿರುವ ಕಾನೂನುಗಳಿಗೆಲ್ಲಾ ಪ್ರಜೆಗಳ ಸಮ್ಮತಿ ಇದೆಯೇ? ಪ್ರಜಾಭಿಪ್ರಾಯದ ಆಧಾರದಮೇಲೆ ಅವು ನಿಂತಿವೆಯೇ? ಇಲ್ಲ. ರಾಜ್ಯಾಂಗ ನಿರ್ಮಾಣಕ್ಕೋಸ್ಕರ ಏರ್ಪಟ್ಟ ರಾಜ್ಯಾಂಗ ಸಭೆ ಈಗ ಶಾಸಕಾಂಗವಾಗಿ ಕೆಲಸಮಾಡುತ್ತಿದೆ.

ಹಿಂದೂಕೋಡ್ ಬಿಲ್ ಮೊದಲಾದುವನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದೆ. ಜನಾಭಿಪ್ರಾಯವನ್ನು ಪಡೆದು ಈ ಕೆಲಸ ಮಾಡುತ್ತಿದೆಯೇ ಎಂದರೆ ಇಲ್ಲ. ರಾಷ್ಟ್ರಾಧ್ಯಕ್ಷ ಡಾಕ್ಟರ್ ರಾಜೇಂದ್ರ ಪ್ರಸಾದ್, ಕಾಂಗ್ರೆಸ್ಸಿನ ಅಧ್ಯಕ್ಷ ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ ಇವರ ಹೇಳಿಕೆಗಳೇ ಇದಕ್ಕೆ ಸಾಕ್ಷಿ. ವಿವಿಧ ಪ್ರಾಂತಗಳು ಸಾಧಿಸಿರುವ ಜಮೀನ್ದಾರಿ ಕಾನೂನು, ಪಾನ ನಿರೋಧ ಕಾನೂನು ಇವೇ ಮೊದಲಾದವು ಒಳ್ಳೆಯವೇನೊ ನಿಜ. ಆದರೆ ಜನಾಭಿಪ್ರಾಯದ ಸಮ್ಮತಿಯಿಂದ ಹುಟ್ಟಿದುವಲ್ಲ.

ತಾನು ಮಾಡುವ ಕಾರ್ಯಗಳ ವಿಷಯವಾಗಿ ಜನದ ಬೆಂಬಲ ಪಡೆಯಲು ಬೇಕಾದ ಪ್ರಚಾರವನ್ನು ಸರ್ಕಾರ ಮಾಡುತ್ತಿದೆ. ಆದಕ್ಕಾಗಿ ಅಧಿಕಾರಿಗಳೂ ನೇಮಕವಾಗಿದ್ದಾರೆ. ಸಮಾಚಾರ ಮತ್ತು ಪ್ರಚಾರ ಖಾತೆ (Information and Broad-casting Portfolios) ಮತ್ತು ಅವುಗಳ ಮಂತ್ರಿಗಳನ್ನು ಎಲ್ಲಾ ಸರ್ಕಾರದಲ್ಲೂ ನಾವು ನೋಡಬಹುದಾಗಿದೆ. ಸರ್ಕಾರ ಏನೇನು ಮಾಡಬೇಕೆಂದಿದೆ, ಏನೇನನ್ನು ನಡೆಸಿದೆ ಎನ್ನುವ ವಿಷಯ ಜನರಿಗೆ ತಿಳಿಯುವಂತೆ ಪ್ರಚಾರ ನಡೆಸುವುದು ಈ ಶಾಖೆಯ ಕೆಲಸ.

ತಾವು ಆಸಕ್ತಿ ವಹಿಸಿದ ಅಂಶದ ಪರವಾಗಿ ಜನಾಭಿಪ್ರಾಯವನ್ನು ಒಲಿಸಿಕೊಳ್ಳುವ ಪ್ರಯತ್ನ ಹೊಸದಲ್ಲ; ಹಿಂದಿನಿಂದಲೂ ನಡೆದುಬಂದಿದೆ. ಆದರೆ ಒಂದು ವ್ಯತ್ಯಾಸವಿದೆ. ಹಿಂದಿನ ರೀತಿ ವ್ಯವಸ್ಥಿತವಾಗಿರಲಿಲ್ಲ; ಇಂದಿನ ರೀತಿಗೆ ವ್ಯವಸ್ಥೆಯ ಬಣ್ಣ ಬಂದಿದೆ. ಇಂದಿನ ಪ್ರಚಾರದಲ್ಲಿ ಸತ್ಯ, ಅಸತ್ಯ, ಅಪದ್ಧ ಎಲ್ಲಾ ಮಿಶ್ರ.

ಪ್ರಚಾರವಾಹಿನಿಗಳೆನಿಸಿದ ವೃತ್ತಪತ್ರಿಕೆ, ಆಕಾಶವಾಣಿ,

ಚಲನಚಿತ್ರ ಇವೇ ಮೊದಲಾದವುಗಳನ್ನು ತಮ್ಮ ವಶದಲ್ಲಿಟ್ಟು ಕೊಳ್ಳಲು ಪೈಪೋಟಿ ನಡೆಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯಗಳಿವೆ. ರಾಥರ್‌ಮಿಯರ್ ಮತ್ತು ಬೀವರ್ ಬ್ರೂಕ್ ಇವರುಗಳು ಅನೇಕ ವೃತ್ತಪತ್ರಿಕೆಗಳ ಮೇಲೆ, ಅವುಗಳ ಸುದ್ದಿಗಳ ಮೇಲೆ, ಸಂಪಾದಕೀಯ ಬರಹಗಳ ಮೇಲೆ, ಹತೋಟಿ ಇಟ್ಟಿಲ್ಲ ವೇನು? ಇವರ ಉದ್ದೇಶವೇನು? ತಮ್ಮ ಅಭಿಪ್ರಾಯಕ್ಕನು ಗುಣವಾಗಿ ಜನಾಭಿಪ್ರಾಯ ರೂಪಿಸುವುದೆ. ೧೯೧೭ರಿಂದ ರಷ್ಯದಲ್ಲಿ ಕಮ್ಯೂನಿಸ್ಟ್ ನಾಯಕರು ಮಾಡುತ್ತಿರುವುದೇನು ? ಸಾಮ್ಯವಾದ ತತ್ವವೇ ಪರಮ ತತ್ವವೆಂಬ ಅಭಿಪ್ರಾಯವನ್ನು ನಿರ್ಬಂಧವಾಗಿ ಜನರ ಮೇಲೆ ಹೊರಿಸುವುದೇ ಅಲ್ಲವೆ? ೧೯೨೦ ರಲ್ಲಿ ಸೋವಿಯಟ್ ನಾಯಕರು ರಾಜಕೀಯ ಪ್ರಚಾರಕ್ಕಾಗಿ ರಾಜಕೀಯ ಸಮಿತಿಯೊಂದು ರಚನೆಯಾಗಬೇಕೆಂಬ ಕಟ್ಟಳೆ ಹೊರಡಿಸಿದರು.' ಇದರ ಉದ್ದೇಶ ಸಾಮ್ಯವಾದದ ಕಡೆ ಜನಾಭಿ ಪ್ರಾಯವನ್ನು ಒಲಿಸಿಕೊಳ್ಳುವುದೇ ಆಗಿತ್ತು. ತಾನು ವಿಜಯಿ ಯಾದ ತರುಣದಲ್ಲಿ ಶಕ್ತಿಸಿದ್ಧಾಂತಿ ಹಿಟ್ಲರ್ ಪ್ರಚಾರಕಾರ್ಯ ಕ್ಕಾಗಿ ಒಂದು ಮಂತ್ರಿಸ್ಥಾನವನ್ನೇರ್ಪಡಿಸಿದ.

ಇಂತು ತಮ್ಮ ತಮ್ಮ ಅಭಿಪ್ರಾಯಗಳಿಗನುಗುಣವಾಗಿ ಜನರ ಅಭಿಪ್ರಾಯವನ್ನು ಸೆಳೆಯುವ ಪ್ರಯತ್ನಗಳು ಉದ್ಭವಿಸಿ, ಪ್ರಚಾರಮಾರ್ಗ ಕೆಳಮಟ್ಟಕ್ಕೆ ಇಳಿಯುತ್ತ ಬಂದುದರಲ್ಲಿ ಆಶ್ಚರ್ಯವೇನಿದೆ? ಈ ಬಗೆಯ ಪ್ರಚಾರಸಾಧನೆಯ ಉದ್ದೇಶ ವೇನು ? ತಾವು ಮುಂದಿಡುವ ಅಂಶಗಳ ಸತ್ಯಾಸತ್ಯಗಳ ತುಲನ ವಲ್ಲ, ವಿಮರ್ಶೆಯಲ್ಲ, ಶಿಕ್ಷಣವಲ್ಲ, ವಿಚಾರಸ್ವಾತಂತ್ರ್ಯವೂ ಅಲ್ಲ. ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಅಭಿಪ್ರಾಯಕ್ಕೆ ಜನತೆಯ ಬೆಂಬಲವುಂಟೆಂದು ಬಣ್ಣ ಕಟ್ಟುವ ವೇಷ.

ಅದಕ್ಕಾಗಿ ವಿಷಯಗಳನ್ನು ವಿಚ್ಛೇದಿಸಿ, ಅಸಂಬದ್ಧ ಹೇಳಿಕೆಗಳ ನ್ನಿತ್ತು, ಜನರ ಮನೋಭಾವನೆಗಳನ್ನು ಉದ್ರೇಕಿಸಿ, ಪ್ರಭಾವ ಬೀರಿ ತನ್ನ ಅಭಿಪ್ರಾಯಕ್ಕೆ ಜನತೆಯ ಬೆಂಬಲಪಡೆಯುವುದು. ಇಂತಾದರೆ, ಜನ ನಿಜವನ್ನರಿಯುವುದು ಹೇಗೆ? ಸರಿಯಾದ ಅಭಿಪ್ರಾಯ ಜನರಲ್ಲಿ ಮೂಡುವುದೆಂತು?

ಪ್ರಚಾರಕ್ರಮ ಎಷ್ಟು ದುಷ್ಟವಾಗಿದೆ! ಅಹುದು, ಆದರೆ ಪ್ರಚಾರ ಬೇಡವೆ? ಪ್ರಚಾರ ಬೇಕು. ಈಗ್ಗೆ ಎರಡು ಸಹಸ್ರ ವರ್ಷಗಳ ಹಿಂದೆ ಪ್ಲೇಟೊ ತಾನು ಬಯಸಿದ್ದ—ತನ್ನ 'ರಿಪಬ್ಲಿಕ್'ನಲ್ಲಿ ನಿರೂಪಿಸಿದ ಸರ್ಕಾರಕ್ಕೆ ಪ್ರಚಾರ ನಡೆಸ ಲಿಲ್ಲವೇ? ಅಂದಿನಿಂದಲೂ ನಡೆದುಬಂದಿದೆ. ಪ್ರಚಾರಕಾರ್ಯ. ಹಿಟ್ಲರನ ಮಂತ್ರಿ ಗೋಬೆಲ್ಸ್ ಪ್ರಚಾರದ ಅಧಿದೇವತೆಯೇ ಆಗಿದ್ದ. ಜೂಲಿಯಸ್ ಸೀಸರನ ರಾಜಕೀಯ ಪ್ರಚಾರ, ರೋಮನ್ ಕ್ಯಾಥೊಲಿಕ್ ಧರ್ಮಪಂಥದ ಪ್ರಚಾರ, ನೆಪೋಲಿ ಯನ್ನನ ಉಗ್ರಪ್ರಚಾರ, ಕ್ಯಾಥರೀನ್ ರಾಣಿಗಾಗಿ ಪೊಟೆಮ್ಕಿನ್ ನಡೆಸಿದ ಪ್ರಚಾರ, ಅಮೇರಿಕದ ಸ್ವಾತಂತ್ರ್ಯಕಾಗಿ ಸ್ಯಾಮ್ ಆಡಮ್ ನಡೆಸಿದ ಪ್ರಚಾರ, ಈ ಎಲ್ಲ ಇತಿಹಾಸದ ನಿದರ್ಶನ ಗಳೂ ನಾಯಕನು ಜನತೆಯನ್ನು ಒಲಿಸಿಕೊಳ್ಳಲು ಹೇಗೆ ಪ್ರಚಾರಕ್ರಮ ನಡೆಸುವನೆಂಬುದಕ್ಕೆ ನಿದರ್ಶನಗಳು.

ಇತಿಹಾಸದ ಪಿತನೆನಿಸಿದ ಹೆರೋಡೊಟಸ್ ಅಥೆನ್ಸ್ ರಾಷ್ಟ್ರದ ಪ್ರಚಾರಕನೆಂದು ಬರ್ಟ್‌ರೆಂಡ್ ರಸಲ್ ಹೇಳಿದ್ದಾನೆ. ಸೀಸರ್, ಆಕ್ಟೇವಿಯಸ್, ಆಂಟೋನಿ, ಸಿಸಿರೊ ಇವರೆಲ್ಲಾ ನುರಿತ ಪ್ರಚಾರಕರಾದುದರಿಂದಲೇ ಅಷ್ಟು ಪ್ರಾಬಲ್ಯದಿಂದಿದ್ದರು. ಮಧ್ಯಯು ಅಂತಯುರ್ದ್ಧಗಳಲ್ಲಿ ಯೂರೋಪಿನಲ್ಲಿ ಪೋಪರ ವಿಜಯಕ್ಕೆ ಕಾರಣ ಅವರ ಪ್ರಚಾರ ವೈಖರಿ. ಸ್ಪೇನ್ ರಾಜ

ಎರಡನೇ ಫಿಲಿಪ್ಸ್ ಎಲಿಜಬೆತಳ ರಾಜ್ಯ ಜಯಿಸಲು ಒಂದು ಅಜೇಯ ನೌಕಾಪಡೆಯನ್ನು ಕಳುಹಿಸಿದನಷ್ಟೆ. ಆ ಸಂದರ್ಭ ದಲ್ಲಿ ಉಭಯ ರಾಷ್ಟ್ರಗಳು ನಡೆಸಿದ ಪ್ರಚಾರ—ಎಲಿಜಬೆತಳು ಕ್ಯಾಥೊಲಿಕ್ ಪಂಥದವರಿಗೆ ನಾನಾ ತೆರದ ಹಿಂಸೆಕೊಡುತ್ತಿದ್ದಾ ಳೆಂದು ಫಿಲಿಪ್ಸ್, ಫಿಲಿಪ್ಸ್ ಪ್ರಾಟೆಸ್ಟೆಂಟರನ್ನು ಪೀಡಿಸುತ್ತಿದ್ದಾ ನೆಂದು ಎಲಿಜಬೆತಳು—ಉಭಯ ರಾಷ್ಟ್ರಗಳ ಜನರ ಉದ್ರೇಕ ಮತ್ತು ಸಮರಕ್ಕೆ ಕಾರಣವಾಯಿತು.

ಸಾಹಿತ್ಯವೂ ಪ್ರಚಾರಕ್ಕೆ ನೆರವು ನೀಡಿದೆ ಎನ್ನುವುದು ಒಂದು ಸೋಜಿಗ. ಷೇಕ್ಸ್‌ಪಿಯರ್‌ನಂತಹ ಉದ್ದಾಮ ಸಾಹಿತಿಯೂ ಒಂದು ದೃಷ್ಟಿಯಲ್ಲಿ ಪ್ರಚಾರಕನೆಂದು ಬರ್ಟ್‌ರೆಂಡ್ ರಸಲ್ ಅಭಿಪ್ರಾಯಪಟ್ಟಿದ್ದಾನೆ. ಆತನ "ಹೆನ್ರಿ ದಿ ಎಯಿತ್" ಎಲಿಜಬೆತಳ ಪರವಾಗಿಯೂ, "ಮ್ಯಾಕ್ಬೆತ್" ಜೇಮ್ಸ್ ಪರ ವಾಗಿಯೂ ಪ್ರಚಾರದ ಉದ್ದೇಶದಿಂದ ಬರೆದ ನಾಟಕಗಳು. ಚಾರಲ್ಸ್ ಡಿಕನ್ಸಿನ 'ನಿಕೊಲಾಸ್ ನಿಕಲ್ಬಿ' ಅಂದಿನ ಖಾಸಗಿ ಶಾಲೆಗಳಲ್ಲಿನ ಹೀನಸ್ಥಿತಿಯನ್ನು ಹೊರಗೆಡಹಿಲ್ಲವೆ? 'ಅಂಕಲ್ ಟಾಮ್ಸ್ ಕ್ಯಾಬಿನ್' ದಾಸ್ಯ ನಿರೋಧ ಪ್ರಚಾರವಲ್ಲವೆ? 'ಬ್ಲಾಕ್‌ಬ್ಯೂಟಿ' ಪ್ರಾಣಿಹಿಂಸಾ ನಿರೋಧಕ ಪ್ರಚಾರವಲ್ಲವೆ?

ಅಧಿಕಾರದಲ್ಲಿದ್ದ ಸರ್ಕಾರಗಳು ಎಂತು ಪ್ರಚಾರ ನಡೆಸಿ ತೆಂಬುದಕ್ಕೆ ಎರಡನೇ ವಿಶ್ವಸಂಗ್ರಾಮದ ಕಾಲದಲ್ಲಿನ ಒಂದೆರಡು ನಿದರ್ಶನಗಳನ್ನು ಗಮನಿಸುವ. ಜಪಾನ್ ಮತ್ತು ಜರ್ಮನಿ ತಾವು ಜಯಸಿದ ರಾಜ್ಯಗಳ ಮೇಲೆ ಎಂತೆಂತಹ ಅಮಾನುಷ ಕೃತ್ಯಗಳನ್ನು ನಡಸಿದುವೆಂಬ ವಿಷಯವಾಗಿ ಅನೇಕ ಕಥೆಗಳು ಪ್ರಚಾರವಾಗಲಿಲ್ಲವೇನು? ಅಷ್ಟೇಕೆ? ಅಂದಿನ ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್ ಹಿಟ್ಲರನ ವಿಷಯವಾಗಿ ಆಡಿದ ಮಾತುಗಳ

ಸರಣಿ ಹೀಗೆ: "ಹಿಟ್ಲರನೊಬ್ಬ ದುಷ್ಟರಾಕ್ಷಸ, ರಕ್ತಪಿಪಾಸಿ, ಸಮಗ್ರ ಯೂರೋಪು ತನ್ನ ಪಾದದಡಿ ಇರಬೇಕೆಂಬ ಆಸೆ ಅವನದು. ಕೊಲೆ, ನಾಶ, ಮುಂತಾದ ದುಷ್ಕೃತ್ಯಗಳನ್ನು ರಷ್ಯ ಮತ್ತು ಏಷ್ಯದ ಜನತೆಯ ಮೇಲೆ ಎಸಗಿದ್ದಾನೆ. ರಕ್ತದಾಹಿ, ವಿಷಸರ್ಪ ಸದೃಶನು. ಈತನ ಸೈನ್ಯಯಂತ್ರ ಹೊಸರೀತಿಯಲ್ಲಿ ಕೊಲೆ, ಸೊರೆ, ಸಂಹಾರಕೃತ್ಯಗಳನ್ನೆಸಗುತ್ತ ಮುನ್ನುಗ್ಗುತ್ತಿದೆ". ಈ ಮಾತುಗಳಲ್ಲಿ ಸತ್ಯವಿಲ್ಲದೆ ಇಲ್ಲ, ಎಲ್ಲವೂ ಸತ್ಯವಲ್ಲ. ಚರ್ಚಿಲ್ ಇಷ್ಟು ಉದ್ರೇಕಪೂರಿತವಾಗಿ ಹೇಳದೆ ಇದ್ದಿದ್ದರೆ ಜನತೆಯ ಮೇಲೆ ಸರಿಯಾದ ಪರಿಣಾಮ ಉಂಟಾಗುತ್ತಿರಲಿಲ್ಲ. ಹಿಟ್ಲರನ ದೌಷ್ಟ್ಯವನ್ನು ತಡೆಗಟ್ಟುವ ಕಾರ್ಯಕ್ರಮಗಳಿಗೆ ಪೂರ್ಣ ಬೆಂಬಲ ಸಿಕ್ಕುವುದೂ ಕಷ್ಟವಾಗುತ್ತಿತ್ತು.

ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಒಂದೊಂದು ಜನತಾ ಚಳವಳಿಯೂ ತಕ್ಕ ಪ್ರಚಾರದೊಡನೆ ಹೊಂದಿಕೊಂಡಿದೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುನ್ನ ನಡೆದ ಈ ಸಂಬಂಧವಾದ ಪ್ರಚಾರ ಜನರಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಹುರುಪು ಕೊಟ್ಟಿತು. ಅಂತರ್ಯುದ್ಧದ ಕಾಲದಲ್ಲಿ ನಡೆದ ಪ್ರಚಾರ ಒಂದು ವ್ಯವಸ್ಥಿತ ರೀತಿಯಲ್ಲಿ ಜರುಗಿತ್ತು. ಏಬ್ರಹಾಂ ಲಿಂಕನ್, ಡೇವಿಸ್ ಮೊದಲಾದ ನಾಯಕರು ಪ್ರಚಾರಕಾರ್ಯದಲ್ಲಿ ಪರಿಣಿತ ರೆನ್ನಬಹದು. ತಮ್ಮ ಉತ್ತಮ ಅಭಿಪ್ರಾಯಗಳನ್ನು ಜನರ ಮನಸ್ಸಿಗೆ ನಾಟುವಂತೆ ಪ್ರಚಾರ ನಡೆಸಿ, ಜನ ಅದಕ್ಕೊಲಿಯು ವಂತೆ ಮಾಡಿ, ಜನಾಭಿಪ್ರಾಯ ರೂಪಿಸಿದವರಲ್ಲಿ ಲಿಂಕನ್, ರೂಸ್‌ವೆಲ್ಟ್ ಮುಂತಾದವರ ಪ್ರಚಾರ ರೀತಿಯನ್ನು ಉಲ್ಲೇಖಿಸ ಬಹುದು. ಇದು ವ್ಯವಸ್ಥಿತ ಪ್ರಜಾಪ್ರಭುತ್ವದ ಮಾತು.

ಬೇರೊಂದು ಪಕ್ಷದ ಅಭಿಪ್ರಾಯಕ್ಕೆ ಬೆಲೆಕೊಡದೆ, ಅದರ

ಪ್ರಚಾರಕ್ಕೆ ಅವಕಾಶವೀಯದೆ, ಆಳರಸರ ಅಭಿಪ್ರಾಯವೇ ಪ್ರಜಾಕೋಟಿಯ ಅಭಿಪ್ರಾಯವೆಂದು ಸರ್ವಾಧಿಕಾರ ರಾಷ್ಟ್ರಗಳು ಸಾರುತ್ತ ಹೊರಟಿವೆ. ಭಾಷಣ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ,— ಇವೇ ಮೊದಲಾದ ಆಜನ್ಮಸಿದ್ಧ ಹಕ್ಕುಗಳಿಗೆ ಆ ರಾಜ್ಯಗಳಲ್ಲಿ ನೆಲೆಯೇ ಇಲ್ಲ. ಸಾಮ್ಯವಾದಕ್ಕೆ ವಿರೋಧವಾದ ಪತ್ರಿಕೆಗಳಿವೆಯೇನು ರಷ್ಯದಲ್ಲಿ ? ಜರ್ಮನಿಯಲ್ಲೂ ಅಷ್ಟೆ. ನಾಸಿ ವಿರೋಧ ಪ್ರಚಾರಕ್ಕೆ ಅವಕಾಶವಿರಲಿಲ್ಲ. ನಾಮ ವಿರೋಧಾಭಿಪ್ರಾಯ ವ್ಯಕ್ತಪಡಿಸಿದ ಜರ್ಮನ್ ಪ್ರಜೆಗೆ ಕೂಡಲೇ ಪರಲೋಕ ಪ್ರಾಪ್ತಿ. ಹಿಂದೆ ನೆಪೋಲಿಯನ್, ಬಿಸ್ಮಾರ್ಕ್ ಇವರೆಲ್ಲಾ ನಡೆಸಿದ ರೀತಿ ನೀತಿಯೂ ಹೀಗೇ ಇತ್ತು. ಹಿಟ್ಲರನ ಕಾಲದಲ್ಲಿ ಜರ್ಮನರಿಗೆ ಕೊಡುತ್ತಿದ್ದ ಶಿಕ್ಷಣ ಹಿಟ್ಲರನ ಸಿದ್ಧಾಂತ ಮತ್ತು ನೀತಿಗಳನ್ನು ಪ್ರತಿಪಾದಿಸಿ ಸಮರ್ಥಿಸಿದ ಪಠ್ಯಪುಸ್ತಕಗಳ ಮೂಲಕ. "ಮೇನ್ ಕೆಂಪ್" ನಾಸಿ ಜರ್ಮನಿಯ ಪವಿತ್ರ ಗ್ರಂಥ. ಸ್ಟಾಲಿನ್ನಿನ ರಷ್ಯದಲ್ಲೂ ಹೆಚ್ಚು ಕಡಮೆ ಇದೇ ರೀತಿಯಾದ ಪ್ರಚಾರಕ್ರಮವಿದೆ.

ಆರ್ಥಿಕ ವಿಷಯಗಳಲ್ಲೂ ಅಭಪ್ರಾಯ ಪ್ರಚಾರ ಇದೇ ತೆರನಾಗಿದೆ. ಅವುಗಳಲ್ಲೂ ಹಲಕೆಲವರ ಅಭಿಪ್ರಾಯ ಜನತೆಯ ಮೇಲೆ ಬಲವಂತವಾಗಿ ಬಿದ್ದು, ಅದೇ ಜನಾಭಿಪ್ರಾಯವೆಂದು ಪರಿಣಿತವಾಗಿರುವುದು ನಮಗೆ ತಿಳಿದ ವಿಷಯ. ೧೮೩೯ರಲ್ಲಿ ಕಾಬ್ಡನ್ ಮತ್ತು ಬ್ರೈಟ್ ಧಾನ್ಯ ಸುಂಕ ನಿರೋಧಕ ಅಭಿಪ್ರಾಯ ಮೂಡಿಸಿದುದೂ, ರಷ್ಯಾದ ಸಾಮ್ಯವಾದ ಪ್ರಚಾರ ಕ್ರಮವೂ, ಅಮೆರಿಕದ ಸಂಯುಕ್ತ ಸಂಸ್ಥಾನ ಮಾರ್ಷಲ್ ಯೋಜನೆಯನ್ನು ಜನಾದರಣೀಯವನ್ನಾಗಿ ಮಾಡಲು ನಡೆಸುತ್ತಿರುವ ಪ್ರಚಾರವೂ ಇದಕ್ಕೆ ನಿದರ್ಶನ.

ಅಂದಮೇಲೆ, ಸಾಮಾನ್ಯವಾಗಿ ಎಲ್ಲಾ ಸರ್ಕಾರಗಳೂ ಪ್ರಚಾರಕ್ರಮವನ್ನು ಕೈಗೊಂಡಿವೆ ಎಂದಾಯಿತು. ಫ್ರಾನ್ಸಿನಲ್ಲಿ 'ಹ್ಯಾವಾಸ್' ಏಜನ್ಸಿ, ಬ್ರಿಟನ್ನಿನಲ್ಲಿ 'ರಾಯಿಟರ್ಸ್', ಜರ್ಮನಿಯಲ್ಲಿ 'ಉಲ್ಫ್' ಭಾರತದಲ್ಲಿ 'ಪ್ರೆಸ್ ಟ್ರಸ್ಟ್ ಆಫ್ ಇಂಡಿಯ' ಇವೆಲ್ಲಾ ಸುದ್ದಿಪ್ರಸರಿಸುವ ಸಂಸ್ಥೆಗಳು. ಪ್ರತಿ ಸರ್ಕಾರವೂ ವಿದೇಶಾಂಗಶಾಖೆಯ ಮೂಲಕ ವ್ಯವಸ್ಥಿತ ಪ್ರಚಾರವನ್ನು ನಡೆಸುತ್ತಿದೆ. ಆದರೆ ಅಸತ್ಯ ಮತ್ತು ಅಪವಾದ ದಿಂದ ಕೂಡಿದ ಅಪಪ್ರಚಾರವೇ ಇಂದಿನ ಪ್ರಪಂಚದಲ್ಲಿ ಜಾಸ್ತಿ. ಪೊಲೀಸ್ ಕಾರ್ಯಾಚರಣೆಗೆ ಮೊದಲು ಹೈದರಾಬಾದ್ ಭಾರತದ ವಿಷಯವಾಗಿ ಹರಡುತ್ತಿದ್ದ ಸುದ್ದಿಗಳು ಮತ್ತು ಪಾಕಿಸ್ಥಾನ ಭಾರತದ ವಿಷಯವಾಗಿ ಹರಡಿದ ಹಲವಾರು ಸುದ್ದಿಗಳೇ ಈ ಬಗೆಯ ಅಪಪ್ರಚಾರಕ್ಕೆ ನಿದರ್ಶನಗಳು. ಪ್ರಚಾರ ಕಾರ್ಯಕ್ರಮ ಕ್ಕಾಗಿ ಎಲ್ಲ ರಾಷ್ಟ್ರಗಳೂ, ಅದರಲ್ಲೂ ಸರ್ವಾಧಿಕಾರಿ ರಾಷ್ಟ್ರ ಗಳೂ—ಅಪಾರ ಹಣವನ್ನು ವ್ಯಯಮಾಡುತ್ತಿವೆ.

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ ಪ್ರಚಾರ ಕ್ರಮ ಉಂಟು; ಅಗತ್ಯವೂ ಅಹುದು. ಈ ಪ್ರಚಾರದ ಉದ್ದೇಶ ಪ್ರಜೆಗಳಲ್ಲಿ ಅರಿವು ಉಂಟುಮಾಡುವುದು ಮತ್ತು ಸರ್ಕಾರ ನಡೆಸುತ್ತಿರುವ ಕಾರ್ಯಗಳ ಬಗ್ಗೆ ಜನಕ್ಕೆ ತಿಳಿವಳಿಕೆಕೊಡುವುದು ಮತ್ತು ಅದರ ಒಪ್ಪಿಗೆಯನ್ನು ಪಡೆಯುವುದು, ಇವು ಮಾತ್ರ ಆಗಿರಬೇಕು. ನಿಜನಾದ ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ಸ್ವತಂತ್ರ್ಯವಿರು ವುದಲ್ಲದೆ ವಿರೋಧಾಭಿಪ್ರಾಯಕ್ಕೂ ಪುರಸ್ಕಾರವಿದೆ. ಏಕೆಂದರೆ, ಜನಾಭಿಪ್ರಾಯಕ್ಕನುಗುಣವಾಗಿ ವರ್ತಿಸುವುದು ಜವಾಬ್ದಾರಿ ಸರ್ಕಾರಪದ್ಧತಿಯ ಲಕ್ಷಣ. ಇಂಗ್ಲೆಂಡ್, ಸಂಯುಕ್ತ ಸಂಸ್ಥಾನ ಮೊದಲಾದ ಪ್ರಜಾಪ್ರಭುತ್ವ ಪ್ರಗತಿಗೊಂಡ ಎಡೆಗಳಲ್ಲಿ

ಇಂತಹ ಅಭಿಪ್ರಾಯ ಸ್ವಾತಂತ್ರ್ಯವನ್ನು ಕಾಣಬಹುದು. ಪ್ರಜಾಪ್ರಭುತ್ವದ ಎಡೆಯಲ್ಲಿ ಕಾಲಿಡುತ್ತಿರುವ ನಾವು ಈ ಆಶಯವನ್ನು ಎದುರುನೋಡಬೇಕಾಗಿದೆ.

ಪ್ರಚಾರ ಶಿಕ್ಷಣವೆನಿಸದು. ಪ್ರಚಾರದಲ್ಲಿ ಭಾವನೆ ಮತ್ತು ಉದ್ರೇಕಕ್ಕೆ ಪ್ರಾಮುಖ್ಯತೆ ಇದೆ. ಮಾನವನ ಮನಶ್ಶಕ್ತಿಯ ಕಡೆಗೆ ಪ್ರಚಾರಕ ಗಮನ ಕೊಡುವುದಿಲ್ಲ. ವಿಷಯವನ್ನು ಗ್ರಹಿಸಿ ಆತನು ಯೋಚಿಸುವಂತೆ ಮಾಡುವುದಿಲ್ಲ. ನಾಯಕನೆನಿಸಿಕೊಂಡವನು ತನ್ನ ನಾಸಿಕದ ನೇರಕ್ಕೆ ಜನರ ಮನಸ್ಸನ್ನು ತಿರುಗಿಸಲೆತ್ನಿಸುವುದರಿಂದ ಜನ ಇಂತಹ ಪ್ರಚಾರದ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ಯಾವುದು ಒಳ್ಳೆಯದು. ಯಾವುದರಿಂದ ಹಾನಿಯಿದೆ, ಅನ್ನುವುದನ್ನು ಜನ ಆಲೋಚಿಸಿ ನಿಷ್ಕರ್ಷಿಸಬೇಕು. ಅಂದರೆ, ಜನಕ್ಕೆ ಸರಿಯಾದ ಶಿಕ್ಷಣಬೇಕು. ಅಶಿಕ್ಷಿತ ಜನತೆಯಿಂದ ಪ್ರಜಾಪ್ರಭುತ್ವಕ್ಕೆ ಕೇಡುಂಟು. ಅಧಿಕಾರ ದುರುಪಯೋಗವುಂಟು.

ಜನಾಭಿಪ್ರಾಯ ಪ್ರಕಟವಾಗುವುದೆಂತು ? ಗೊತ್ತಾದ ಅವಧಿಗಳಲ್ಲಿ ನಡೆಯುವ ಪ್ರತಿನಿಧಿ । ಚುನಾವಣೆಗಳಿಂದ. ಮೂರು ನಾಲ್ಕು ಅಥವಾ ಐದು ವರ್ಷಗಳಿಗೊಮ್ಮೆ ಪೌರನು ಪ್ರತಿನಿಧಿಗಳನ್ನಾರಿಸುತ್ತಾನೆ. ಹಿಂದಿದ್ದ ಪ್ರತಿನಿಧಿಗಳು ಸಮರ್ಪಕವಾಗಿ ಕೆಲಸ ಮಾಡಿದರೆ, ಅವರೇ ಉಮೇದುವಾರರಾಗಿದ್ದರೆ ಅವರನ್ನೇ ಮತ್ತೆ ಆರಿಸಬಹುದೇ, ಹೊಸಬರಿಗೆ ಅವಕಾಶ ಕೊಡೋಣವೇ, ಹೊಸದಾಗಿ ಉಮೇದುವಾರಿಕೆ ಸೂಚಿಸಿರುವವರ ಆಶಯವಾದರೂ ಏನು, ಅವರು ನೀಡುವ ಭರವಸೆಯಾದರೂ ಏನು —ಇವನ್ನೆಲ್ಲಾ ವಿಮರ್ಶಿಸಿ ತನಗೆ ಸೂಕ್ತ ತೋರಿದವರನ್ನು ಪೌರನು ಆರಿಸುತ್ತಾನೆ. ಅಂದಮೇಲೆ, ಇಂದಿನ ಪರಿಸ್ಥಿತಿಯಲ್ಲಿ

ಪೌರನೆನಿಸಿದವನಿಗೆ ತಾನು ಯಾವ ಜೀವನವೃತ್ತಿಯಲ್ಲಿರುವನೋ ಆದರ ವಿಷಯವಾದ ತಿಳವಳಿಕೆಯ ಜೊತೆಗೆ ತಕ್ಕಮಟ್ಟಿನ ರಾಜಕೀಯಜ್ಞಾನವೂ ಬೇಕು; ಪ್ರಜಾಧರ್ಮದ ಅರಿವು ಬೇಕು. ತನ್ನ ದೇಶದ ನಿಜವಾದ ಪರಿಸ್ಥಿತಿ ಅವನಿಗೆ ತಿಳಿದಿರಬೇಕು. ವಿಶ್ವದ ಪರಿಸ್ಥಿತಿಯನ್ನೂ ತಕ್ಕಮಟ್ಟಿಗೆ ಅವನು ಅರಿತಿರಬೇಕು. ಅಗತ್ಯವಾದ ಜಟಿಲ ಸಮಸ್ಯೆಗಳನ್ನು ಪರಿಶೀಲಿಸಿ ನಿರ್ಣಯಿಸುವ ಶಕ್ತಿ ಬೇಕು. ಸಂದರ್ಭಾನುಸಾರ ಯುದ್ಧ, ಶಾಂತಿ, ಮುಂತಾದ ವಿಷಯಗಳಲ್ಲೂ ಕೂಡ ತನ್ನ ತೀರ್ಮಾನವನ್ನು ತಿಳಿಸುವ ಸಾಮರ್ಥ್ಯವಿರಬೇಕು.

ಹೀಗಿರುವಾಗ ನಾವು ಆಚರಣೆಯಲ್ಲಿ ಕಾಣುತ್ತಿರುವುದೇನು? ಚುನಾವಣೆಗಳ ಕಾಲದ ಪ್ರಚಾರ ಕ್ರಮವನ್ನು ನೋಡಿದರೆ ಸಾಲದೇ? ರಾಜಕೀಯ ಪಂಗಡಗಳ ಘೋಷಣೆ, ಒಂದು ಪಂಗಡ ಮತ್ತೊಂದನ್ನು ಅಲ್ಲಗಳೆಯುವುದು, ವ್ಯಕ್ತಿನಿಂದೆ, ಅಧಿಕಾರ ದಲ್ಲಿದ್ದವರನ್ನು ಅಥವಾ ಅಧಿಕಾರದಲ್ಲಿರುವವರನ್ನು ಕಟುವಾಗಿ ಟೀಕಿಸುವುದು, ತಾವು ಅಧಿಕಾರಕ್ಕೆ ಬರುವಂತೆ ಜನರು ಮತ ಕೊಟ್ಟು ಉಪಕಾರಮಾಡಿದರೆ ಸ್ವರ್ಗವೇ ಭೂಮಿಗಿಳಿಯುವಂತೆ ಮಾಡುವೆವೆಂಬ ಬಡಾಯಿ, ಅಹಂಕಾರ, ದ್ವೇಷ, ಮತಾಂಧತೆ —ಇವು ಸರ್ವಸಾಮಾನ್ಯ. ಜನಕ್ಕೆ ತಿಳವಳಿಕೆ ಕಡಮೆ. ಮಾತಿಗೆ ಮರುಳಾಗುವುದೂ ನಾನಾ ಪ್ರಭಾವಗಳಿಗೊಳಗಾಗಿ ಮತ ನೀಡುವುದು ಸಾಧಾರಣ. ತತ್ಪರಿಣಾಮ ವಾಗಿ ಯೋಗ್ಯರಾದ ಪ್ರತಿನಿಧಿಗಳು ಸಾಮಾನ್ಯವಾಗಿ ಚುನಾ ಯಿತರಾಗುವ ಸಂಭವ ಕಡಿಮೆ. ಅಂದರೆ, ಯೋಗ್ಯರಲ್ಲದ ಪ್ರತಿನಿಧಿಗಳ ಕೈಹಿಡಿತದಲ್ಲಿ ಸರ್ಕಾರ ಸಿಕ್ಕಿದಂತೆ. ಮರು ಚುನಾವಣೆಗಳು ನಡೆಯುವವರೆಗೂ ಅಸಮರ್ಥ ಆಡಳಿತದಲ್ಲಿ

ಸಿಕ್ಕಿದ ಜನರಿಗೆ ಕಷ್ಟ. "ಜನರಿಗೆ ಒಳ್ಳೆಯದಾವುದು, ಕೆಟ್ಟ ದಾವುದು ಎನ್ನುವುದನ್ನು ತಿಳಿಯಲು ಸರಿಯಾದ ಶಿಕ್ಷಣಬೇಕು. ಜನ ಶಿಕ್ಷಣ ಹೊಂದಿಲ್ಲದಿದ್ದರೆ, ಅರಿತವರಲ್ಲದಿದ್ದರೆ, ಪ್ರಜಾಸತ್ತೆ ನಿರರ್ಥಕ" ಎಂದು ಲಾರ್ಡ್ ಬ್ರೈಸ್ ಹೇಳಿದ್ದಾನೆ. ಸತ್ಯವಾದ ಮಾತಿದು.

ನಿರಂಕುಶಪ್ರಭುತ್ವಕ್ಕೂ ಪ್ರಜಾಪ್ರಭುತ್ವಕ್ಕೂ ಇರುವ ವ್ಯತ್ಯಾಸವೇನು? ನಿರಂಕುಶಪ್ರಭುತ್ವ ಶಕ್ತಿಯ ನೆಲೆಯ ಮೇಲೂ, ಪ್ರಜಾಪ್ರಭುತ್ವ ಜನಾಭಿಪ್ರಾಯದ ಬಲದಮೇಲೂ ನಿಂತಿದೆ ಎಂಬುದಲ್ಲ. ಏಕೆಂದರೆ, ಈ ಎರಡು ತೆರನಾದ ಪ್ರಭುತ್ವ ಗಳೂ ಅಭಿಪ್ರಾಯವನ್ನನುಸರಿಸಿದ ಪ್ರಭುತ್ವಗಳೇ ಆಗಿವೆ. ಆದರೆ ಒಂದು ವ್ಯತ್ಯಾಸವಿದೆ. ನಿರಂಕುಶ ಪ್ರಭುತ್ವದಲ್ಲಿ ಜನ ಅಧಿಕಾರದ ಅಭಿಪ್ರಾಯಕ್ಕೆ ಜಗ್ಗುತ್ತದೆ, ಬಾಗುತ್ತದೆ. ಆ ಸರ್ಕಾರ ತನ್ನಿಂದಲೇ ಸೃಷ್ಟಿಸಲ್ಪಟ್ಟು ತನಗೆ ಅಧೀನ ಎಂಬು ದನ್ನು ಪ್ರಜಾಶಕ್ತಿ ಮರೆಯುತ್ತದೆ. ಪ್ರಜಾಪ್ರಭುತ್ವದಲ್ಲಾದರೊ ಜನದ ಅಭಿಪ್ರಾಯಕ್ಕೆ ಸರ್ಕಾರ ಬಾಗುತ್ತದೆ. ಪ್ರಜೆಗಳಲ್ಲಿ ಸಾರ್ವಭೌಮ ಅಧಿಕಾರವಿದೆ ಎಂಬುದನ್ನು ಅಧಿಕಾರಿಗಳೂ ಪ್ರಜೆಗಳೂ ಮನಗಂಡಿರುತ್ತಾರೆ.

ಜನತೆಗೆ ತನ್ನ ಶಕ್ತಿಯ ಅರಿವು ಉಂಟಾದಾಗ ಪ್ರಭುತ್ವದ ಹಕ್ಕುಗಳನ್ನು ಪ್ರಶ್ನಿಸುತ್ತದೆ, ಕರ್ತವ್ಯಗಳನ್ನು ವಿಮರ್ಶಿಸು ತ್ತದೆ; ಅಗತ್ಯವಾದಾಗ ಪ್ರತಿಭಟಿಸುತ್ತದೆ. ಅನೇಕ ಸಂದರ್ಭ ಗಳಲ್ಲಿ ಪ್ರತಿಭಟನೆಯಿಂದ ಸುಧಾರಣೆಯ ಹಾದಿಯನ್ನು ಜನತೆ ಹುಡುಕುತ್ತದೆ. ಪ್ರಜಾರಾಜ್ಯದಲ್ಲಿ ಜನಾಭಿಪ್ರಾಯವನ್ನು ನಿರ್ಲಕ್ಷಿಸಿ ಸರ್ಕಾರ ನಡೆಯಲಾರದು.

ಕಾಲಬದಲಾವಣೆಗಳಿಗನುಗುಣವಾಗಿ ಜನಾಭಿಪ್ರಾಯವೂ

ಬದಲಾವಣೆ ಹೊಂದುವುದು ಸ್ವಾಭಾವಿಕ. ಹತ್ತೊಂಬತ್ತನೆಯ ಶತಮಾನದಲ್ಲಿ ರಾಜಕೀಯ ಮತ್ತು ಆರ್ಥಿಕ ರಾಷ್ಟ್ರೀಯತೆ (Political and Economic Nationalism), ಸ್ವತಂತ್ರ ಜನತಾ ರಾಷ್ಟ್ರಭಾವನೆ (The concept of sovereign and Independent states), ವ್ಯಕ್ತಿ ಪ್ರಧಾನವಾದ (Individual-ism), ಬಂಡವಾಳದ ತತ್ವ (Captalism), ಸಾಮ್ರಾಜ್ಯ ತತ್ವ (Imperialism), ವ್ಯಾಪಾರ ನಿರಂಕುಶತೆ (Free trade) –ಇವು ಜನತೆಯಲ್ಲಿ ಮೂಡಿದ್ದ ಅಭಿಪ್ರಾಯಗಳು. ಇಂದಾದರೋ ಈ ಅಭಿಪ್ರಾಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಅಗತ್ಯಬಿದ್ದರೆ ರಾಷ್ಟ್ರೀಯತೆಯನ್ನು ತೊರೆದಾದರೂ ವಿಶ್ವರಾಷ್ಟ್ರ (A world-state) ಸ್ಥಾಪಿಸಬೇಕೆನ್ನುವ ಮನೋಭಾವ ಜನರಲ್ಲಿ ಮೂಡಿದೆ; ಸಮಾಜವಾದ (Socialism) ಮುನ್ನುಗ್ಗುತ್ತಿದೆ. ರಾಷ್ಟ್ರೀಕರಣ (Nationalisation) ಮುನ್ನಡೆಯುತ್ತಿದೆ. ವ್ಯಕ್ತಿ ವೈಶಿಷ್ಟ್ಯಕ್ಕೆ ಬದಲು ಸಾಮೂಹಿಕ ಹಿತಸಾಧನೆಯ ಕಡೆ ಜನ ಸರಿಯುತ್ತಿದೆ. ಆದುದರಿಂದ ರಾಷ್ಟ್ರದ ಆಯಕಟ್ಟು ಈ ಅಭಿಪ್ರಾಯಗಳಿಗನುಗುಣವಾಗಲೇಬೇಕಲ್ಲವೆ ?

ಪ್ರಜಾಸತ್ತೆ ಪೌರನಿಗೆ ಹಕ್ಕುಗಳನ್ನು ಮಾತ್ರ ಕೊಟ್ಟಿಲ್ಲ. ಹಕ್ಕುಗಳ ಜೊತೆಗೆ ಕರ್ತವ್ಯಗಳೂ ಇವೆ. "ಪ್ರಜಾಸತ್ತೆಯಷ್ಟು ಕಠಿಣವೆನಿಸಿದ ಸರ್ಕಾರಪದ್ಧತಿ ಮತ್ತೊಂದಿಲ್ಲ. ಪ್ರತಿ ಪೌರನು ತನ್ನ ಜವಾಬ್ದಾರಿಯನ್ನೂ ಕರ್ತವ್ಯವನ್ನೂ ಅರಿತ ಹೊರತು ಪ್ರಜಾಸತ್ತೆ ಸಾರ್ಥಕವೆನಿಸಲಾರದು" ಎಂದು ಲಾರ್ಡ್ ಬಾಲ್ಡವಿನ್ ಒಮ್ಮೆ ಹೇಳಿದ್ದಾನೆ. ಪ್ರಜಾಪ್ರಭುತ್ವ ಅನಂತವಾಗಿ ಆನಂದವರ್ಷ ಕರೆಯುವುದೆಂದು ತಿಳಿವಳಿಕೆಯಿಲ್ಲದ ಜನ ಭಾವಿಸಿದೆ. ಬರಿಯ ಹಕ್ಕುಗಳನ್ನೇ ಜನ ಗಮನಿಸಿದರೆ ಅವು

ಸಿದ್ಧಿಸುವುವೇನು ? ಹಕ್ಕುಗಳೂ ಕರ್ತವ್ಯಗಳೂ ಒಂದರೊಡನೊಂದು ಕೂಡಿವೆ. ಅವು ಪರಸ್ಪರಾಧೀನ. ಪ್ರಜಾಪ್ರಭುತ್ವ ಸಮಾನಾವಕಾಶವನ್ನು ಕಲ್ಪಿಸಿದೆ ಎಂದು ಭಾವಿಸುವೆಡೆ ಕರ್ತವ್ಯವೆಸಗುವ ಜವಾಬ್ದಾರಿಯ ಹೊರೆಯನ್ನೂ ಹೊರಿಸಿದೆ ಎಂಬುದನ್ನು ನೆನಪಿನಲ್ಲಿಡಬೇಕು. ಮತಕೊಡುವ ಅಧಿಕಾರ ದೊರೆತ ಜನ ಸರಿಯಾದ ಅರಿವಿನಿಂದ ಕೂಡಿ ಯೋಗ್ಯರೀತಿಯಲ್ಲಿ ಮತ ಸೂಚಿಸದಿದ್ದರೆ ಮತಾಧಿಕಾರ ದೊರೆತುದರ ಪ್ರಯೋಜನವಾದರೂ ಏನು ? ಪ್ರಜಾಪ್ರಭುತ್ವ ಅನಂತವಾದ ಸ್ವತಂತ್ರಾವಕಾಶವನ್ನು ಕೊಟ್ಟಿದೆಯೆಂದು ಹೆಮ್ಮೆಯಿಂದ ಕುಳಿತಿದ್ದರೆ ಫಲವೇನು ? ಅದು ಕೊಟ್ಟಿರುವ ಅನಂತಾವಕಾಶವನ್ನು ಸದುಪಯೋಗಪಡಿಸುವ, ಅದರ ಫಲವನ್ನನುಭವಿಸುವ, ಶಕ್ತಿ ಬೇಕು, ಸಾಮರ್ಥ್ಯಬೇಕು. ಅಂದರೆ, ಪ್ರಜಾಸತ್ತೆಯ ನೈಜವಾದ ಉಳಿವು ಪೌರನ ಶಿಕ್ಷಣವನ್ನವಲಂಬಿಸಿದೆ ಎಂದಲ್ಲವೆ ? ಜನ ಶಿಕ್ಷಿತವಾಗಿದ್ದರೆ, ತನ್ನ ಕರ್ತವ್ಯದ ಬೆಲೆ ಅರಿತಿದ್ದರೆ, ಆಗ ಪ್ರಜಾಪ್ರಭುತ್ವ ಸರಿಯಾಗಿ ಬೆಳಗುತ್ತದೆ, ಜನತೆಗೆ ಅದರ ಉಪಯೋಗ ಲಭಿಸುತ್ತದೆ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಲೋಚನಾ ಸಾಮರ್ಥ್ಯ ಬೆಳೆಸಿಕೊಂಡರೆ ಮಾತ್ರ ಸಾಲದು. ಜನಸಮೂಹಕ್ಕೇ ಆ ಸಾಮರ್ಥ್ಯ ಉಂಟಾಗುವಂತೆ ಮಾಡಬೇಕು. ವಿಚಾರ ಮಾಡುವ ಶಕ್ತಿ ಪ್ರತಿ ಪ್ರಜೆಗೂ ಇಲ್ಲದೆಹೋದರೆ, ಜನರನ್ನು ತಮ್ಮ ಕೈಗೊಂಬೆಗಳನ್ನಾಗಿ ಕುಣಿಸುವ ಚತುರನಾಯಕರ ಕೈವಾಡಕ್ಕೆ ಜನತೆ ತುತ್ತಾಗುವುದು.

ಸ್ವಾತಂತ್ರ್ಯ ಸಿಕ್ಕಿತೆಂದು ಸುಮ್ಮನೆ ಹಿಗ್ಗಿದುದರಿಂದೇನು ಬಂತು ? ಸ್ವಾತಂತ್ರ್ಯ ಹೊರಿಸಿರುವ ಕರ್ತವ್ಯಗಳನ್ನೂ ಜವಾ

ಬ್ದಾರಿಯನ್ನೂ ಅರಿಯಬೇಕು; ಸತತವೂ ದುಡಿಯಬೇಕು. ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಯಾವಾಗಲೂ ಎಚ್ಚರಿಕೆಯಿಂದಿರಬೇಕು. ಜಾಗರೂಕತೆ, ಪ್ರಾಮಾಣಿಕತೆ, ಸಭ್ಯತೆ ಇವು ಪ್ರಜಾಪ್ರಭುತ್ವದ ಮೂಲಮಂತ್ರಗಳು.

೬. ಪ್ರಜಾಭಿಪ್ರಾಯವನ್ನು ತಿಳಿಯುವ ವಿಧಾನ

ಗೊತ್ತಾದ ಅಂತರಂಗಳಲ್ಲಿ ಜನ ಮತ ಸೂಚಿಸುವುದರ ಮೂಲಕ ಜನಾಭಿಪ್ರಾಯ ಎಂತಿದೆಯೆಂಬುದನ್ನು ಅರಿಯ ಬಹುದೆಂದು ಭಾವಿಸಬಹುದಾದರೂ, ಇಂದಿನ ರೀತಿ ನೀತಿಯಲ್ಲಿ ಮತಸೂಚನೆಯು ನಿಜವಾದ ಅಭಿಪ್ರಾಯವನ್ನು ಹೊರಗೆಡಹು ವುದೇ ಎಂದು ಪ್ರಶ್ನಿಸಬೇಕಾಗಿದೆ. ನಮ್ಮ ಜನಾಂಗದಲ್ಲಿ ಬಹು ಮಂದಿ ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದಾರೆ. ಅದು ಹೋಗಲಿ, ತಿಳಿವಳಿಕೆಯುಳ್ಳ ಜನ ದೇಶದಲ್ಲಿಲ್ಲವೇ? ಅವರ ಮತಸೂಚನೆಯಾದರೂ ನೈಜವಾದ ಜನಾಭಿಪ್ರಾಯವನ್ನು ಬಹಿರಂಗಪಡಿಸಲಾರದೇ? ಅಂದರೆ ತಿಳಿವಳಿಕೆಯುಳ್ಳವರೆನಿಸಿ ದವರಲ್ಲಿ ಎಷ್ಟು ಜನ ಮತಸೂಚನೆ ಕೊಡಲು ಚುನಾವಣೆಯ ಕೇಂದ್ರಗಳಿಗೆ ಹೋಗುವರು? ಮತಾಧಿಕಾರವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಇಷ್ಟವಿರುವವರೆಷ್ಟು? ಅರ್ಧ ದಷ್ಟಾದರೂ ಉಂಟೆ? ಅದೂ ಇಲ್ಲವೆಂಬುದು ಚುನಾವಣೆಯ ನಿದರ್ಶನಗಳಿಂದ ದೃಢಪಟ್ಟಿದೆ. ಚುನಾವಣೆಗಾಗಿ ಚುನಾ ವಣೆಯ ಕೇಂದ್ರಗಳಿಗೆ ಹೋಗುವ ಜನ, ಅವರಾದರೂ ಸರಿ ಯಾದ ರೀತಿಯಿಂದ, ಮನೋಭಾವನೆಯಿಂದ, ನಿಷ್ಪಕ್ಷಪಾತ ದಿಂದ, ರಾಷ್ಟ್ರಹಿತ ದೃಷ್ಟಿಯಿಂದ, ಮತಸೂಚಿಸುವರೇನು? ಜಾತಿ ಮತ ವಿಷಯಕ ಸಂಕುಚಿತ ಭಾವನೆಯೋ, ಮತ್ತಾವ

ತೆರೆನಾದ ಪ್ರಭಾವವೋ, ಅವರು ಕೊಡುವ ಮತಕ್ಕೆ ಕಾರಣ ವಾಗುವುದು. ಇಂತಹ ಮತ ನೈಜವಾದ ಜನಾಭಿಪ್ರಾಯ ವಾಗುವುದೇ ?

ಒಂದು ದೃಷ್ಟಿಯಿಂದ ನೋಡಿದರೆ, ಪ್ರಜಾಪ್ರಭುತ್ವವೆನ್ನು ವುದು ಒಂದು ರಾಷ್ಟ್ರದ ಜನಜೀವನದ ಬಗೆ (A way of life) ಎನ್ನಬಹುದು. ಸಂಕುಚಿತದೃಷ್ಟಿಯಲ್ಲಿ ಅದನ್ನು ಅರ್ಥಮಾಡಿ ಕೊಂಡ ನಾವು ಅದು ಒಂದು ತೆರೆನಾದ ಆಡಳಿತಪದ್ಧತಿ ಮಾತ್ರವೆಂದು ಎಣಿಸಿದ್ದೇವೆ. ಈ ಅರ್ಥದಲ್ಲೂ ಪ್ರತಿಯೊಬ್ಬ ಪೌರನಿಗೂ ತನ್ನ ದೇಶದ ಆಡಳಿತವನ್ನು ವಿಮರ್ಶಿಸಿ, ಆಡಳಿತ ದಲ್ಲಿ ಭಾಗವಹಿಸುವ ಅವಕಾಶವಿದೆ. ಆಡಳಿತವನ್ನು ವಿಮರ್ಶಿಸಿ ಅದರ ನಡೆವಳಿಕೆಗೆ ತಮ್ಮ ಅಂಗೀಕಾರ ನೀಡುವುದಲ್ಲದೆ, ತಮ್ಮ ಅಭಿಪ್ರಾಯವನ್ನೂ ಸೂಚಿಸಬೇಕು. ಭಿನ್ನಾಭಿಪ್ರಾಯವಿರುವೆಡೆ ಸ್ನೇಹಪೂರಿತ ಚರ್ಚೆಯಿಂದ, ವಿಷಯ ವಿನಿಮಯದಿಂದ ಒಮ್ಮತಕ್ಕೆ ಬರಲು ಪ್ರಯತ್ನಿಸಬೇಕು. ಎಲ್ಲ ಪಕ್ಷಗಳ ಅಭಿ ಪ್ರಾಯಕ್ಕೂ ಪ್ರಜಾಪ್ರಭುತ್ವದಲ್ಲಿ ಮನ್ನಣೆ ಇರಬೇಕಲ್ಲವೆ ? ಅಂದರೆ, ಸಹನೆ ಬೇಕು, ಸಹಾನುಭೂತಿ ಬೇಕು.

ಪ್ರಾಚೀನ ಗ್ರೀಸ್ ದೇಶದಲ್ಲಿದ್ದಂತೆ ಪ್ರತ್ಯಕ್ಷ ಪ್ರಜಾಧಿ ಕಾರ (Direct democracy) ಇಂದು ಸಾಧ್ಯವಿಲ್ಲ. ಇಂದಿನ ಪ್ರಭುತ್ವ ಪ್ರಜಾಪ್ರತಿನಿಧಿ ಪ್ರಭುತ್ವ (Indirect democracy). ಇದಕ್ಕೆ ಕಾರಣ, ದೇಶದ ವಿಸ್ತಾರ, ಅಪಾರ ಜನಸಂಖ್ಯೆ ಇವೇ ಮೊದಲಾದುವಾಗಿವೆ. ಅಂದಮೇಲೆ, ರಾಷ್ಟ್ರದ ಸಾರ್ವಭೌಮಾ ಧಿಕಾರ ಎಲ್ಲಿ ನೆಲೆಸಿದೆ—ಪ್ರಜೆಗಳಲ್ಲೋ ಅಥವಾ ಪ್ರಜೆಗಳಿಂದ ಆಗಿಂದಾಗ್ಗೆ ಚುನಾಯಿತರಾಗುವ ಪ್ರತಿನಿಧಿ ಸರ್ಕಾರದಲ್ಲೋ ? ಪ್ರಜೆಗಳಲ್ಲಿರುವುದು ಪರಮಾಧಿಕಾರ (Politcail sovereignty).

ಚುನಾಯಿತರಾಗುವ ಪ್ರತಿನಿಧಿಗಳು ಮತ್ತು ಅವರಿಂದ ನಿರ್ಮಿಸಲ್ಪಡುವ ಸರ್ಕಾರ (The legal sovereign), ಆ ಅಧಿಕಾರದಲ್ಲಿ ಕೆಲವನ್ನು ಪಡೆದು ತಮ್ಮ ಅಧಿಕಾರಾವಧಿಯಲ್ಲಿ ಅವನ್ನು ಕಾರ್ಯರೂಪಕ್ಕೆ ತರುತ್ತಾರೆ. ಇದರಿಂದ ತಿಳಿದುಬರುವುದು ಮೂರು ಅಂಶ: (೧) ಶಾಸನ ಸಮ್ಮತ ಪರಮಾಧಿಕಾರಿ (The legal sovereign) ಜನರಿಂದ ಯಾವ ಅಣತಿಯನ್ನು ಪಡೆದಿದೆಯೋ ಅದರಂತೆ ಮಾತ್ರ ನಡೆಯಬೇಕು. ಶಾಸನ ಸಮ್ಮತ ಪರಮಾಧಿಕಾರವನ್ನು ಹೊಂದಿದ ಶಾಸಕಾಂಗ ಮತ್ತು ಕಾರ್ಯಾಂಗ ಜನತೆಯು ಯಾವ ತತ್ವಗಳನ್ನು ಮತ್ತು ನೀತಿಯನ್ನು ಅನುಸರಿಬೇಕೆಂದು ಚುನಾವಣಾ ಕಾಲದಲ್ಲಿ ನಿರೂಪಿಸಿದೆಯೋ ಆ ಅಂಶಗಳಲ್ಲಿ ಮಾತ್ರ ಅಧಿಕಾರಹೊಂದಿದೆ. (೨) ಜನತಾನಿರೂಪಣೆಯಿಂದ ಬಾಹ್ಯವಾದ ವಿಷಯಗಳಲ್ಲಿ ಶಾಸನ ಸಮ್ಮತ ಪರಮಾಧಿಕಾರಿ ಜನದ ಅಭಿಪ್ರಾಯ ಪಡೆದು ಅದಕ್ಕನುಗುಣವಾಗಿ ಮಾತ್ರ ವರ್ತಿಸಬೇಕು. (೩) ಚುನಾವಣೆಯ ಅಂತರದಲ್ಲಿ ಅಗತ್ಯಬಿದ್ದರೆ, ಇಂತಹ ಬಗೆಯಲ್ಲೇ ನಡೆಯಬೇಕೆಂಬ ಸೂಚನೆಯನ್ನು ರಾಜಕೀಯ ಪರಮಾಧಿಕಾರಿಯೆನಿಸಿದ ಪ್ರಜಾವರ್ಗ ಶಾಸನ ಸಮ್ಮತ ಪರಮಾಧಿಕಾರಿಗೆ ಕೊಡುವ ಹಕ್ಕನ್ನು ಹೊಂದಿದೆ.

ಶಾಸಕಾಂಗದಲ್ಲಿ ಪ್ರಜಾಪ್ರತಿನಿಧಿಗಳಿರುವರಷ್ಟೆ ಅಲ್ಲಿ ಒಂದೇ ಪಂಗಡ ಅಥವಾ ಒಂದೇ ಅಭಿಪ್ರಾಯವಿರುವುದೇನು? ಇಲ್ಲ. ವಿವಿಧ ಪಂಗಡಗಳಿವೆ. ಒಂದೊಂದು ಪಂಗಡದ ಅಭಿಪ್ರಾಯವೂ ಒಂದೊಂದು ಬಗೆಯಾಗಿದೆ; ಒಂದೊಂದು ತತ್ವವನ್ನವಲಂಬಿಸಿದೆ; ಒಂದೊಂದು ನೀತಿಯನ್ನು ಪ್ರತಿಪಾದಿಸುತ್ತದೆ. ರಾಷ್ಟ್ರದ ಜನ ರಾಜಕೀಯ ಪಂಗಡಗಳ ಮೂಲಕ ತನ್ನ ಅಭಿಪ್ರಾಯವನ್ನು

ಹೊರಗೆಡಬಹುದು. ಅಂತೆಯೇ ತನ್ನ ಅಧಿಕಾರವನ್ನೂ ಬೀರುವುದು. ಸುವ್ಯವಸ್ಥಿತವಾದ ರಾಜಕೀಯ ಪಂಗಡಗಳಿಲ್ಲದೆಡೆಯಲ್ಲಿ ಜನತೆಯ ಅಭಿಪ್ರಾಯವನ್ನರಿಯುವುದು ಸುಲಭ ಸಾಧ್ಯವಲ್ಲ. ಪ್ರತಿನಿಧಿ ಸಭೆಯ ಮೇಲೂ ಸರ್ಕಾರದ ಮೇಲೂ ಪ್ರಭಾವ ಬೀರಲಾಗುವುದಿಲ್ಲ. ಒಂದೇ ಪಂಗಡವಿರುವುದಾದರೆ ಸರ್ವಾಧಿಕಾರಕ್ಕೆ ಆಸ್ಪದ ಉಂಟಾಗುವುದು. ವಿವಿಧಾಭಿಪ್ರಾಯಗಳಿರುವ ಕಡೆ ಒಂದಕ್ಕಿಂತ ಹೆಚ್ಚಾದ ರಾಜಕೀಯ ಪಂಗಡಗಳಿರಬೇಕು. ಆಗ ಪ್ರತಿಯೊಂದು ಅಂಶದ ಆಗುಹೋಗುಗಳೂ ಚೆನ್ನಾಗಿ ವಿಮರ್ಶಿಸಲ್ಪಡುತ್ತವೆ. ಸರಿಯಾದ ರೀತಿಯಲ್ಲಿ ಜನಾಭಿಪ್ರಾಯ ರೂಪುಗೊಳ್ಳುತ್ತದೆ. ಆದರೆ ಒಂದು ಎಚ್ಚರಿಕೆ. ಭಿನ್ನಾಭಿಪ್ರಾಯದಿಂದ ಕೂಡಿದ ಪಂಗಡಗಳು ಇತರ ಪಂಗಡಗಳನ್ನು ಕಂಡರೆ ದ್ವೇಷ, ಅಸಹನೆ, ಅಸೂಯೆ ಮತ್ತು ಸಂಕುಚಿತಭಾವನೆಗಳನ್ನು ತೋರಬಾರದು. ವಿಶಾಲ ಹೃದಯದಿಂದ ವರ್ತಿಸಬೇಕು. ರಾಷ್ಟ್ರದ ಪ್ರಗತಿಯೇ ಒಂದೊಂದು ಪಂಗಡದ ಗುರಿಯೂ ಆಗಿರಬೇಕು. ನಡವಳಿಕೆಯೂ ಆ ಗುರಿಗೆ ಅನುಗುಣವಾದ ಸಾಧನೆ ಎನಿಸಬೇಕು. ಇಂತು ವಿವಿಧ ಪಂಗಡಗಳ ಅಭಿಪ್ರಾಯಗಳ ಹೊಂದಿಕೆಯಿಂದ ಸಮರಸಗೊಂಡ ಜನಾಭಿಪ್ರಾಯಕ್ಕನುಗಣವಾದ ಆಡಳಿತವೇ ಪ್ರಜಾಪ್ರಭುತ್ವದ ನೈಜ ಸ್ವರೂಪ.

ಏಕಪಕ್ಷದ ರಾಷ್ಟ್ರಗಳೆಲ್ಲಾ ಸರ್ವಾಧಿಕಾರತ್ವಕ್ಕೆ ನೆಲೆವೀಡಾಗಿವೆ. ರಷ್ಯಾದಲ್ಲಿ ಬಾಲ್ಶೆವಿಕ್ಕರನ್ನು ಬಿಟ್ಟರೆ ಮತ್ತಾವ ಪಂಗಡವೂ ಇರಲವಕಾಶವಿಲ್ಲ. ಹಿಟ್ಲರನ ಜರ್ಮನಿಯಲ್ಲಿ ನಾಸೀ ಪಂಗಡಕ್ಕೆ ಮಾತ್ರ ಅವಕಾಶ. ವಿರೋಧಾಭಿಪ್ರಾಯಕ್ಕೆ ಎಡೆಯೇ ಇಲ್ಲ. ಇದೆಂತಹ ನೀತಿ? ಇದೂ ಒಂದು ನಿರಂಕುಶ ಪ್ರಭುತ್ವವೇ.

ಪ್ರಜಾಸತ್ತೆ ಅಭಿಪ್ರಾಯ ಸ್ವಾತಂತ್ರ್ಯ ನೀಡಿದೆ. ಅದಿಲ್ಲದ ದೇಶ ಪ್ರಜಾಸತ್ತಾತ್ಮಕವಲ್ಲ. ಸಮಾಜದಲ್ಲಿ ಬಹುಜನಕ್ಕೆ ಒಳ್ಳೆಯದಾವುದೋ ಅದನ್ನು ಸಾಧಿಸಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯ. ಪ್ರತಿ ಪೌರನಿಂದಲೂ ಈ ತ್ಯಾಗಬುದ್ಧಿಯನ್ನು ಅಪೇಕ್ಷಿಸುತ್ತದೆ ಪ್ರಜಾಪ್ರಭುತ್ವ. ಬಹುಮತ, ಅಲ್ಪಮತ ಎಂಬವು ತಾತ್ಕಾಲಿಕ. ಇಂದಿನ ಬಹು ಮತಾಭಿಪ್ರಾಯ ಮರು ಚುನಾವಣೆಯ ವೇಳೆಗೆ ಬದಲಾವಣೆ ಹೊಂದಿ, ಹಿಂದೆ ಅಲ್ಪ ಮತೀಯವಾಗಿದ್ದ ಅಭಿಪ್ರಾಯ ಪುಷ್ಟಿಗೊಂಡು ಬಹುಮತೀಯ ವೇಕಾಗಬಾರದು? ಪರಿಸ್ಥಿತಿ ಇಂತಿರುವುದರಿಂದ, ಪಕ್ಷಪ್ರಭುತ್ವ ವಿರುವೆಡೆ ಅಧಿಕಾರದಲ್ಲಿರುವ ಪಕ್ಷ ದಬ್ಬಾಳಿಕೆಗೆಡೆಗೊಡದೆ, ಪಕ್ಷ ಪ್ರತಿಪಕ್ಷಗಳ ವಾದವಿವಾದಗಳನ್ನು ಕೇಳಿ, ಚರ್ಚಿಸಿ, ಒಂದು ಒಮ್ಮತ ತೀರ್ಮಾನದಿಂದ ಕೆಲಸ ನಡೆಸುವುದೇ ಪ್ರಜಾಪ್ರಭುತ್ವದ ಧರ್ಮ. ಇಂಗ್ಲೆಂಡಿನಲ್ಲಿ ವಿರೋಧ ಪಂಗಡದ ನಾಯಕನಿಗೆ ಸಂಬಳವಿಪ್ಪ ಕಾರಣವೇನು? ವಿರೋಧ ಪಂಗಡದ ಅಭಿಪ್ರಾಯ ಆಡಳಿತನೀತಿಗೆ ಬೆಳಕು. ಸರ್ಕಾರ ಅನುಸರಿಸುವ ಧೋರಣೆಯ ದೋಷವನ್ನು ಸ್ಪಷ್ಟಪಡಿಸುತ್ತದೆ ವಿರೋಧ ಪಂಗಡ. ವಿರೋಧ ಪಂಗಡ ಬಲಗೊಂಡಷ್ಟೂ ಸರ್ಕಾರದ ಕೆಲಸ ಉತ್ತಮವಾಗುವುದೆಂದು ಲಾರ್ಡ್ ಹ್ಯಾಲಿ ಫ್ಯಾಕ್ಸ್ ಹೇಳಿರುವುದು ಸತ್ಯವಾದ ಮಾತು. ಭಿನ್ನ ಭಿನ್ನ ಅಭಿಪ್ರಾಯ ದಿಂದ ಕೂಡಿದ ಪಂಗಡಗಳು ಒಂದೊಂದೂ ಸ್ವಾರ್ಥವನ್ನು ತ್ಯಜಿಸಿ, ಸರಿಯಾದ ಅರಿವು, ಸ್ನೇಹಭಾವನೆ, ಸಮರಸದಿಂದ ಕೂಡಿ ರಾಷ್ಟ್ರದ ಪ್ರಗತಿಯನ್ನು ಸಾಧಿಸುವುದೀಗ ಪ್ರಜಾಸತ್ತೆಯ ಸಾರ. ಜನತೆ ಈ ದೃಷ್ಟಿಯಲ್ಲಿ ನಡೆಯಬೇಕು.

ಅರಿವಿಲ್ಲದ ಜನಕ್ಕೆ ಪ್ರಜಾಸತ್ತೆ ಬಂದರೇನು, ಬಾರದಿದ್ದ

ರೇನು? ಪ್ರಜಾಸತ್ತೆಯು ಸಂಪತ್ತನ್ನು ಸದುಪಯೋಗಪಡಿಸಿ ಕೊಳ್ಳಲು ಜನಕ್ಕೆ ತಿಳಿವಳಿಕೆ ಇಲ್ಲದಿದ್ದರೆ ಅಂತಹ ಸಂಪತ್ತಿದ್ದರೂ ಪ್ರಯೋಜನವೇನಾಯಿತು? ರಾಷ್ಟ್ರದ ಪ್ರಶ್ನೆಗಳೇನು, ಸಮಸ್ಯೆಗಳೇನು ಎನ್ನುವುದನ್ನು ಜನ ಅರಿಯಬೇಕು. ಸ್ವಾರ್ಥ ರಹಿತವಾತ ಅವನ್ನು ಕುರಿತು ಜನ ವಿಮರ್ಶಿಸಬೇಕು.

ವಿಶ್ವದ ಜನತೆ ಬಾಪೂಜಿಯ ರಾಮರಾಜ್ಯದ ಮಟ್ಟಕ್ಕೆ ಏರಿದರೆ, ಕ್ರೈಸ್ತನ ದೇವರಾಜ್ಯದ ಪ್ರಜೆಗಳೇ ಆದರೆ, ಸರ್ಕಾರವೇಕೆ ಬೇಕು? ಜನ ಅಂತಾಗಬಲ್ಲದೆ ಎನ್ನುವುದೇ ನಮ್ಮ ಇಂದಿನ ಸಮಸ್ಯೆ. ರಾಷ್ಟ್ರರಹಿತ, ವರ್ಗರಹಿತ, ಸಮಾನತೆಯು ಸಮಕಟ್ಟನಿಂದ ಕೂಡಿದ ಸಮಾಜ ಸ್ಥಾಪನೆ ರಷ್ಯಾದ ಕಮ್ಯೂನಿಸಂ ತತ್ವದ ಅಂತಿಮ ಗುರಿ. ಈ ಗುರಿಯು ಸಾಧನೆಯ ಮಧ್ಯ ಮಾರ್ಗ. ಇಂದಿರುವ ರಷ್ಯಾದ ಕೂಲಿಗಾರ ಜನತಾ ಸರ್ವಾಧಿಕಾರ ಎಂದು ಹೇಳಲಾಗಿದೆ. ಪ್ರಾಚೀನ ಭಾರತದಲ್ಲಿ ಧರ್ಮವೇ ರಾಷ್ಟ್ರದ ಪ್ರಭುವಾಗಿದ್ದ ಕಾಲವೊಂದಿತ್ತು. ಆಗ ಯಾವ ಐಹಿಕ ಪ್ರಭುತ್ವಕ್ಕೂ ಜನ ಅಧೀನವಾಗಿರಲಿಲ್ಲ. ಧರ್ಮವೇ ಸಮಾಜದ ಪ್ರಭುವೆಂಬ ನಂಬಿಕೆ ಇತ್ತು. ಅಂದು ರಾಮರಾಜ್ಯವಿತ್ತು, ದೇವರಾಜ್ಯವಿತ್ತು. ಕೃತಯುಗದ ಆದಿಯಲ್ಲಿದ್ದ ಅಂತಹ ಸ್ಥಿತಿ ಮಹಾಭಾರತದಲ್ಲಿ ಹೇಳಲ್ಪಟ್ಟಿದೆ:

"ನೈವರಾಜ್ಯಂ ನರಾಜಾಸೀನ್ನಚದಂಡೋ ನ ದಾಂಡಿಕಃ।
ಧರ್ಮೇಣೈವ ಪ್ರಜಾಃಸರ್ವೋ ರಕ್ಷಂತಿಸ್ಮ ಪರಸ್ಪರಂ॥"

ಇಂದಿನ ವಿಶ್ವವೂ ಹಾಗೇಕಾಗಬಾರದು. ಬಾಪೂಜಿಯ ಕನಸು ನನಸಾಗಬಾರದೇಕೆ? ಇದೀಗ ನಮ್ಮ ಆಶಯ.

ಪ್ರಜಾಪ್ರಭುತ್ವದ ಇರುವಿಕೆ ನೈಜವಾದ ಜನಾಭಿಪ್ರಾಯ ಏರ್ಪಡುವುದಗತ್ಯ. ಜನಾಭಿಪ್ರಾಯ ಮೂಡುವುದು ಮಾತ

ವಲ್ಲ, ಅದು ಸರಿಯಾದ ರೀತಿಯಲ್ಲಿ ವ್ಯಕ್ತವಾಗಬೇಕು. ಹಾಗೆ ವ್ಯಕ್ತವಾಗಬೇಕಾದರೆ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಮತ್ತು ಸಮಾನತೆ ಬೇಕು. ಪ್ರತಿಯೊಬ್ಬನಿಗೂ ಸಾಕಾದ ರಕ್ಷಣೆ ಬೇಕು. ಹಸಿವಿನ ಕೊರತೆ ಇರಬಾರದು. ಜೀವನಕ್ಕೆ ಸಾಕಾಗುವಷ್ಟಾದರೂ ವರಮಾನ ಜನಕ್ಕೆ ಸಿಗಬೇಕು. ಬಂಡವಾಳಗಾರರ ಕೃಪಾಶ್ರಯ ದಲ್ಲಿರುವವನು, ಅರ್ಧ ಹೊಟ್ಟೆಯುಂಡವನು, ಜೀವನಕ್ಕಾಗಿ ಹಾತೊರೆಯುತ್ತಿರುವವನು, ಹೇಗೆತಾನೆ ನಿರ್ಭಯವಾಗಿ ತನ್ನ ಸ್ವಂತ ಅಭಿಪ್ರಾಯವನ್ನು ಹೊರಗೆಡಹಲು ಸಾಧ್ಯ ? ಎಲ್ಲಾ ಕಾಲದಲ್ಲೂ ತಾನು ಪೌರನೂ ಅಹುದು ಸ್ವತಂತ್ರನೂ ಅಹುದು ಎನ್ನುವಂತಾಗಬೇಕು. ಈ ಭಾವನೆ ಉಂಟಾಗಬೇಕಾದರೆ ಆರ್ಥಿಕ ಸಮಾನತೆ ಏರ್ಪಡಿಲೇಬೇಕು. ಅಂತಾಗದಿದ್ದರೆ ಪ್ರಜಾಧಿಕಾರದ ತಿರುಳೆನಿಸಿದ ಮತಾಧಿಕಾರ ನೈಜವೂ ನಿರ್ದಿಷ್ಟವೂ ಆಗಲಾರದು.

ಸ್ವತ್ತುಳ್ಳವರಿಗೆ ಸ್ವಾತಂತ್ರ್ಯವೆನ್ನುವುದು ,ಅನೇಕ ಎಡೆಗಳಲ್ಲಿ ವ್ಯಕ್ತವಾಗಿರುವ ವೈಖರಿ. ಹಿಂದೆಯೂ ಹೀಗೆಯೇ ಇತ್ತು. ಪ್ರಜಾಪ್ರತಿನಿಧಿ ಸಭೆಯ ಸದಸ್ಯತ್ವ ಬಹಿರಂಗವಾಗಿ ಮಾರಾಟವಾಗುತ್ತಿರಲಿಲ್ಲವೇನು ? ಪ್ರಜಾಪ್ರತಿನಿಧಿ ಸಭೆಗಳಿಗೆ ಮಾತೃಸ್ಥಾನವೆನಿಸಿದ ಬ್ರಿಟನ್ನಿನಲ್ಲಿ ಟ್ರಿವೆಲಿಯನ್ ಎಂಬಾತ ೬೧,೬೦೦ ಪೌಂಡುಗಳಿಗೆ ಚರ್ಟನ್ ಕ್ಷೇತ್ರವನ್ನು ಕೊಂಡು ಅದನ್ನು ಪಾಕೆಟ್ ಬರೋ ಮಾಡಿಕೊಳ್ಳಲಿಲ್ಲವೆ? ಇಂತಹ ನಿದರ್ಶನಗಳು ಇಂಗ್ಲೆಂಡಿನ ಇತಿಹಾಸದಲ್ಲಿ ಇನ್ನೂ ಬೇಕಾದಷ್ಟಿವೆ. ಭಾಷಣ ಸ್ವಾತಂತ್ರ್ಯ ಶ್ರೀಮಂತರಿಗೆ ಮಾತ್ರವೇ ಮೀಸಲಾಗಿದ್ದ ಕಾಲವೂ ಇತ್ತು. ಬಂಡವಾಳಶಾಹಿಯ ಅಧೀನತೆ

ಯಲ್ಲಿ ಸಮಾಜ ಇರುವೆಡೆಯಲ್ಲೆಲ್ಲಾ ಇಂದೂ ಅದೇ ಪರಿಸ್ಥಿತಿ ಇದೆ. ಬಂಡವಾಳಶಾಹಿಯಲ್ಲಿ ನೌಕರರು ದಣಿಗಳ ಕೈಗೊಂಬೆಗಳು. ದುಡುಮೆಯೋ ನೌಕರರ ಹಣೆಬರಹ; ಸಂಪತ್ತು ಮತ್ತು ಅಧಿಕಾರ ಶ್ರೀಮಂತರ ಅದೃಷ್ಟ. ಬಂಡವಾಳಶಾಹಿ ಇರುವೆಡೆ ಪ್ರಜಾಸತ್ತಾತ್ಮಕ ಪದ್ಧತಿ ಇರಬಹುದು; ಆದರೆ ಅದು ನೈಜವಾದ ಪ್ರಜಾಪ್ರಭುತ್ವವೆನಿಸಲಾರದು. ಏಕೆಂದರೆ, ಆರ್ಥಿಕ ಅಸಮಾನತೆ ಇರುವೆಡೆ ಮತ್ತು ಸಮಾನಾವಕಾಶವಿಲ್ಲದೆಡೆ ಪ್ರಜಾಪ್ರಭುತ್ವ ಪರಿಪೂರ್ಣವಾಗಿರಲು ಸಾಧ್ಯವೇ ಇಲ್ಲ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಸರ್ಕಾರವು ವ್ಯವಸ್ಥಿತ ರೀತಿಯಲ್ಲಿ ರಾಷ್ಟ್ರದ ಆರ್ಥಿಕ ಸಮಾನತೆಯನ್ನಳಿಸಿ ಸಮಾನಾವಕಾಶವನ್ನು ಕಲ್ಪಿಸುವ ಹಾದಿ ಹಿಡಿಯಬೇಕು. ಜನ ತಿಳಿವಳಿಕೆಯುಳ್ಳವರಾಗುವಂತೆ ಶಿಕ್ಷಣ ಕೊಡಬೇಕು. ಅಂದೀಗ ಯೋಗ್ಯರೀತಿಯಲ್ಲಿ ಜನಾಭಿಪ್ರಾಯ ಮೂಡಿ, ರಾಷ್ಟ್ರಹಿತ ಸಾಧನೆಯಾದೀತು.

ಪ್ರಜಾಪ್ರಭುತ್ವವಿರುವೆಡೆ ಜನಾಭಿಪ್ರಾಯ ಅತಿ ಮಹತ್ವ ಉಳ್ಳದ್ದೂ, ಅತುಳ ಹಿರಿಮೆಯುಳ್ಳದ್ದೂ ಆಗಿದೆಯೆಂದು ನಾವು ಪಠ್ಯಪುಸ್ತಕಗಳಲ್ಲಿ ಓದುತ್ತೇವೆ. ಆದರೆ, ಕಾರ್ಯಾಚರಣೆಯಲ್ಲಿ ಅದು ಹಾಗಿದೆಯೇ ಎಂದರೆ ಇಲ್ಲವೆಂದೇ ಹೇಳಬೇಕು. ಜನಾಭಿಪ್ರಾಯ ಆಚರಣೆಯಲ್ಲಿ ಎಂತಿದೆ? ಜನಾಭಿಪ್ರಾಯವನ್ನರಿಯುವ ಬಗೆ ಹೇಗೆ? ಅದಕ್ಕೆ ಬೇಕಾದ ನ್ಯಾಯಸಮ್ಮತ ನಿಯಂತ್ರಣ ಯಾವುದು? ಚುನಾವಣೆಗಳ ಅಂತರದಲ್ಲಿ ಜನಾಭಿಪ್ರಾಯ ಎಂತು ಪ್ರತಿಬಿಂಬಿತವಾಗುವುದು?—ಇವು ನಾವೀಗ ಅರಿಯಬೇಕಾದ ಮುಖ್ಯಾಂಶಗಳು.

ಹಿಂದಿನ ಕಾಲದಲ್ಲಿ ಪ್ರಜಾಪ್ರಭುತ್ವ ಪ್ರತ್ಯಕ್ಷವಾದುವಾಗಿ

ತ್ವೆಂದೂ (Direct democracy), ಜನರಿಂದಲೇ ರಾಷ್ಟ್ರದ ಸಕಲ ಅಂಶಗಳು ನೇರವಾಗಿ ವಿಮರ್ಶಿಸಲ್ಪಡುತ್ತಿದ್ದುವೆಂದೂ, ಬಹುಮತಾಭಿಪ್ರಾಯಕ್ಕನುಗುಣವಾಗಿ ಎಲ್ಲ ನಿರ್ಣಯಗಳು ಆಗುತ್ತಿದ್ದುವೆಂದೂ ತಿಳಿದಿದ್ದೇವೆ. ಪ್ರಜಾಸತ್ತೆಯಲ್ಲಿ ಪ್ರಭುತ್ವ ಪ್ರಜಾವರ್ಗದೊಡನೆ ನಿಕಟಸಂಬಂಧದಿಂದ ಕೂಡಿರಲೇಬೇಕಲ್ಲವೆ? ಇಂದಿನ ಸ್ಥಿತಿಯಲ್ಲಿ ಪ್ರತ್ಯಕ್ಷಪ್ರಜಾಪ್ರಭುತ್ವ ಸಾಧ್ಯವಿಲ್ಲವಾದುದರಿಂದ ಪ್ರಜಾಪ್ರತಿನಿಧಿ ಪ್ರಭುತ್ವ (Indirect democracy) ಆಚರಣೆಯಲ್ಲಿದೆ. ರಾಷ್ಟ್ರದ ವಿಶಿಷ್ಟ ಆಗುಹೋಗುಗಳನ್ನು ಜನವೇ ನೇರವಾಗಿ ವಿಮರ್ಶಿಸಿ ನಿರ್ಣಯಿಸಲು ಇಂದಿನ ಸ್ಥಿತಿಯಲ್ಲಿ ಸಾಧ್ಯವೇ ಇಲ್ಲ. ಪ್ರತಿನಿಧಿಗಳು ನಡೆಸಿದುದನ್ನು ಜನ ಅಂಗೀಕರಿಸಿದರೂ ಸಾಲದು. ತನ್ನ ಇಷ್ಟವನ್ನು ಒತ್ತಾಯಪಡಿಸಿ ಅದಕ್ಕನುಗುಣವಾಗಿ ಆಡಳಿತ ನಡೆಯುವಂತೆ ಏರ್ಪಡಿಸುವುದು ರಾಜಕೀಯ ಪರಮಾಧಿಕಾರ ಹೊಂದಿರುವ ಜನತೆಯ ಹಕ್ಕು.

ಶಾಸಕ ಸಮ್ಮತ ಪರಮಾಧಿಕಾರಿ (The legal sovereign) ರಾಜಕೀಯ ಪರಮಾಧಿಕಾರವನ್ನುಳ್ಳ ಜನದ (The political sovereign) ಆಶೋತ್ತರಗಳನ್ನು ಕಾರ್ಯತಃ ಆಚರಣೆಯಲ್ಲಿ ತಂದಾಗ ಮಾತ್ರ ಪ್ರಜಾಪ್ರಭುತ್ವ ನಿರ್ದುಷ್ಟ ಮತ್ತು ಪರಿಷ್ಕೃತ ಎನ್ನಬಹುದು. ನಡೆವಳಿಕೆಯಲ್ಲಿ ಇಂತಿಲ್ಲ. ಜನ ತಮ್ಮ ಪ್ರತಿನಿಧಿಗಳನ್ನು ಆಗಿಂದಾಗ್ಗೆ ಚುನಾಯಿಸುತ್ತಾರೆ. ಚುನಾಯಿತ ಪ್ರತಿನಿಧಿಗಳಲ್ಲಿ ಬಹುಮತವುಳ್ಳ ಪಕ್ಷ ಸರ್ಕಾರವನ್ನು ರಚಿಸಿ ಆಡಳಿತವನ್ನು ನಡೆಸುತ್ತದೆ. ಅಂತಹ ಪ್ರಜಾಪ್ರತಿಧಿ ಪ್ರಭುತ್ವ ತನ್ನ ಅವಧಿಯ ಕಾಲದಲ್ಲಿ ತನಗೆ ಸರಿಯೆಂದು ತೋರಿದುದನ್ನೆಲ್ಲಾ ನಡೆಸುತ್ತದೆ—ಅದಕ್ಕೆ ಪ್ರಜೆಗಳ ಅನುಮತಿ ಇರಲಿ ಅಥವಾ

ಇಲ್ಲದಿರಲಿ. ಇದೆಂತಹ ಪ್ರಜಾಪ್ರಭುತ್ವದ ನೀತಿ? ಒಬ್ಬ ಸೋಮಾರಿಯಾದ ಧನಿಕ ತನ್ನ ಸೇವಕನಿಗೆ ತನ್ನ ಕೆಲಸಕಾರ್ಯ ಗಳನ್ನೆಲ್ಲಾ ಮಾಡುವಂತೆ ನೇಮಿಸುವುದು ಹೇಗೆ? ಅದೇ ಧನಿಕ ಸೋಮಾರಿತನವನ್ನು ಬಿಟ್ಟು ತನ್ನ ಪ್ರತಿಯೊಂದು ಕಾರ್ಯವನ್ನೂ ಸೇವಕನಿಂದ ತನ್ನ ಇಷ್ಟಾನುಸಾರ ಮಾಡಿಸಿಕೊಳ್ಳುವುದೆಂತು? ಈ ಅಂತರವನ್ನೇ ನಾವು ಇಂದಿನ ಪ್ರಜಾಪ್ರಭುತ್ವದಲ್ಲೂ ನೋಡಬಹುದಾಗಿದೆ.

ಸರ್ಕಾರದ ರಚನೆ ಚುನಾವಣೆಯ ಮೂಲಕ. ಚುನಾಯಿಸು ವವರು ಜನ. ಜನದ ಚುನಾವಣೆಯು ಅಧಿಕಾರಕ್ಕೆ ಅಲ್ಲದ ಸಲ್ಲದ ಪ್ರತಿಬಂಧಕಗಳಿದ್ದರೆ ಪ್ರಯೋಜನವೇನು? ಪ್ರಾಪ್ತ ವಯಸ್ಕರೆಲ್ಲರಿಗೂ ಮತಾಧಿಕಾರವಿಲ್ಲದಿದ್ದರೆ ಜನಾಭಿಪ್ರಾಯ ವೆಲ್ಲಿ ಬಂತು? ಪ್ರಾಪ್ತವಯಸ್ಕರಿಗೆ ಮತಾಧಿಕಾರ (Adult-franchise) ಇರಬೇಕೆಂಬ ತತ್ವ ಆಚರಣೆಯಲ್ಲಿ ಕಂಡು ಬಂದಿರುವುದು ಇಪ್ಪತ್ತನೆಯ ಶತಮಾನದ ಆರಂಭದಿಂದ. ಅದಕ್ಕೆ ಮೊದಲು ಈ ತೆರನಾದ ಮತಾಧಿಕಾರದ ವಿಷಯವಾಗಿ ಸರಿಯಾದ ನಂಬಿಕೆ ಮೂಡಿರಲಿಲ್ಲ. ಇಂಗ್ಲೆಂಡಿನಲ್ಲಿ ೧೮೩೨ರಿಂದ ಪ್ರಾರಂಭವಾದ ಈ ತೆರನಾದ ಸುಧಾರಣೆಗಳು ೧೯೨೮ರಲ್ಲಿ ಸ್ತಿಮಿತರೂಪ ತಾಳಿದವು. ಸ್ವಾತಂತ್ರ್ಯ ಸಮತೆ, ಸಹೋದರ ಭಾವನೆ ಎಂದು ಘೋಷಿಸಿದ ಫ್ರಾನ್ಸಿನ ವಿಪ್ಲವಕಾರರು ಮಹಿಳೆ ಯಾರಿಗೂ ಸಮಾನಾಧಿಕಾರವನ್ನು ಕೊಡಬೇಕೆಂಬಂಶವನ್ನು ಗಮನವಲ್ಲೇ ಇಡಲಿಲ್ಲ. ಇಂದೂ ಹಲವು ರಾಷ್ಟ್ರಗಳಲ್ಲಿ ಮಹಿಳೆ ಯರಿಗೆ ಓಟಿನ ಅಧಿಕಾರವಿಲ್ಲ. ಅವುಗಳಲ್ಲಿ ಸ್ವಿಟ್ಜರ್ಲೆಂಡೂ ಒಂದು. ಈಜಿಪ್ಟ್, ಸಿರಿಯಾ ಮೊದಲಾದ ಕೆಲವು ರಾಷ್ಟ್ರಗಳು ಈ ಅಂಶವನ್ನು ಪರಿಶೀಲಿಸುತ್ತಿವೆ. ಬರ್ಮ, ಸಿಲೋನ್, ಬ್ರೆಸಿಲ್,

ಮುಂತಾದ ಹಿಂದುಳಿದ ದೇಶಗಳಲ್ಲಿ ಫ್ರಾನ್ಸ್ ಮತ್ತು ಇಟಲಿ ದೇಶಗಳು ಮಹಿಳೆಯರಿಗೆ ಅಧಿಕಾರ ಕೊಡಬೇಕೆಂದು ನಿರ್ಣಯಿಸುವುದಕ್ಕೂ ಮೊದಲೆ ಮಹಿಳೆಯರಿಗೆ ಮತಾಧಿಕಾರ ಕೊಟ್ಟಿದ್ದವೆಂಬ ಅಂಶ ಗಮನಾರ್ಹ. ಇಂದು ಪ್ರಗತಿಪರವೆಂದು ಹೆಸರುಗೊಂಡಿರುವ ಇಂಗ್ಲೆಂಡಿನಲ್ಲಿ ೬೨೬ ಪ್ರತಿನಿಧಿಗಳಿರುವ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ೨೫ ಮಂದಿ ಮಹಿಳೆಯರು ಮಾತ್ರ ಸದಸ್ಯೆಯರಿರುವುದು ಬಹು ಶೋಚನೀಯ. ನಮ್ಮ ದೇಶದಲ್ಲೂ ಅಷ್ಟೆ. ನಾಲ್ಕುನೂರು ಸದಸ್ಯರಿರುವ ನಮ್ಮ ಪಾರ್ಲಿಮೆಂಟಿನಲ್ಲಿ ೨೫ ಜನ ಮಾತ್ರ ಮಹಿಳಾ ಸದಸ್ಯೆಯರು.

ಮಹಿಳೆಯರು ರಾಜಕೀಯಾಧಿಕಾರಕ್ಕೆ ಅನರ್ಹರೆಂಬ ಭಾವನೆ ನಮ್ಮಲ್ಲಿ ಇನ್ನೂ ಅನೇಕರಿಗಿದೆ. ಇದು ಸರಿಯಲ್ಲ. ಮಹಿಳೆಯರಿಗೂ ಸಾಕಷ್ಟು ಸ್ಥಾನಗಳಿರಬೇಕು. ಗಂಡಸರಿಗಿರುವಷ್ಟೇ ಹಕ್ಕುಗಳು ಅವರಿಗೂ ಇರಬೇಕು. ಇಲ್ಲದಿದ್ದರೆ ಸಮಾನಾವಕಾಶ ತತ್ವವೆಲ್ಲಿ ಬಂತು? ಸಮಾನಾವಕಾಶವಿಲ್ಲದಿರುವುದು ಪ್ರಜಾಸತ್ತೆಯ ಲಕ್ಷಣಕ್ಕೆ ವಿರೋಧವಲ್ಲವೆ? ಹಾಗಾದರೆ, ಸಮಾನಾವಕಾಶಕ್ಕೆ ಸಾಧುವಾದ ಮಾರ್ಗ ಯಾವುದು? ಸ್ತ್ರೀಪುರುಷ ಉಭಯಮತ (Coupled-vote) ಒಂದು ಮಾರ್ಗವೆಂದು ಬರ್ನಾಡ್ ಷಾ ಸೂಚಿಸಿದ್ದಾರೆ. ಒಂದು ಚುನಾವಣೆಯ ಸ್ಥಾನಕ್ಕೆ ಒಬ್ಬ ಗಂಡಸೂ ಒಬ್ಬ ಮಹಿಳೆಯೂ ಯೋಜಿತರಾಗಿರಬೇಕು, ಅದಕ್ಕನುಗುಣವಾಗಿ ಆರಿಸುವಿಕೆ ನಡೆಯಬೇಕು ಎಂದು. ಮತಾಧಿಕಾರಕ್ಕೆ ಆಸ್ತಿ, ಶಿಕ್ಷಣ ನಾನಾ ವರ್ಗ, ಈ ತೆರನಾದ ಅರ್ಹತೆಗಳನ್ನು ಕಾದಿಡುವ ಸಂಪ್ರದಾಯ ಪೌರನ ಅಧಿಕಾರಕ್ಕೆ ಚ್ಯುತಿಯನ್ನುಂಟುಮಾಡುದು. ಕೆಲವು ರಾಜ್ಯಾಂಗಗಳಲ್ಲಿ ಪುರುಷರಿಗೆ ಇಪ್ಪತ್ತೊಂದು

ವರ್ಷವೂ, ಮಹಿಳೆಯರಿಗೆ ಮೂವತ್ತು ವರ್ಷವೂ ಮತಾಧಿಕಾರ ಹೊಂದಲು ಬೇಕಾದ ಕನಿಷ್ಟ ಪ್ರಮಾಣದ ವಯಸ್ಸೆಂದು ಪರಿಗಣಿತವಾಗಿರುವುದು ನ್ಯಾಯವಾದುದಲ್ಲ. ಕೆಲವೆಡೆಗಳಲ್ಲಿ ಒಂದಕ್ಕಿಂತ ಹೆಚ್ಚಾದ ಸ್ಥಾನಗಳಲ್ಲಿ ಪೌರನಿಗೆ ಮತಾಧಿಕಾರ ವಿರುವ ಪದ್ಧತಿ ಕೂಡ ಪ್ರಜಾಸತ್ತೆಯ ದೃಷ್ಟಿಗೆ ವಿರುದ್ಧ. ಸಂಪೂರ್ಣ ಸಮತೆಯೇ ಚುನಾವಣೆಯ ಸತ್ವ.

ಪ್ರಾಪ್ತವಯಸ್ಕರ ಮತಾಧಿಕಾರವೇರ್ಪಟ್ಟಿತೆಂದೇ ಭಾವಿಸೋಣ. ಆಗ ಜನಾಭಿಪ್ರಾಯ ಸರಿಯಾಗಿ ಪಡೆಯಲು ಸಾಧ್ಯವೇ, ಸರ್ಕಾರ ಜನಾಭಿಪ್ರಾಯದಂತೆ ನಡೆಯಬಲ್ಲದೇ, ಅಂದರೆ, ಅದೂ ಕಷ್ಟವೆ? ಚುನಾವಣೆಗಳು ನಡೆಯುವುದು ಗೊತ್ತಾದ ಅಂತರಗಳಲ್ಲಿ. ಆ ಕಾಲಗಳಲ್ಲಿ ಪ್ರತಿ ರಾಜಕೀಯ ಪಂಗಡವೂ ಚುನಾವಣೆಯ ಸ್ಥಾನಗಳಿಗೆ ಸ್ಪರ್ಧಿಸುವಾಗ ತನ್ನ ನೀತಿ ಏನು ಎಂಬುದನ್ನು ಜನತೆಯ ಮುಂದಿಡುವುದು. ಜನತಮಗೊಪ್ಪಿಗೆಯಾದ ನೀತಿಯನ್ನನುಸರಿಸಿದ ಪಂಗಡದ ಪ್ರತಿನಿಧಿಗಳಿಗೆ ಮತವೀಯುವುದು. ಯಾವ ಪಂಗಡದ ಪ್ರಾತಿನಿಧ್ಯ ಬಹುಮತವಾಗುವುದೋ ಆ ಪಂಗಡದ ನೀತಿಗೆ ಜನತೆ ಒಲಿದಂತೆ. ಇದೇ ಜನಾಭಿಪ್ರಾಯ.

ಇಂತು, ಚುನಾಯಿತವಾದ ಪಂಗಡ ಜನಾಭಿಪ್ರಾಯ ಪ್ರತಿಬಿಂಬಿಸುವುದೆ, ಇಲ್ಲ. ಇದೇನು ಸೋಜಿಗ! ನಡೆವಳಿಕೆಯಲ್ಲಿನ ಕ್ರಮದಿಂದ ಈ ಸೋಜಿಗವನ್ನು ನಿರೂಪಿಸುವ ಚುನಾವಣಾ ಕ್ಷೇತ್ರಗಳು (Constituencies) ಸರಿಯಾಗಿ ವಿಂಗಡವಾಗಿದ್ದರೆ ಇಂತಹ ಕೊರತೆಗೆ ಕಾರಣವಿಲ್ಲ. ಆದರೆ ಪರಿಸ್ಥಿತಿ ಹಾಗಿಲ್ಲ. ಜನವಿಂಗಡನೆ ಸರಿಯಾಗಿಲ್ಲದಿರುವುದು, ಕ್ಷೇತ್ರದ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನ ನಿರ್ದೇಶವಿಲ್ಲದಿರುವುದು, ಇವು

ಜನಾಭಿಪ್ರಾಯ ಸರಿಯಾಗಿ ಪ್ರತಿಬಿಂಬಿತವಾಗದಿರಲು ಕಾರಣ. ಒಂದೂರಿನಲ್ಲಿ ಐದು ಕ್ಷೇತ್ರಗಳಿವೆ ಎಂದು ಭಾವಿಸೋಣ. ಒಂದೊಂದು 'ಒಬ್ಬ ಸದಸ್ಯ' ಕ್ಷೇತ್ರದಲ್ಲೂ (Single-member constituency) ಮತಾಧಿಕಾರವಿರುವ ಸಹಸ್ರ ಜನ ಇದ್ದಾರೆಂದು ಭಾವಿಸೋಣ. ಕಾಂಗ್ರೆಸ್ ಮತ್ತು ಸಮತಾವಾದಿಗಳು ಪ್ರತಿಸ್ಪರ್ಧಿಸುವರೆನ್ನುವ. ಚುನಾವಣಾ ಫಲಿತಾಂಶ ಈ ಕೆಳಗಿನಂತೆ:

ಹೆಸರು	೧ನೇ ಕ್ಷೇತ್ರ	೨ನೇ ಕ್ಷೇತ್ರ	೩ನೇ ಕ್ಷೇತ್ರ	೪ನೇ ಕ್ಷೇತ್ರ	೫ನೇ ಕ್ಷೇತ್ರ
ಕಾಂಗ್ರೆಸ್	೯೦೦	೯೦೦	೪೦೦	೪೦೦	೪೦೦
ಸಮತಾವಾದಿ	೧೦೦	೧೦೦	೬೦೦	೬೦೦	೬೦೦

ಕಾಂಗ್ರೆಸ್ಸಿಗೆ ಬಂದ ಮತ = ೩,೦೦೦ = ಸ್ಥಾನ ೨
ಸೋಷಿಯಲಿಸ್ಟರಿಗೆ ,, = ೨,೦೦೦ = ಸ್ಥಾನ ೩

ಇದೇನು ವಿಚಿತ್ರ! ಕಾಂಗ್ರೆಸ್‌ಗಳಿಸಿರುವ ಓಟುಗಳು ೩,೦೦೦ ಸ್ಥಾನಗಳು ೨. ಸಮತಾ ವಾದಿಗಳು ಪಡೆದ ಓಟುಗಳು ೨,೦೦೦ ಸ್ಥಾನಗಳು ೩. ಇದು ಸಾಧ್ಯವೆ? ನಡೆಸಳಿಕೆಯಲ್ಲಿ ಈ ನ್ಯೂನತೆ ಕಂಡುಬರುತ್ತಿಲ್ಲವೆ?

ಅಥವಾ ಒಂದು ಪ್ರತಿನಿಧಿಯನ್ನು ಕಳುಹಿಸುವ ಒಂದು ಕ್ಷೇತ್ರ ವಿದೆಯೆನ್ನಿ. ಅದರಲ್ಲಿ ನಾಲ್ಕು ಉಮೇದುವಾರರಿದ್ದು, ನೂರು ಮತದಾರರಿದ್ದಾರೆನ್ನಿ. ಚುನಾವಣೆಯ ಮತ ಈ ರೀತಿ ಇದೆ:

A	40	ಓಟು
B	30	,,
C	20	,,
D	10	,,

A ಬಹುಮತದಿಂದ ಚುನಾಯಿತನಾಗುತ್ತಾನೆ. ಆದರೆ ಬಹುಮತ ಅವನಿಗಿದೆಯೇ, ಇಲ್ಲ. ಏಕೆಂದರೆ ೬೦ ಮಂದಿ ಅವನಿಗೆ ವಿರೋಧವಾಗಿ ಮತಕೊಟ್ಟಿದ್ದಾರೆ. ಆದುದರಿಂದ ಬಹುಮತಾಭಿಪ್ರಾಯ ಪಡೆಯುತ್ತಿರುವ ಈಗಿನ ಪದ್ಧತಿ ಸರಿಯಲ್ಲ.

ಅಥವಾ, ಒಂದು ಅಭಿಪ್ರಾಯ ಪಡೆದಿರುವ ಒಂದು ಪಕ್ಷ ಅಥವಾ ಗುಂಪಿನ ಜನ ಒಂದೆಡೆಯಲ್ಲಿದ್ದಾರೆನ್ನಿ. ಅವರು ಒಂದೇ ಕ್ಷೇತ್ರದಲ್ಲಿದ್ದರೆ ಅವರಿಗೆ ಚುನಾವಣೆಯಲ್ಲಿ ಸ್ಥಾನ ಸಿಕ್ಕಬಹುದು. ಆದರೆ ಬಹು ಸಂದರ್ಭಗಳಲ್ಲಿ ಕ್ಷೇತ್ರವನ್ನು ವಿಂಗಡಿಸುವವರು ಉದಾಸೀನದಿಂದಲೊ, ಉದ್ದೇಶಪೂರ್ವಕವಾಗಿಯೊ ಅಂತಹ ಪಕ್ಷವಿರುವ ಸ್ಥಳವನ್ನು ಒಂದು ಕ್ಷೇತ್ರಕ್ಕೆ ಸೇರಿಸದೆ ಅದನ್ನು ಒಡೆದು ಸುತ್ತಮುತ್ತಲಿನ ಕ್ಷೇತ್ರಗಳಿಗೆ ಹರಿದು ಹಂಚುತ್ತಾರೆ (Gerrymandering). ಇದರಿಂದ ಅಲ್ಪ ಸಂಖ್ಯಾತ ಪಂಗಡಗಳ ಅಭಿಪ್ರಾಯ ತಿಳಿಯಲು ಅವಕಾಶವೇ ಇರುವುದಿಲ್ಲ. ಹಾಗೂ ಜನಸಂಖ್ಯೆಗನುಗುಣವಾಗಿ ಕ್ಷೇತ್ರಗಳನ್ನು ವಿಂಗಡಿಸುವ ನಾವು, ಅದೇ ಜನಸಂಖ್ಯೆ ಎಷ್ಟುಕಾಲ ಆ ಕ್ಷೇತ್ರದಲ್ಲಿದೆ, ಹಾಗೆ ಬದಲಾವಣೆಯಾದರೆ ಕ್ಷೇತ್ರಗಳನ್ನು ಹೇಗೆ ಪುನರ್ವಿಂಗಡನೆ ಮಾಡಬೇಕು ಎಂಬುದನ್ನು ಕಾಲಕಾಲಕ್ಕೆ ನೋಡದಿದ್ದರೆ ಜನಸಂಖ್ಯೆಗನುಗುಣವಾಗಿ ಪ್ರತಿನಿಧಿಗಳನ್ನು ಕಳುಹಿಸದೆ ಅನ್ಯಾಯವಾದೀತು.

ಚುನಾಯಿತರಾಗಿ ಬಂದ ಜನ ಆಯಾ ಕ್ಷೇತ್ರಗಳ ಜನಸಂಖ್ಯೆಗನುಗುಣವಾಗಿದೆಯೇ, ಚುನಾವಣೆಯ ಆಯುಕಟ್ಟಿನಲ್ಲಿ ಎಲ್ಲ ಪಕ್ಷಗಳ ಅಭಿಪ್ರಾಯವನ್ನು ಪ್ರತಿಬಿಂಬಿಸುವಂತೆ ಆಯಾ ಪಕ್ಷಗಳ ಪ್ರತಿನಿಧಿಗಳು ಚುನಾಯಿತರಾಗಲು ಅವಕಾಶವಿದೆಯೇ ಎಂಬಿವೇ ಮೊದಲಾದ ಅಂಶಗಳು ಹಲವಾರು ಪರಿಸ್ಥಿತಿಗಳನ್ನು

ಅವಲಂಬಿಸಿವೆ. ಚುನಾವಣಾ ಕ್ಷೇತ್ರಗಳನ್ನು ವಿಂಗಡಿಸುವ ವಿದಾನ (Whether single or plural member constituency), ಜನಸಂಖ್ಯೆಯ ವಿಂಗಡಣೆಯ ವಿಧಾನ, ಏಕ ಸದಸ್ಯ ಚುನಾವಣಾ ಕ್ಷೇತ್ರವಾದರೆ ಮತದಾನ ಪದ್ಧತಿ ಯಾವುದು (Simple majortiy vote or second-ballot or alternative vote), ಬಹು ಸದಸ್ಯ ಚುನಾವಣಾ ಕ್ಷೇತ್ರವಾದರೆ ಮತಪದ್ಧತಿ ಎಂತಹುದು (Single non-transferable vote or distributive vote or cumulative vote or proportional representation), ಇತ್ಯಾದಿ ಪ್ರತಿ ಒಂದು ಅಂಶವೂ ಒಂದೊಂದು ವಿಧವಾದ ಫಲಿತಾಂಶವನ್ನು ಕೊಡುತ್ತದೆ.

ಇನ್ನೊಂದು ಸಮಸ್ಯೆ. ಮತ ಕೊಡುವವನು ಯಾವ ಅಭಿಪ್ರಾಯಕ್ಕೆ ಬೆಲೆಕೊಡಬೇಕು ? ಚುನಾವಣೆಯಲ್ಲಿ ರಾಜಕೀಯ ಪಂಗಡಗಳು ಸ್ಪರ್ಧಿಸುತ್ತವೆ. ಒಂದೊಂದು ಪಂಗಡವೂ ಒಂದೊಂದು ನೀತಿಯನ್ನು ಎತ್ತಿಹಿಡಿಯುವುದು; 'ಅದಕ್ಕನುಸಾರವಾದ ಕಾರ್ಯಕ್ರಮವನ್ನು ಏರ್ಪಡಿಸುವುದು. ಮತ ಕೊಡುವವನಿಗೆ ಒಂದು ರಾಜಕೀಯ ಪಂಗಡದ ಕಾರ್ಯಕ್ರಮದ ಕೆಲವಂಶಗಳು ಇಷ್ಟವಾಗಿರಬಹುದು, ಬೇರೊಂದು ರಾಜಕೀಯ ಪಂಗಡದ ಕೆಲವು ಕಾರ್ಯಕ್ರಮಗಳೂ ಇಷ್ಟವಾಗಿರಬಹುದು. ಆವನು ಚುನಾವಣೆಯಲ್ಲಿ ಮತಕೊಡುವ ಬಗೆ ಹೇಗೆ ? ಯಾರನ್ನು ಆರಿಸಬೇಕು ? ಬೇರೆ ದಾರಿಯೇ ಇಲ್ಲ. ತನಗೆ ಒಪ್ಪಿಗೆ ಇರಲಿ, ಇಲ್ಲದಿರಲಿ, ಒಂದು ರಾಜಕೀಯ ಪಂಗಡದ ಪ್ರತಿನಿಧಿಗೆ ಮತಕೊಡುವುದು. ಇದರಿಂದ ನೈಜವಾದ ಜನಾಭಿಪ್ರಾಯ ವ್ಯಕ್ತಗೊಂಡಂತಾಯಿತೇನು ?

ಮತ್ತೊಂದು ಸಮಸ್ಯೆ. ಚುನಾವಣೆಯ ಕಾಲದಲ್ಲಿ ತಮ್ಮನ್ನು ಪ್ರತಿನಿಧಿಸ್ಥಾನಕ್ಕೆ ಆರಿಸಿದರೆ, ತಾವು ಇಂತಿಂತಹ

ಕಾರ್ಯಕ್ರಮಗಳನ್ನು ನೆರವೇರಿಸುವೆವೆಂದು ರಾಜಕೀಯ ಪಂಗಡಗಳೂ ವ್ಯಕ್ತಿಗಳೂ ಘೋಷಿಸುವರಷ್ಟೆ. ಅಂದಮೇಲೆ ಜಯಶೀಲರಾದ ಪ್ರತಿನಿಧಿಗಳು ತಾವು ಚುನಾವಣೆಯ ಕಾಲದಲ್ಲಿ ಜನಕ್ಕೆ ಇತ್ತ ಭರವಸೆಯನ್ನು ಪಾಲಿಸುವುದು ಕರ್ತವ್ಯವೆಂದೆಣಿಸಲೇಬೇಕು. ಅದರಂತೆ ನಡೆಯಲೇಬೇಕು. ಚುನಾವಣೆಯ ಘೋಷಣೆಗಳಲ್ಲಿ ಅಡಕವಾಗದಿರುವ ಅಂಶಗಳಲ್ಲಿ ಚುನಾಯಿತ ಪ್ರತಿನಿಧಿ ಸ್ವತಂತ್ರಾಭಿಪ್ರಾಯದಂತೆ–ತನ್ನನ್ನು ಚುನಾಯಿಸಿದ ಮತದಾರರ ಅಭಿಪ್ರಾಯಕ್ಕೂ ವಿರೋಧವಾಗಿ-ವರ್ತಿಸಬಹುದೆ? ಹಾಗೆ ವರ್ತಿಸಿದರೆ ಜನಾಭಿಪ್ರಾಯವನ್ನು ಕಾರ್ಯರೂಪಕ್ಕೆ ತಂದಂತಾಯಿತೆ? ಇಲ್ಲ. "ಚುನಾಯಿತ ಪ್ರತಿನಿಧಿ ಸ್ವತಂತ್ರಾಭಿಪ್ರಾಯವನ್ನು ಹೊಂದಿ ಅದರಂತೆ ಆಚರಿಸಲು ಸ್ವತಂತ್ರನಿರುವನು. ತನ್ನ ವಿಚಾರಿಸಿದ್ದ ಅಭಿಪ್ರಾಯ, ನುರಿತ ಸಿದ್ಧಾಂತ ಮತ್ತು ಅರಿವನ್ನು ಜನಕ್ಕಾಗಿ ಪ್ರತಿನಿಧಿ ತ್ಯಾಗಮಾಡಬೇಕಾದುದಿಲ್ಲ. ಪ್ರತಿನಿಧಿಯ ದುಡಿಮೆ ಜನಕ್ಕಾಗಿ; ಆತನ ತಿಳಿವಳಿಕೆಯೂ ಜನಕ್ಕಾಗಿ. ಇವನ್ನು ತ್ಯಾಗಮಾಡಿದರೆ ಪ್ರತಿನಿಧಿ ಜನಕ್ಕೆ ತಾನು ಸಲ್ಲಿಸಬೇಕಾದ ಸೇವೆ ಸಲ್ಲಿಸದಂತಾಗದು" ಎಂದು ಎಡ್ಮಂಡ್ ಬರ್ಕ್ ಹೇಳಿರುವುದೇನೊ ನಿಜ. ಆದರೆ ಈ ಕಾಲಕ್ಕೆ ಅದು ಎಷ್ಟರಮಟ್ಟಿಗೆ ಅನ್ವಯಿಸುವುದೋ ಅದು ಸಂಶಯ.

ಚುನಾವಣೆಗಳು ಕೆಲವು ವರ್ಷಗಳ ಅಂತರದಲ್ಲಿ ನಡೆಯುವುವು. ಚುನಾಯಿತವಾಗಿ ಬಂದ ಪ್ರಮುಖ ರಾಜಕೀಯ ಪಂಗಡ ಮರುಚುನಾವಣೆಯವರೆಗೂ ಪ್ರಭುತ್ವ ನಡೆಸುವುದು. ಈ ಸರ್ಕಾರ ನಡೆಸುವ ಕಾರ್ಯಕ್ರಮಗಳೆಲ್ಲಾ ಜನಕ್ಕೆ ಒಪ್ಪಿಗೆಯಾಗಿದೆಯೆಂದು ಭಾವಿಸುವುದು ಹೇಗೆ? ಜನಾಭಿಪ್ರಾಯಕ್ಕೆ ವಿರೋಧವಾದ ಕಾರ್ಯಗಳು ಏಕೆ ನಡೆಯಬಾರದು? ಜನಾಭಿ

ಪ್ರಾಯಕ್ಕೆ ವಿರೋಧವಾದಮೇಲೆ ಪ್ರಜಾಪ್ರಭುತ್ವ ಹೇಗಾಯಿತು? ಚುನಾವಣೆಗಳ ಅಂತರದಲ್ಲಿ ಜನ ತನ್ನ ಅಭಿಪ್ರಾಯ ತಿಳಿಸಲು ಮತ್ತು ತನ್ನ ಪರಮಾಧಿಕಾರ ಬೀರಲು ಮಾರ್ಗಗಳಾವುವು?

ಒಂದು ಚುನಾವಣೆಯಾದಮೇಲೆ ಮರುಚುನಾವಣೆ ನಡೆಯುವುದರೊಳಗೆ ಸರ್ಕಾರ ಜನಾಭಿಪ್ರಾಯವನ್ನು ತಿಳಿಯಲು ಕೆಲವು ಮಾರ್ಗಗಳು ಆಚರಣೆಯಲ್ಲಿವೆ. ಸರ್ಕಾರ ಕೈಗೊಳ್ಳುವ ಪ್ರಮುಖ ಸಮಸ್ಯೆಗಳ ವಿಷಯದಲ್ಲಿ ಜನಾಭಿಪ್ರಾಯವೆಂತಿದೆ, ಆ ಅಂಶದಲ್ಲಿ ಜನಕ್ಕೆ ಒಪ್ಪಿಗೆ ಉಂಟೇ ಅಥವಾ ಇಲ್ಲವೇ ಎನ್ನುವುದನ್ನು ಸರ್ಕಾರ ಜನದ ಮತಕ್ಕೊಳಪಡಿಸಿ ನಿರ್ಧರಿಸುವ ಕ್ರಮ ಹಲಕೆಲವೆಡೆಯಲ್ಲಿದೆ. ಇದಕ್ಕೆ 'ರೆಫೆರೆಂಡಂ' ಎಂದು ಹೆಸರು. ಇಂಥ ಕಾರ್ಯಕ್ರಮವನ್ನು ಸರ್ಕಾರ ಕೈಕೊಳ್ಳಲೇ ಬೇಕಾದದು ಅಗತ್ಯವೆಂದು ಜನಕ್ಕೆ ತೋರಿದರೆ, ಅಥವಾ ಸರ್ಕಾರ ಕೈಕೊಂಡಿರುವ ಯಾವುದಾದರೂ ಕಾರ್ಯ ಅನಗತ್ಯವೆಂದು ಜನಕ್ಕೆ ತೋರಿದರೆ, ಅದನ್ನು ಜನ ವ್ಯಕ್ತಪಡಿಸಲೂ ಹಲವೆಡೆ ಮಾರ್ಗವಿದೆ. ಯಾವುದಾದರೊಂದು ವಿಷಯವಾಗಿ ಜನಾಭಿಪ್ರಾಯ ಇಂತೆಂದು ಗೊತ್ತಾದ ಸಂಖ್ಯೆಯ ಜನ ಸರ್ಕಾರಕ್ಕೆ ಸೂಚನೆ ಇತ್ತರೆ ಅದಕ್ಕನುಗುಣವಾಗಿ ಸರ್ಕಾರ ಕಾರ್ಯಕ್ರಮ ನೆರವೇರಿಸುತ್ತದೆ. ಇದಕ್ಕೆ 'ಇನಿಷಿಯೇಟಿವ್' ಎಂದು ಹೆಸರು. ಸರ್ಕಾರವನ್ನು ಅಧಿಕಾರದಿಂದ ನಿವೃತ್ತಿಗೊಳಿಸುವ ವಿಷಯವಾಗಿಯಾಗಲಿ, ಸರ್ಕಾರದ ಯಾವೊಂದು ನಡೆವಳಿಕೆಯನ್ನು ತಡೆಗಟ್ಟುವ ವಿಷಯವಾಗಿಯಾಗಲಿ ಜನಕ್ಕಿರುವ ಅಧಿಕಾರಕ್ಕೆ 'ರೀಕಾಲ್' ಎಂದು ಹೆಸರು.

ಜನಕ್ಕೆ ಈ ಮೇಲ್ಕಂಡ ಅಧಿಕಾರಗಳಿದ್ದರೆ, ಚುನಾವಣೆಗಳ ಅಂತರಗಳಲ್ಲೂ ಸರ್ಕಾರ ಜನದ ಇಂಗಿತವನ್ನರಿತು ಅದರಂತೆಯೇ

ನಡೆಯಬೇಕಾದ ಒತ್ತಾಯವಿರುತ್ತೆ. ಪ್ರಜಾಪ್ರಭುತ್ವ ಅದರ ಗೆರೆಗನುಸಾರವಾಗಿ ಸಾಗುತ್ತೆ. ಸ್ವಿಡ್ಜರ್ಲೆಂಡ್‌ನಂತಹ ಸಣ್ಣ ದೇಶದಲ್ಲಿ ಈ ಪದ್ಧತಿ ಸಾಧ್ಯ—ದೇಶ ಚಿಕ್ಕದು, ಜನಸಂಖ್ಯೆ ಕಡಿಮೆ. ದೊಡ್ಡ ರಾಷ್ಟ್ರಗಳಲ್ಲಿ ರೆಫರೆಂಡಂ, ಇನಿಷಿಯೇಟಿವ್ ಮತ್ತು ರೀಕಾಲ್ ಪದ್ಧತಿ ಸಾಧ್ಯವಿಲ್ಲ. ಹಾಗೂ ಈ ಪದ್ಧತಿಗಳಿರುವೆಡೆಯಲ್ಲೂ ಸಹ ಸರ್ಕಾರದ ಎಲ್ಲ ಕಾರ್ಯಗಳನ್ನೂ ಜನ ತನ್ನ ಅಂಕೆಗೊಳಪಡಿಸಿಕೊಳ್ಳಲು ಸಾಧ್ಯವಿಲ್ಲ.

ಪ್ರತಿನಿಧಿ ಸ್ಥಾನಗಳು ಖಾಲಿಬಿದ್ದಾಗ ಆ ಸ್ಥಾನಗಳಿಗೆ ಉಪಚುನಾವಣೆಗಳು ನಡೆಯುವುವಷ್ಟೆ. ಈ ಉಪಚುನಾವಣೆಗಳಲ್ಲೂ ವಿವಿಧ ರಾಜಕೀಯ ಪಂಗಡಗಳು ಸ್ಪರ್ಧಿಸುವುವು. ಸರ್ಕಾರ ನಡೆಸುವ ಪಕ್ಷದ ಪ್ರತಿನಿಧಿಗೆ ಬಹುಮತ ದೊರಕಿದರೆ, ಆಗ ಸರ್ಕಾರ ನಡೆಸುತ್ತಿರುವ ಕಾರ್ಯಗಳಿಕೆ ಜನರ ಒಪ್ಪಿಗೆ ಇವೆ ಎಂದು ಊಹಿಸಬಹುವುದು. ಇದು ಚುನಾವಣೆಯ ಅಂತರದಲ್ಲಿ ಜನಾಭಿಪ್ರಾಯ ಪಡೆಯುವ ಒಂದು ಬಗೆ. ಆದರೆ ಉಪಚುನಾವಣೆಗೆ ನಿಲುಕುವ ಸ್ಥಾನಗಳೆಷ್ಟು, ಕ್ಷೇತ್ರಗಳೆಷ್ಟು? ಒಂದೆರಡು ಕ್ಷೇತ್ರಗಳ ಉಪಚುನಾವಣೆಯಿಂದ ಇಡೀ ಜನತೆಯ ಅಭಿಪ್ರಾಯವರಿಯಲು ಹೇಗೆ ಸಾಧ್ಯ?

ಅನಧಿಕೃತವಾದ ರೀತಿಯಲ್ಲಿ ಜನಾಭಿಪ್ರಾಯ ಪಡೆಯುವ ಮಾರ್ಗ ಒಂದುಂಟು. ಇದನ್ನು "ಗ್ಯಾಲಪ್ ಪೋಲ್" ಎಂದು ಕರೆಯುವರು. ರಾಷ್ಟ್ರದ ಮುಖ್ಯ ವಿಷಯ ಒಂದರ ಮೇಲೆ ಜನಾಭಿಪ್ರಾಯ ಎಂತಿದೆ ಎಂದರಿಯಲು ಮತಸೂಚಕ ಪೆಟ್ಟಿಗೆಗಳನ್ನು ಸಾರ್ವಜನಿಕ ಎಡೆಗಳಲ್ಲಿರಿಸುವುದು, ಅಭಿಪ್ರಾಯ ಸೂಚಿಸಬೇಕಾದ ವಿಷಯಗಳಲ್ಲಿ ಪ್ರಶ್ನಾವಳಿ ಪ್ರಚುರಪಡಿಸುವುದು, ಆ ಪ್ರಶ್ನಾವಳಿಗೆ ಉತ್ತರವನ್ನು ಬರೆದು ಮತ

ಸೂಚಕ ಪೆಟ್ಟಿಗೆಗಳಲ್ಲಿ ಹಾಕುವಂತೆ ಜನರನ್ನು ಕೋರುವುದು, ಇಂತು ಬಂದ ಮತಸೂಚನೆಗಳ ಪರಿಶೀಲನೆಯಿಂದ ಜನಾಭಿಪ್ರಾಯವೇನಿದೆ ಎಂದರಿಯುವುದು. ಇದು ಸಂಯುಕ್ತ ಸಂಸ್ಥಾನದಲ್ಲಿ ವಿಶೇಷವಾಗಿ ಆಚರಣೆಯಲ್ಲಿದೆ. ಹೀಗೆ ಅನಧಿಕೃತವಾಗಿ ಜನಾಭಿಪ್ರಾಯವನ್ನು ಗೊತ್ತುಹಚ್ಚಲು ಏರ್ಪಟ್ಟಿರುವ ಸಾಧನ ಸದಾ ಕಾಲದಲ್ಲೂ ಸರಿಯಾದ ಫಲಿತಾಂಶವನ್ನೇ ಕೊಡುತ್ತದೆಂದು ಹೇಳಲು ಸಾಧ್ಯವಿಲ್ಲ. ಕೆಲವು ಸಂದರ್ಭದಲ್ಲಿ ನೈಜವಾದ ಅಭಿಪ್ರಾಯ ಹೊರಗೆಡಹಬಹುದು, ಮತ್ತೆ ಕೆಲವು ಸಂದರ್ಭದಲ್ಲಿ ಹಾಗಾಗದಿರಬಹುದು.

೭. ಪ್ರಜಾಭಿಪ್ರಾಯದ ಗುಣದೋಷಗಳು

ನೈಜವಾದ ಪ್ರಜಾಪ್ರಭುತ್ವದ ನಡೆಯಲ್ಲಿ ಮೇಲೆ ಹೇಳಿದಂತೆ ಅನೇಕ ತೊಂದರೆಗಳಿವೆ. ರಾಷ್ಟ್ರದ ಪೂರ್ಣ ಪರಮಾಧಿಕಾರಿಯಾದ ಜನದ ಉದ್ದೇಶಗಳನ್ನು ತಿಳಿದು ಪ್ರತಿ ಕಾರ್ಯವನ್ನೂ ಅವರ ಇಂಗಿತದಂತೆ ಮಾಡುವ ಸರ್ಕಾರ ಎಷ್ಟಿವೆ? ಅದು ಸಾಧ್ಯವೂ ಅಲ್ಲ.

ಅನೇಕ ಸಂದರ್ಭಗಳಲ್ಲಿ ಶಾಸಕಸಿದ್ಧ ಪರಮಾಧಿಕಾರಾಂಗಗಳ ನಡೆವಳಿಕೆಗೂ ಪ್ರಪೂರ್ಣ ಪರಮಪ್ರಭುವಾದ ಜನದ ಆಶಯಗಳಿಗೂ ಹೆಚ್ಚಿನ ಅಂತರವಿರುವುದು ಆಶ್ಚರ್ಯವೇನಿಲ್ಲ. ಅಂತಹ ಸಂದರ್ಭಗಳಲ್ಲಿ ನೀತಿರಹಿತ ಸರ್ಕಾರವೇನಾದರೂ ಇದ್ದರೆ, ಅದರ ನಡೆವಳಿಕೆ ಸಂಪೂರ್ಣವಾಗಿ ದುಷ್ಟವೂ ಅನೀತಿಯುತವೂ ಆಗುವುದರಲ್ಲಿ ಸಂದೇಹವೇನು? "ಅನೀತಿಯ ಹಾದಿ ಹಿಡಿಯುವುದು ಅಧಿಕಾರದ ಸ್ವಭಾವ. ಅಧಿಕಾರ ಪೂರ್ಣವಾಗಿ ನಿರಂಕುಶವಾದರೆ ಅಂತಹ ನಿರಂಕುಶಾಧಿಕಾರ ಸಂಪೂರ್ಣ

ಸ್ವೇಚ್ಛಾವೃತ್ತಿಯೇ ಆಗುವುದು" ಎಂದು ಲಾರ್ಡ್ ಆಕ್ಟನ್ ಹೇಳಿದ್ದಾನೆ.

ಪ್ರಜಾಪ್ರಭುತ್ವದಲ್ಲಿ ಕಂಡುಬರುವ ಈ ಮೇಲ್ಕಂಡ ನ್ಯೂನತೆಗಳನ್ನು ಅಧಿಕಾರದ ವಿಂಗಡನೆಯ ಪದ್ಧತಿಯಿಂದ (Separation of Powers) ನಿವಾರಿಸಬಹುದೆಂದು ಭಾವಿಸಲಾಗಿದೆ. ರಾಷ್ಟ್ರದ ಕರ್ತವ್ಯಗಳು ಶಾಸಕಾಂಗ, ಕಾರ್ಯಾಂಗ, ಮತ್ತು ನ್ಯಾಯಾಂಗಗಳೆಂಬ ಆಡಳಿತಾಂಗಗಳಾಗಿ ವಿಂಗಡವಾಗಿವೆ. ಒಂದೊಂದು ಅಂಗವೂ ಪ್ರತ್ಯೇಕ. ಅದರಲ್ಲೂ ನ್ಯಾಯಾಂಗ ಇತರ ಎರಡು ಅಂಗಗಳಿಂದ ಪ್ರತ್ಯೇಕ ಮಾತ್ರವಷ್ಟೇ ಅಲ್ಲ, ಸ್ವತಂತ್ರವೂ ಅಹುದು. ಇಂತು ವಿಂಗಡನೆ ಇದ್ದರೆ ಒಂದು ಶಾಖೆ ಮತ್ತೊಂದು ಶಾಖೆಯ ಮೇಲೆ ಒಂದು ರೀತಿಯಾದ ಹತೋಟಿಯನ್ನಿಟ್ಟಿರಲು ಸಾಧ್ಯ; ಒಂದು ಮತ್ತೊಂದರ ಕಾರ್ಯಕಲಾಪಗಳನ್ನು ವಿಮರ್ಶಿಸಲೂ ಬಹುದು. ಈ ರಾಜ್ಯಾಡಳಿತಾಂಗಗಳಲ್ಲಿ ತಲೆದೋರಬಹುದಾದ ಭಿನ್ನಾಭಿಪ್ರಾಯಗಳಿಂದ ಜನರ ಗಮನ ಆ ಕಡೆ ಬೀಳುವುದು. ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಜನ ತಿಳಿಯುವುದು. ತತ್ಪರಿಣಾಮವಾಗಿ ವೃತ್ತಪತ್ರಿಕೆಗಳ ಮತ್ತು ಇತರ ಜನಾಭಿಪ್ರಾಯ ವಾಹಿನಿಗಳ ಮೂಲಕ ಜನಾಭಿಪ್ರಾಯ ಹೊರಬೀಳುವುದು. ಜನಾಭಿಪ್ರಾಯವನ್ನು ಅರಿತು ಸರ್ಕಾರ ಎಚ್ಚತ್ತು ಅದರಂತೆ ನಡೆಯಲು ಸಾಧ್ಯವಾಗುವುದು.

ಜನಾಭಿಪ್ರಾಯದ ಪರಮಶಕ್ತಿಯನ್ನು ಕಾಪಿಡುವ ಸಲುವಾಗಿ ಏರ್ಪಟ್ಟಿರುವ ಇತರ ಮಾರ್ಗಗಳೆಂದರೆ, ರಾಷ್ಟ್ರದ ರಾಜ್ಯಾಂಗ ಶಾಸನ ಲಿಖಿತ ರೂಪವಾಗಿರುವುದು (Written constitution), ರಾಜ್ಯಾಂಗ ಬದಲಾವಣೆ ಕಠಿಣ ರೀತಿಯಲ್ಲಿ ನಡೆಯುವಂತಿರುವುದು (Rigid constitution), ಪೌರನ ಮೂಲಭೂತ

ಹಕ್ಕುಗಳ ಸ್ಪಷ್ಟ ಉಲ್ಲೇಖನ (Enumeration of the fundamental rights), ಎಲ್ಲರಿಗೂ ಸಮನಾಗಿ ಅನ್ವಯಿಸುವ ಶಾಸನ ಘೋಷಣೆ (Rule of Law), ನ್ಯಾಯಾಂಗ ಸ್ವಾತಂತ್ರ್ಯ ಅಂಗೀಕಾರ (Separation of the Judiciary) ಇವೇ ಮೊದಲಾದವು. ಇವಕ್ಕೂ ಹೆಚ್ಚಿನದಾಗಿ, ದೇಶದಲ್ಲಿ ಸುವ್ಯವಸ್ಥಿತ ರಾಜಕೀಯ ಪಕ್ಷಗಳಿರಬೇಕು. ವಿವಿಧ ಪಕ್ಷಗಳಿಲ್ಲದಿದ್ದರೆ ವಿವಿಧಾಭಿಪ್ರಾಯಗಳು ಪ್ರಕಾಶಗೊಳ್ಳಲು ಅವಕಾಶವೇ ಇಲ್ಲ. ಒಂದೇ ಪಕ್ಷದ—ಹಾಗೂ ಆ ಪಕ್ಷದ ಹಲಕೆಲವರ—ಕೈವಾಡಕ್ಕೆ ರಾಜ್ಯ ತುತ್ತಾಗುತ್ತದೆ. ಆದ್ದರಿಂದ ಪಕ್ಷ ಪ್ರತಿಪಕ್ಷಗಳ ಬೆಳವಣಿಗೆಗೆ ಅವಕಾಶವಿರಬೇಕು. ರಾಜ್ಯಾಂಗ ಇಂತಿದ್ದರೆ ಮಾತ್ರ ಮಾನವನ ಹಕ್ಕುಗಳಿಗೆ ಭರವಸೆ ಲಭಿಸಿದಂತೆ. ಈ ಭರವಸೆಯಿದ್ದರೆ ಪ್ರಜಾಪ್ರಭುತ್ವದ ಅಸ್ತಿತ್ವ ಉಳಿದಂತೆ. ಜನಾಭಿಪ್ರಾಯ ಅಂದೀಗ ನಿರ್ಭಯವೂ ಸ್ವತಂತ್ರವೂ ಆದ ವಾತಾವರಣದಲ್ಲಿ ಪುಷ್ಟವಾಗಿ ವ್ಯಕ್ತಗೊಳ್ಳುವುದು. ಪ್ರಜಾಪ್ರಭುತ್ವ ತನ್ನ ನೈಜ ರೂಪದಲ್ಲಿ ಸಾಗಲು ಸಾಧ್ಯವಾಗುವುದು.

ತಮಗೇನು ಬೇಕೆಂದು ಆಜ್ಞಾಪಿಸುವ ಅಧಿಕಾರ ಇರುವ ಜನಕ್ಕೆ ತಮಗೆ ಬೇಕಾದುದನ್ನು ಪಡೆಯುವ ಮಾರ್ಗ ತಿಳಿಯದು. ಜನಾಭಿಪ್ರಾಯ ರಾಷ್ಟ್ರದ ಗುರಿಯನ್ನು ನಿರ್ದೇಶಿಸಬಲ್ಲದು; ಉದ್ದೇಶವನ್ನು ನಿರೂಪಿಸಬಲ್ಲದು. ಆ ಗುರಿ ಉದ್ದೇಶ, ಇವುಗಳ ಸಾಧನಮಾರ್ಗ ತೋರಿಸಿಕೊಡುವ ಶಕ್ತಿ ಜನಕ್ಕೆ ಇಲ್ಲ.

ಈ ಗ್ರಂಥವನ್ನು ಸಮಾಪ್ತಿಗೊಳಿಸುವ ಮುನ್ನ, ಜನಾಭಿಪ್ರಾಯ ಎಡವಿ ಮುಗ್ಗರಿಸುತ್ತಿರುವುದು ಹೇಗೆ, ಎಲ್ಲಿ ಎನ್ನುವ ವಿಷಯ ಪ್ರಸ್ತಾಪಿಸುವ. ವಿಚಾರ ಶೂನ್ಯತೆ, ಅಜ್ಞಾನ,

ಮತವೈಷಮ್ಯ, ಸಂಪ್ರದಾಯ ಶರಣತೆ, ಮೂಢಭಕ್ತಿ ಇವು ಗಳಲ್ಲಿ ಮುಳುಗಿರುವ ಇಂದಿನ ಜನದಿಂದ ಸರಿಯಾದ ಜನಾಭಿ ಪ್ರಾಯ ಹೊರಹೊಮ್ಮುವುದೇ? ಇತಿಹಾಸದ ನಡೆಯಲ್ಲಿ ನೋಡಿಲ್ಲವೇ, ಅತ್ಯಗತ್ಯವಾದ ಪ್ರಗತಿಪರ ಸುಧಾರಣೆಗಳಿಗೆ ಜನ ಮಾತ್ಸರ್ಯಪೂರಿತ ದೃಷ್ಟಿಯಿಂದ ಎಂತು ಪ್ರತಿಭಟಿಸಿದೆ ಎಂಬುದನ್ನು. 'ಸತಿ' ಪದ್ಧತಿ ಅನ್ಯಾಯವೆಂದು ಸಾರಿ ಸಮಾಜಸುಧಾರಣೆಗೆ ನಿಂತ ಲಾರ್ಡ್ ವಿಲಿಯಂ ಬೆಂಟಿಂಕ್, ರಾಜಾರಾಮಮೋಹನರಾಯ್ ಇವರಿಗೆ ಎಷ್ಟು ವಿರೋಧ ಉಂಟಾಯಿತು? ವಿಧವಾ ವಿವಾಹವನ್ನು ಶಾಸನಬದ್ಧವಾಗಿ ಮಾಡಲೆಳಸಿದ ಲಾರ್ಡ್ ಕ್ಯಾನಿಂಗನಿಗೆ ಎಷ್ಟು ಪ್ರತಿಭಟನೆ ಏರ್ಪಟ್ಟಿತು? ಹಿಂದೂ ಕಾನೂನನ್ನು ಪರಿಷ್ಕರಿಸಿ ಸುಧಾರಿಸಲು ಹೊರಟಿರುವ ಭಾರತದ ಹಿಂದೂ ಕಾಯಿದೆ ಮಸೂದೆಯನ್ನು ತಡೆಗಟ್ಟಲು ನಡೆಯುತ್ತಿರುವ ಭಗೀರಥ ಪ್ರಯತ್ನಗಳೆಷ್ಟು? ಈ ಜನಾಭಿಪ್ರಾಯಕ್ಕೆ ವಿರೋಧವಾಗಿ ನಡೆಯುವುದು ಹೇಗೆ? ಈ ಜನಾಭಿಪ್ರಾಯವನ್ನು ಉಲ್ಲಂಘಿಸಿದರೆ ಪ್ರಜಾಪ್ರಭುತ್ವ ವನ್ನು ನಿರಾಕರಿಸಿದಂತೆ. ಒಳ್ಳೆಯುದಕ್ಕೂ ಜನ ವಿರೋಧಿ ಸಿದರೆ—ಅದೇ ಜನಾಭಿಪ್ರಾಯವಾದರೆ—ಅದು ಪ್ರಗತಿ ವಿರೋಧ. ಹೀಗಾದರೆ ಏನು ಮಾಡಬೇಕು? ಸರಿಯಾದ ಪ್ರಚಾರದ ಮೂಲಕ ಜನರಲ್ಲ ತಿಳಿವಳಿಕೆ ತುಂಬಬೇಕು, ವಿಚಾರಶಕ್ತಿ ಮೊಳೆಯುವಂತೆ ಮಾಡಬೇಕು. ಅದೀಗ ಈ ತೆರನಾದ ನ್ಯೂನತೆಗೆ ಪರಿಹಾರ.

ತಮ್ಮ ದೃಷ್ಟಿಕೋಣಕ್ಕೆ ಸರಿಯಾಗಿ ಜನರ ಮನಸ್ಸನ್ನು ತಿರುಗಿಸಿ ತಮ್ಮ ಉದ್ದೇಶಗಳನ್ನೂ, ಗುರಿಗಳನ್ನೂ ಸಾಧಿಸಿ ಕೊಳ್ಳುವ ಚತುರ ನಾಯಕರಿದ್ದಾರೆ ಸಮಾಜದಲ್ಲಿ. ಇವರಿಂದ

ಪ್ರಜಾಪ್ರಭುತ್ವಕ್ಕೆ ಅಪಾಯವಿದೆ. ಒಂದು ರೀತಿಯ ಚಳುವಳಿಕಾರರಿವರು. ತಮ್ಮ ಇಷ್ಟಕ್ಕನುಗುಣವಾದ ಅಭಿಪ್ರಾಯವನ್ನು ಜನರಲ್ಲಿ ಮೂಡಿಸಿ, ತಮ್ಮ ತಾಳಮೇಳಗಳಿಗೆ ಸರಿಯಾಗಿ ಜನ ಕುಣಿಯುವಂತೆ ಮಾಡುವ ಚಾಣಿಕ್ಯರಿವರು. ವೃತ್ತಪತ್ರಿಕೆಗಳೇ ಮೊದಲಾದ ಸಮಾಚಾರ ವಾಹಿನಿಗಳನೇಕವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಪ್ರಚಾರ ನಡೆಸಿ ತಮ್ಮ ಕಡೆಯವರೇ ಅಧಿಕಾರಸೂತ್ರ ವಹಿಸುವಂತೆ ಸಾಧಿಸುವ ಸಮರ್ಥರಿವರು. ಇಂತಹವರಿಂದ ಸಾರ್ವಜನಿಕ ಘನತೆಗೇ ಹಾನಿ. ಮತ ವೈಷಮ್ಯದಿಂದ ಮೊದಲ್ಗೊಂಡು ವಿಶಿಷ್ಟ ಸಂಕುಚಿತ ಭಾವನೆಗಳೂ ದ್ವೇಷಾಸೂಯೆಗಳೂ ಮೊಳೆಯಲು ಈ ನಾಯಕರು ಕಾರಣವಾಗುವರು. ತತ್ಪರಿಣಾಮವಾಗಿ ಸಮಾಜದಲ್ಲಿ ಒಡಕುಂಟಾಗುವುದು, ಜಗಳಗಳು ಹುಟ್ಟುವುವು, ಬಿಗಿ ಸಡಿಲುವುದು ಮತ್ತು ಸ್ವಾರ್ಥದ ಸಂಚು ತಾಂಡವವಾಡುವುದು. ಜನದ ಮನಸ್ಸಿನಲ್ಲಿ ತಮ್ಮ ಇಷ್ಟಕ್ಕನುಸಾರವಾದ ಅಭಿಪ್ರಾಯ ಮೂಡುವಂತೆ ಮಾಡಿ ಅವರನ್ನು ತಮ್ಮ ಹಿಡಿತಕ್ಕೊಳಪಡಿಸಿಕೊಳ್ಳುವ ಸ್ವಾರ್ಥದ ಸಂಚುಕಾರರ ಹಾವಳಿಯಿಂದ ಪಾರಾಗಬೇಕಾಗಿದೆ ಪ್ರಜಾಪ್ರಭುತ್ವ. ಜನತೆಯ ಅರಿವಿನ ಮಟ್ಟ ಹೆಚ್ಚಿದರೆ, ವಿಚಾರಶಕ್ತಿ ಅವರಲ್ಲಿ ಮೊಳೆತರೆ, ಆಗ ಮಾತ್ರ ಈ ಅಪಾಯದಿಂದ ದೂರವಾಗಬಹುದು.

ಜನವೇ ಎಲ್ಲ ವಿಷಯಗಳಲ್ಲೂ ರಾಷ್ಟ್ರದ ಪರಮಪ್ರಭು ಎಂಬ ಭಾವನೆ ಆಚರಣೆಯಲ್ಲಿ ದೋಷಪೂರಿತವೆಂದು ಕಂಡು ಬರುತ್ತಿದೆ. ಜನ ಜವಾಬ್ದಾರಿಯುತವಾಗಿ ವರ್ತಿಸುವುದೆ? ತಾನು ನಡೆಸುವ ನಡೆವಳಿಕೆಯ ಪರಿಣಾಮವೇನೆಂಬುದನ್ನು ಕುರಿತು ಆಲೋಚಿಸುವುದೆ? ಜನ ತಪ್ಪುಹಾದಿ ಹಿಡಿದರೆ

ಆ ತಪ್ಪುಹಾದಿಯ ದುಷ್ಪರಿಣಾಮಗಳಿಗೆ ಹೊಣೆ ಯಾರು? ಯಾರನ್ನು ಪ್ರಶ್ನಿಸಬೇಕು? ಉದ್ರೇಕ ಅಥವಾ ಅತಿರೇಕದ ಪರಿಣಾಮವಾಗಿ ಜನ ಹೀನಕಾರ್ಯವೊಂದನ್ನು ನಡೆಸಿದರೆ ದಂಡನೆ ಏನು? ಯಾರಿಗೆ ದಂಡನೆ? ಇದು ಪ್ರಜಾಪ್ರಭುತ್ವದ ಆಚರಣೆಯಲ್ಲಿ ಗೋಚರವಾಗಿರುವ ಒಂದು ನ್ಯೂನತೆ. ಇದಕ್ಕೆ ಪರಿಹಾರ, ಜನಕ್ಕೆ ಸರಿಯಾದ ತಿಳಿವಳಿಕೆ ಕೊಡುವುದು. ಒಂದು ವ್ಯಕ್ತಿಯ ನಿರಂಕುಶಾಧಿಕಾರವನ್ನು ಜನ ಪ್ರತಿಭಟಿಸುವಂತೆ, ಜನಸಮೂಹ ಸ್ವೇಚ್ಛಾವರ್ತನೆಯಿಂದ ನಡೆದರೆ ಅದನ್ನು ಪ್ರತಿಭಟಿಸಲು ವ್ಯಕ್ತಿಗೂ ಸ್ವಾತಂತ್ರ್ಯವುಂಟು. ಪ್ರಜಾತ್ತೆಯಲ್ಲಿ ಜನ ಬುದ್ಧಿಹೀನವಾಗಿದ್ದಾರೆ ನಿರಂಕುಶಾಧಿಕಾರ ಸ್ವತಸ್ಸಿದ್ಧ. ತಿಳಿವಳಿಕೆ ಇಲ್ಲದ ಜನ ತೋಳನ ಆಡಳಿತಕ್ಕೆ ಅಧೀನವಾದ ಕುರಿಮಂದೆ.

ಹೊಣೆಗಾರಿಕೆಯ ಹೊರೆಯಿಲ್ಲದೆ ನಿರ್ಭಯವಾಗಿ ಎಂತು ಬೇಕಾದರೂ ಜನಸ್ತೋಮ (The crowd) ನಡೆಯಬಹುದು. ಇದೊಂದು ನ್ಯೂನತೆ ಪ್ರಜಾಪ್ರಭುತ್ವದಲ್ಲಿ.

ಮತ್ತೊಂದು ಕೊರತೆಯಿದೆ. ಅದು ಸಾಮಾಜಿಕ ಮಟ್ಟವನ್ನು ಅನ್ವಯಿಸಿದ್ದು. ಅಶಿಕ್ಷಿತನೂ ಅಸಂಸ್ಕೃತನೂ ಅಲಸನೂ ಆದವನು ಸುಶಿಕ್ಷಿತ, ಸಂಸ್ಕೃತ, ಚತುರನಷ್ಟೇ ಕೆಲಸ ಮಾಡಬಲ್ಲನೇ? ಇಲ್ಲ. ಒಂದು ಸಾಮೂಹದಲ್ಲ ಬಹು ಸಂಖ್ಯೆಯಲ್ಲಿರುವವರು ಸಾಧಾರಣ ಜನ. ಮೇಧಾವಿಗಳ ಸಂಖ್ಯೆ ಬಹು ಕಡಮೆ. ಸಾಧಾರಣ ಜನ ಆ ಮೇಲ್ಮಟ್ಟವನ್ನು ಮುಟ್ಟಲಾರರು. ಆ ಮೇಲ್ಮಟ್ಟದ ಜನಕ್ಕೆ ಒಂದು ಉತ್ತಮ ಸ್ಥಾನ ಕೊಡಲು ಸಹಿಸಲೂ ಆರರು. ತಮ್ಮ ಬುದ್ಧಿಮಟ್ಟದಲ್ಲೇ ಕಾರ್ಯನಿರ್ವಹಣೆ ನಡೆಯಲು ಇಚ್ಛಿಸುವರು. ತಮಗೆ

ಅರಿವಿಲ್ಲದ ಮತ್ತು ಪಾರಿಭಾಷಿಕ ಅಂಶಗಳ ವಿಷಯವಾಗಿಯೂ (Scientific and technical matters) ಅನೇಕ ಸಂದರ್ಭಗಳಲ್ಲಿ ತಮ್ಮ ಅಭಿಪ್ರಾಯ ಕೊಡಲು ಹೊರಡುವರು. ಇದರಿಂದ ಸಮರ್ಥತೆಗೆ (Efficiency) ಧಕ್ಕೆ ಬಂದಂತಲ್ಲವೆ?

ಬಹುಮತವೇ ಪ್ರಮಾಣವಾಗಿರುವ ಪ್ರಜಾಪ್ರಭುತ್ವದಲ್ಲಿ ಆಡಳಿತ ನಿರ್ವಹಣೆಗೆ ನಿಯೋಜಿತರಾಗುವವರು ಸಾಧಾರಣ ಜನ; ಪರಿಣತರಲ್ಲ, ಮೇಧಾವಿಗಳೂ ಅಲ್ಲ. ತಮಗೆ ಸಾಮರ್ಥ್ಯವಿಲ್ಲದ ಸ್ಥಾನದಲ್ಲಿ ನಿಂತು, ಸೂತ್ರವಹಿಸಿ, ರಾಜ್ಯಾಡಳಿತ ನಡೆಸುವ ಹೊಣೆಗಾರಿಕೆ ಸಾಮಾನ್ಯ ಜನದ್ದು. ಸರ್ ಸಿಡ್ನಿ ಲೌ (Sir Sidney Low) ಹೇಳುವಹಾಗೆ, "ಒಂದು ಖಜಾನೆಯ ಗುಮಾಸ್ತನಾಗಲು ಅರ್ಹತೆ ಬೇಕು, ವ್ಯಾಸಂಗ ಬೇಕು. ಆದರೆ ಖಜಾನೆಗಳಿಗೆಲ್ಲಾ ಒಡೆಯನಾದ ಛಾನ್ಸಲರ್ ಆಫ್ ಎಕ್ಸ್‌ಚೆಕರ್ ಆಗುವವನಿಗೆ ಅರ್ಹತೆಯೇನೂ ಬೇಕೆಲ್ಲ, ಚುನಾಯಿತನಾದರೆ ಸಾಕು." ಇದರಿಂದ ತೃಪ್ತಿಕರವೂ ಪರಿಣತವೂ ಆದ ಆಡಳಿತ ಏರ್ಪಡಬಲ್ಲುದೇ ಎನ್ನುವುದೊಂದು ಸಮಸ್ಯೆ.

ಜನದ ಸ್ವಭಾವ ಹಿಂಡಿನ ಸ್ವಭಾವದಂತೆ. ವಿಚಾರಶೂನ್ಯತೆಯಿಂದ ತಾನು ನಂಬಿದ ಅಥವಾ ವಿಶ್ವಾಸವಿಟ್ಟ ನಾಯಕನನ್ನು ಹಿಂಬಾಲಿಸುವುದು. ಆ ನಾಯಕನಿಗಾಗಿ ಏನನ್ನು ಮಾಡಲೂ ಸಿದ್ಧ. ಈ ಅಂಧಶ್ರದ್ಧೆಯ ಅತಿರೇಕ ಹಿಂಸಾಕೃತ್ಯಗಳಿಗೂ ಅವಕಾಶವಿತ್ತಿರುವುದು ಆಶ್ಚರ್ಯವೇನಲ್ಲ. ಸಮಾಜದ ಗುಂಪುಗಳ ಅತಿರೇಕ ವರ್ತನೆ ಮದ್ಯಪಾನದಿಂದ ಮತ್ತರಾದವರ ವರ್ತನೆಯಂತೆ ಜ್ಞಾನಶೂನ್ಯ. ಇಂತಹ ಅಪಾಯದಿಂದ ಪಾರಾಗುವುದೆಂತು, ಎಂಬುದರ ಕಡೆಗೂ ಜನ ಗಮನ ಕೊಡಬೇಕು.

ಜನಾಭಿಪ್ರಾಯ ಅಂಧಶ್ರದ್ಧೆಯಿಂದೆ ಕೊಡುವಂತಾದರೆ,

ನುರಿತ ರಾಜಕವಿದನಿಗೆ ಸ್ಥಾನವೆಲ್ಲಿ ಬಂತು? ಅವನ ಅನುಭವ ಸಿದ್ಧವಾದ ವಾದಕ್ಕೆ ಕಿವಿಗೊಡುವವರಾರು? ಅಂದಮೇಲೆ ಅನುಭವಿಗಳು ಮುಂದೆ ಬರುವುದಿಲ್ಲ. ಹಾಗೆ ಮುಂದೆ ಬಂದರೂ ಜನವಾಣಿಯನ್ನಾಲಿಸಿ, ಅದು ಎಷ್ಟೇ ನ್ಯೂನತೆಯಿಂದ ಕೂಡಿರಲಿ, ಅದನ್ನೇ ಅನುಸರಿಸುವರು. ಜನದ ಬೆಂಬಲವಿಲ್ಲದಿದ್ದರೆ ಅವರೇನು ಮಾಡಿಯಾರು? ನಾಯಕಪಟ್ಟ ಬೇಕಾದರೆ ಜನ ಹೇಳಿದಂತೆ ಕೇಳಲೇಬೇಕು!

ಇಷ್ಟೆಲ್ಲಾ ದೋಷವಿದ್ದರೂ ಪ್ರಜಾಸತ್ತೆಯೇ ಜನಾದರಣೀಯ. ಪ್ರಜಾಸತ್ತಾತ್ಮಕ ಸರ್ಕಾರವೇ ಇತರ ವಿಧ ಆಡಳಿತಕ್ಕಿಂತ ಒಳಿತು. ಪ್ರಜಾಭಿಪ್ರಾಯವನ್ನು ಪಡೆದು ಅದರ ಇಂಗಿತದಂತೆ ನಡೆಯುವುದೇ ಸಾಧು. ಆದರೆ ಪ್ರಜಾಭಿಪ್ರಾಯ ಮೂಡಿ ಬೆಳೆದು ಬದುಕುವಂತೆ ಮಾಡಬೇಕು; ಸಜೀವವಾಗುವಂತೆ ಮಾಡಬೇಕು. ಜನ ಚೈತನ್ಯಗೊಂಡು ಹುರುಪಿನಿಂದ ನಡೆಯುವಂತೆ ಮಾಡಬೇಕು. ಅಷ್ಟೇ ಅಲ್ಲ. ಅರಿವಿಲ್ಲದ ಅಂಧಕಾರದ ಮಬ್ಬಿನಲ್ಲಿ ಎಡವುತ್ತ ಮುಗ್ಗರಿಸುತ್ತ ಇರುವ ಜನಕ್ಕೆ ಬೆಳಕು ತೋರಲು ಮತ್ತು ನೀತಿಯ ಹಾದಿಯಲ್ಲಿ ಜನವನ್ನು ನಡೆಸಲು ಮಹಾತ್ಮ ಗಾಂಧಿಯಂತಹ ನಾಯಕರು ಬೇಕು. ಜೀವನ ಬರಿಯ ಅಶನ ವಸತಿ ಮಾತ್ರವಲ್ಲ, ಒಲವಿನ ದಶ್ವದಲ್ಲಿ, ಅಹಿಂಸೆಯ ವಾತಾವರಣದಲ್ಲಿ, ಸತ್ಯದ ನಡೆಯಲ್ಲಿ, ಸಮತೆಯ ಕಟ್ಟನಲ್ಲಿ ಬಾಳುವುದೇ ಜೀವನದ ಸತ್ಯಸ್ವರೂಪ. ಅದನ್ನು ಸಾಧಿಸಲು ಪ್ರಜಾಭಿಪ್ರಾಯದಿಂದ ಕೂಡಿದ ಪ್ರಜಾಸರ್ಕಾರಕ್ಕಿಂತ ಉತ್ತಮ ಮಾರ್ಗವೇನಿದೆ?